ಗುರುವಾರ, ಜುಲೈ 7, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದಲೈಲಾಮಾ ಹುಟ್ಟುಹಬ್ಬ
ನವದೆಹಲಿಯಲ್ಲಿ ಬುಧವಾರ ಟಿಬೆಟ್ ಧರ್ಮಗುರು ದಲೈಲಾಮಾ ಅವರ 87ನೇ ಹುಟ್ಟುಹಬ್ಬದ ಆಚರಣೆ ವೇಳೆ ಬಾಲಕನೊಬ್ಬ ಅವರ ಭಾವಚಿತ್ರ ಪ್ರದರ್ಶಿಸಿದ




ವಾಹನ ದಟ್ಟಣೆ ತಡೆಗೆ ಕ್ರಮ, ನಾಳೆಯಿಂದ ಹೊಸ ಮಾರ್ಗದಲ್ಲಿ ಸಂಚಾರ

ಹೆಬ್ಬಾಳ ಜಂಕ್ಷನ್: ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ವಾಹನ ದಟ್ಟಣೆ ತೀವ್ರವಾಗಿದ್ದು, ಪ್ರಮುಖ ವೃತ್ತಗಳಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿಯಿದೆ. ಕೋವಿಡ್ ನಂತರದ ದಿನಗಳಲ್ಲಿ ಸ್ವಂತ ವಾಹನಗಳಲ್ಲಿ ಓಡಾಟ ನಡೆಸುವವರ ಸಂಖ್ಯೆ ಏರಿದ್ದು, ಸುಗಮ ಸಂಚಾರ ಸಾಧ್ಯವಾಗುತ್ತಿಲ್ಲ. ಪೊಲೀಸರೂ ದಟ್ಟಣೆ ನಿಯಂತ್ರಿಸಲು ಹರಸಾಹಸ ಪಡುತ್ತಿದ್ದಾರೆ.

ಹೆಬ್ಬಾಳ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ ತಡೆಗೆ ಬೆಂಗಳೂರು ಸಂಚಾರ ಪೊಲೀಸರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬಿಎಂಆರ್‌ಸಿಎಲ್ ಹಾಗೂ ಎನ್‌ಎಚ್‌ಎನಿಂದ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ತಂದಿದ್ದಾರೆ. ಈ ಜಂಕ್ಷನ್‌ನಲ್ಲಿ ಹೊಸ ವ್ಯವಸ್ಥೆಯು ಶುಕ್ರವಾರದಿಂದ ಪ್ರಾಯೋಗಿಕವಾಗಿ ಜಾರಿಗೆ ಬರಲಿದೆ. ಜಂಕ್ಷನ್‌ನಲ್ಲಿ ಸಂಚಾರ ಪೊಲೀಸರು ಫಲಕ ಅಳವಡಿಸಿದ್ದು, ಜುಲೈ 8ರ ಬೆಳಿಗ್ಗೆ 6ರಿಂದ ವಾಹನ ಸವಾರರು ಹೊಸ ಮಾರ್ಗದಲ್ಲಿ ಸಂಚರಿಸಬೇಕಿದೆ ಎಂದು ಪೊಲೀಸರು ಸೂಚಿಸಿದ್ದಾರೆ. ಹೆಬ್ಬಾಳ ಜಂಕ್ಷನ್‌ನಲ್ಲಿ 24 ಗಂಟೆಯ ಅವಧಿಯಲ್ಲಿ 3,76,368 ವಾಹನಗಳು ಸಂಚರಿಸುತ್ತವೆ.



ಮಾರ್ಗ ಬದಲಾವಣೆ

ಯಲಹಂಕ, ಕೊಡಿಗೇಹಳ್ಳಿ, ಕೆಂಪಾಪುರ, ಜಕ್ಕೂರು ಮತ್ತಿತರ ಕಡೆಯಿಂದ ಸರ್ವಿಸ್ ರಸ್ತೆಯ (ಸೇವಾ ರಸ್ತೆ) ಮೂಲಕ ನಗರಕ್ಕೆ ಬರುವ ವಾಹನಗಳು ನೇರವಾಗಿ ಹೆಬ್ಬಾಳ ಫ್ಲೈಓವರ್ ಪ್ರವೇಶಿಸುವಂತಿಲ್ಲ. ಹೆಬ್ಬಾಳ ವೃತ್ತದ ಲೂಪ್ ರ‍್ಯಾಂಪ್ ಬಳಸಿ ನಗರಕ್ಕೆ ಬರಬೇಕಿದೆ.

ವಿಮಾನ ನಿಲ್ದಾಣದ ಎಲಿವೇಟೆಡ್ ಕಾರಿಡಾರ್‌ನಿಂದ ಬೆಂಗಳೂರು ನಗರದ ಕಡೆಗೆ ಬರುವ ಬಸ್‌ಗಳು ಹೆಬ್ಬಾಳ ವೃತ್ತದಲ್ಲಿ ಬಸ್ ಪ್ರಯಾಣಿಕರನ್ನು ನಿಗದಿಪಡಿಸಿದ ಬಸ್ ಬೇನಲ್ಲಿ ಲೂಪ್ ರ‍್ಯಾಂಪ್‌ಗಿಂತ ಮೊದಲೇ ಹತ್ತಿಸಿಕೊಳ್ಳಬೇಕು ಎಂದು ಪೊಲೀಸರು ಸೂಚಿಸಿದ್ದಾರೆ. ಏರ್‌ಪೋರ್ಟ್ ಎಕ್ಸ್‌ಪ್ರೆಸ್ ಹೆದ್ದಾರಿಯಿಂದ ನಗರಕ್ಕೆ ಬರುವ ವಾಹನಗಳು ಮೊದಲಿನಂತೆಯೇ ಹೆಬ್ಬಾಳ ಫ್ಲೈಓವರ್ ಮೂಲಕ ಬೆಂಗಳೂರು ನಗರ ಪ್ರವೇಶಿಸಬೇಕು.

ಏರ್‌ಪೋರ್ಟ್‌ನ ಎಕ್ಸ್‌ಪ್ರೆಸ್ ಹೆದ್ದಾರಿಯಿಂದ ಕೆ.ಆರ್.ಪುರಂ, ತುಮಕೂರು ಕಡೆಗೆ ತೆರಳುವ ವಾಹನಗಳು ಮೊದಲಿನಂತೆ ಸರ್ವಿಸ್ ರಸ್ತೆಯ ಮೂಲಕ ಹೋಗಲು ಅವಕಾಶ ಕಲ್ಪಿಸಲಾಗಿದೆ. ಏರ್‌ಪೋರ್ಟ್ ಎಕ್ಸ್‌ಪ್ರೆಸ್ ಹೆದ್ದಾರಿ ಮೂಲಕ ಕೆಂಪಾಪುರಕ್ಕೆ ತೆರಳುವವರು ವಿದ್ಯಾಶಿಲ್ಪ/ಯಲಹಂಕ ಬೈಪಾಸ್ ಬಳಿ ಸರ್ವಿಸ್ ರಸ್ತೆಯನ್ನು ಬಳಸಬೇಕಿದೆ ಎಂದು ಪೊಲೀಸರು ತಿಳಿಸಿದರು.



ನಗರದ ಹೆಬ್ಬಾಳ ಮೇಲ್ಸೇತುವೆಯಲ್ಲಿ ವಾಹನ ಸಂಚಾರ ದಟ್ಟಣೆ ತಡೆಯಲು ಶುಕ್ರವಾರದಿಂದ ಪ್ರಾಯೋಗಿಕವಾಗಿ ಜಾರಿಗೆ ಬರಲಿರುವ ಹೊಸ ಸಂಚಾರ ವ್ಯವಸ್ಥೆಗೆ ಪೂರ್ವಭಾವಿಯಾಗಿ ಪೊಲೀಸರು ಸಿದ್ಧತೆ ನಡೆಸಿದರು – ಪ್ರಜಾವಾಣಿ ಚಿತ್ರ

ಹೆಬ್ಬಾಳ ಜಂಕ್ಷನ್‌ನಲ್ಲಿ 24 ಗಂಟೆಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆ

ಮಾರ್ಗ		ವಾಹನ ದಟ್ಟಣೆ	
ಇಂದ	ವರೆಗೆ	ವಾಹನ ಸಂಖ್ಯೆ	ಪಿಸಿಯು (ಪರ್ ಕಾರ್ ಯುನಿಟ್)
ಮೇಕ್ರಿ ವೃತ್ತ	ಕೆ.ಆರ್.ಪುರಂ	33,574	35,360
	ಯಲಹಂಕ	55,721	59,824
	ತುಮಕೂರು	7,790	8,004
ಕೆ.ಆರ್.ಪುರಂ	ಯಲಹಂಕ	22,825	26,131
	ಮೇಕ್ರಿ ವೃತ್ತ	15,577	16,408
	ತುಮಕೂರು	47,081	60,980
ಯಲಹಂಕ	ಮೇಕ್ರಿ ವೃತ್ತ	53,498	55,600
	ಕೆ.ಆರ್.ಪುರಂ	42,980	47,069
	ತುಮಕೂರು	23,644	25,733
ತುಮಕೂರು	ಮೇಕ್ರಿ ವೃತ್ತ	4,514	5,096
	ಕೆ.ಆರ್.ಪುರಂ	49,445	61,877
	ಯಲಹಂಕ	19,718	24,017
ಜಂಕ್ಷನ್‌ನಲ್ಲಿ ಒಟ್ಟು ವಾಹನಗಳು		3,76,368	4,26,098

ಹೆಬ್ಬಾಳ ವೃತ್ತದಲ್ಲಿ ಬಸ್ ನಿಲುಗಡೆಗೆ ಸ್ಥಳವನ್ನೂ ಬದಲಾವಣೆ ಮಾಡಲಾಗಿದೆ. ರಸ್ತೆ ದಾಟುವ ಪಾದಚಾರಿಗಳಿಗೆ ಅನುಕೂಲ ಆಗುವಂತೆಯೇ ಕ್ರಮ ತೆಗೆದುಕೊಳ್ಳಲಾಗಿದೆ. ಅಡ್ಡಾದಿಡ್ಡಿಯಾಗಿ ವಾಹನಗಳ ನಿಲುಗಡೆ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಡಾ.ಬಿ.ಆರ್.ರವಿಕಾಂತೇಗೌಡ ಹೇಳಿದರು.

ಹೊಸ ಮಾರ್ಗದಲ್ಲಿ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಿ ವಾಹನ ದಟ್ಟಣೆ ನಿಯಂತ್ರಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದು.

ಡಾ.ಬಿ.ಆರ್.ರವಿಕಾಂತೇಗೌಡ, ಜಂಟಿ ಪೊಲೀಸ್ ಆಯುಕ್ತ



ಸಂಚಾರ ದಟ್ಟಣೆ ಇನ್ನಷ್ಟು ಹೆಚ್ಚಾಗುವ ಆತಂಕ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ಬಳಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಬಿಬಿಎಂಪಿ ಮತ್ತು ಪೊಲೀಸ್ ಅಧಿಕಾರಿಗಳು ಕೈಗೊಂಡ ಕ್ರಮಗಳು ಸಮಸ್ಯೆಗೆ ಪರಿಹಾರವಾಗುವ ಬದಲು ಹೊಸ ಸವಾಲು ಹುಟ್ಟುಹಾಕುವ ಆತಂಕವನ್ನು ನಗರ ಸಂಚಾರ ತಜ್ಞರು ವ್ಯಕ್ತಪಡಿಸಿದ್ದಾರೆ.

ಹೊಸ ನಿಯಮಗಳ ಪ್ರಕಾರ, ವಿಮಾನ ನಿಲ್ದಾಣ ಕಡೆಯಿಂದ ಮೇಲ್ಸೇತುವೆ ಮೇಲೆ ಬರುವ ವಾಹನಗಳು ಮಾತ್ರ ಹೆಬ್ಬಾಳ ಮೇಲ್ಸೇತುವೆಯನ್ನು ನೇರವಾಗಿ ಪ್ರವೇಶಿಸಬಹುದು. ಯಲಹಂಕ, ಕೊಡಿಗೇಹಳ್ಳಿ ಸೇರಿ ಬೆಂಗಳೂರು ಉತ್ತರದ ಬಡಾವಣೆಗಳಿಂದ ಬರುವ ವಾಹನಗಳು ಮೇಲ್ಸೇತುವೆ ಪ್ರವೇಶಿಸುವಂತಿಲ್ಲ. ಕೆಳಗೆ ಸಾಗುವ ರಸ್ತೆ ಅತ್ಯಂತ ಕಿರಿದಾಗಿದ್ದು, ತುಮಕೂರು ರಸ್ತೆ ಕಡೆಗೆ ಹೋಗುವ ವಾಹನಗಳೂ ಇದೇ ಕೆಳ ಮಾರ್ಗದಲ್ಲಿ ಸಂಚರಿಸಬೇಕು.

‘ಅಲ್ಲಿ ವಿಪರೀತ ದಟ್ಟಣೆಯಾಗಲಿದೆ. ಕೆಳ ರಸ್ತೆಯಲ್ಲಿ ಬರುವ ವಾಹನಗಳು ನಗರ ಪ್ರವೇಶಿಸಬೇಕೆಂದರೆ ಸದ್ಯ ಇರುವ ಸಣ್ಣ ಲೂಪ್ ಬಳಸಬೇಕು. ಲೂಪ್‌ನಲ್ಲಿ ಸಾಗುವ ವಾಹನಗಳು ವಿಮಾನ ನಿಲ್ದಾಣ ಕಡೆಯಿಂದ ನೇರವಾಗಿ ಬರುವ ವಾಹನಗಳ ಸಾಲನ್ನೇ ಸೇರಿಕೊಳ್ಳುತ್ತವೆ. ಮೇಲ್ಸೇತುವೆ ಮೇಲೆ ಎಲ್ಲ ವಾಹನಗಳೂ ಒಟ್ಟಾಗುವುದರಿಂದ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶ ಈಡೇರಿದಂತೆ ಆಗುವುದಿಲ್ಲ. ಬದಲಿಗೆ ದಟ್ಟಣೆ ಹೆಚ್ಚಾಗುವ ಸಾಧ್ಯತೆಯೇ ಇದೆ’ ಎನ್ನುತ್ತಾರೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ.

‘ಕೆಂಪಾಪುರ ಸುತ್ತಮುತ್ತಲ ಬಡಾವಣೆಗಳಿಗೆ ಹೋಗುವ ವಾಹನಗಳು ಯಲಹಂಕ ಬಳಿಯೇ ಮೇಲ್ಸೇತುವೆಯಿಂದ ಇಳಿದು ಬೈಪಾಸ್ ರಸ್ತೆಯಲ್ಲಿ ಸಾಗಲು ಕನಿಷ್ಠ ನಾಲ್ಕು ಸಿಗ್ನಲ್‌ಗಳನ್ನು ದಾಟಬೇಕಾಗುತ್ತದೆ. ಒಟ್ಟಾರೆ ಯಾರಿಗೂ ಅನುಕೂಲವಾಗದ ಕ್ರಮಗಳನ್ನು ಅಧಿಕಾರಿಗಳು ಕೈಗೊಂಡಿದ್ದಾರೆ’ ಎಂದರು.

ನಾಲ್ಕು ಜಂಕ್ಷನ್: ಸುಗಮ ಸಂಚಾರಕ್ಕೆ ತುರ್ತು ಕ್ರಮ

ಬೆಂಗಳೂರು: ಸಾರಕ್ಕಿ ಜಂಕ್ಷನ್, ಜಯದೇವ ಮೇಲ್ಸೇತುವೆ, ಸಿಲ್ಕ್ ಬೋರ್ಡ್ ಜಂಕ್ಷನ್, ಇಬ್ಬಲೂರು ಜಂಕ್ಷನ್‌ಗಳಲ್ಲಿ ಸುಗಮ ಸಂಚಾರಕ್ಕೆ ಅಗತ್ಯವಿರುವ ಕೆಲಸಗಳನ್ನು ತುರ್ತಾಗಿ ಪ್ರಾರಂಭಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಬಿಎಂಆರ್‌ಸಿಎಲ್‌ಗೆ ಸಂಬಂಧಿಸಿದ ಬಹುತೇಕ ರಸ್ತೆಗಳನ್ನೇ ತಪಾಸಣೆ ಮಾಡಲಾಗಿದೆ. ಕಾಮಗಾರಿ ಮುಗಿದ ಹಾಗೂ ನಡೆಯುತ್ತಿರುವ ರಸ್ತೆಗಳಲ್ಲಿ ಸುಗಮ ಸಂಚಾರಕ್ಕೆ ಎಲ್ಲ ರೀತಿಯ ಕ್ರಮ ಕೈಗೊಳ್ಳಲು ಆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಲ್ಲದೆ, ಚರಂಡಿ ಹಾಗೂ ರಾಜಕಾಲುವೆಗಳಲ್ಲಿ ಹೂಳು ತೆಗೆದು, ಮಳೆ ನೀರು ಹರಿಯಲು ಯಾವುದೇ ರೀತಿಯ ಅಡೆ–ತಡೆ ಇಲ್ಲದಂತೆ ನೋಡಿಕೊಳ್ಳಲು ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್‌ಗೆ ಸೂಚಿಸಲಾಗಿದೆ’ ಎಂದು ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

ಪ್ರತಿ ವಾರದ ಈ ತಪಾಸಣೆಯಿಂದ ನಗರದಲ್ಲಿ ಉಂಟಾಗುತ್ತಿರುವ ರಸ್ತೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ಎಲ್ಲ ಇಲಾಖೆಗಳ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಇರುವುದರಿಂದ ಕಾಮಗಾರಿಗಳನ್ನು ಸಮನ್ವಯದಿಂದ ಪೂರೈಸಲು ಸಾಧ್ಯವಾಗುತ್ತಿದೆ. ನಗರದಲ್ಲಿ ಸಂಚಾರದಟ್ಟಣೆಗೆ ರಸ್ತೆ ಅವ್ಯವಸ್ಥೆಯೂ ಒಂದು ಕಾರಣ. ರಸ್ತೆಗಳು ಸರಿಯಾದರೆ ಶೇ 20ರಷ್ಟು ವಾಹನ ದಟ್ಟಣೆ ಕಡಿಮೆಯಾಗುತ್ತದೆ ಎಂದರು.

ಎಲ್ಲೆಲ್ಲಿ ಏನೇನು ಕ್ರಮ?

ಸಾರಕ್ಕಿ ಜಂಕ್ಷನ್: ಸಿಂಧೂರ ರಸ್ತೆ ಕಡೆಯಿಂದ ಸಾರಕ್ಕಿ ಜಂಕ್ಷನ್ ಕಡೆ ರಸ್ತೆಯಲ್ಲಿ ಪಾಲಿಕೆ ವತಿಯಿಂದ ಅಳವಡಿಸಿರುವ ರಸ್ತೆಯ ನಾಮಫಲಕ, ಬೆಸ್ಕಾಂ ಅಳವಡಿಸಿರುವ ಕಾಂಕ್ರೀಟ್ ಹಾಗೂ ಝೀರೋ ಟಾಲರೆನ್ಸ್ ಬೋರ್ಡ್ ಸ್ಥಳಾಂತರ. ಪಾದಚಾರಿ ಮಾರ್ಗವನ್ನು ಸರಿಪಡಿಸಿ ಎಡಭಾಗಕ್ಕೆ ಹೋಗುವ ವಾಹನಗಳಿಗೆ ಅವಕಾಶ. ಬಿಎಂಆರ್‌ಸಿಎಲ್ ಪಿಲ್ಲರ್‌ಗೆ ಅಳವಡಿಸಿರುವ ಸಿಗ್ನಲ್ ಲೈಟ್ ಎತ್ತರವನ್ನು ಇನ್ನೂ ಮೂರು ಅಡಿ ಎತ್ತರಿಸುವುದು. ಸಾರಕ್ಕಿ ಸಿಗ್ನಲ್‌ನಿಂದ ಕನಕಪುರ ಮುಖ್ಯರಸ್ತೆಯಲ್ಲಿ ಜರಗನಹಳ್ಳಿ ಕಡೆಯ ಎಡಭಾಗದ ಪಾದಚಾರಿ ಮಾರ್ಗಕ್ಕೆ ಗ್ರಿಲ್. ಕೋಣನಕುಂಟೆ ಕಡೆಯಿಂದ ಸಾರಕ್ಕಿ ಜಂಕ್ಷನ್ ಬಳಿ ರಿಂಗ್ ರಸ್ತೆ ಕಡೆಗೆ ಸಿಗ್ನಲ್ ಮುಕ್ತ ಎಡ ತಿರುವು. ಇಲಿಯಾಜ್ ನಗರ ಕಡೆಯಿಂದ ಸಾರಕ್ಕಿ ಜಂಕ್ಷನ್ ಬಳಿ ಬನಶಂಕರಿ ಕಡೆಗೆ ಮುಕ್ತ ಎಡತಿರುವು.

ಜಯದೇವ ಮೇಲುಸೇತುವೆ: ಜಯದೇವ ಮೇಲುಸೇತುವೆ ಈಸ್ಟ್ ಎಂಡ್ ಮುಖ್ಯ ರಸ್ತೆ ಮೇಲ್ಮೈ ದುರಸ್ತಿ. ನೀರು ಸರಾಗ ಹರಿಯುವಂತೆ ಮಾಡಲು ಕಾಮಗಾರಿ. ಸರ್ವಿಸ್ ರಸ್ತೆಯಲ್ಲಿ ಮೆಟ್ರೊ ಕಾಮಗಾರಿ ಸಾಮಗ್ರಿ ತೆರವು.

ಸಿಲ್ಕ್ ಬೋರ್ಡ್ ಜಂಕ್ಷನ್: ಬಿ.ಟಿ.ಎಂ ಲೇಔಟ್-ಸಿಲ್ಕ್ ಬೋರ್ಡ್ ಕಡೆಗೆ ಮಳೆ ನೀರು ಸರಾಗವಾಗಿ ಹರಿಯಲು ಎರಡು ಬದಿ ಚರಂಡಿ ದುರಸ್ತಿ. ಹೊಸೂರು ರಸ್ತೆ-ಬಿಟಿಎಂ ರಸ್ತೆ ಕಡೆಗೆ ಹೋಗುವ ಸ್ಥಳದಲ್ಲಿ ರಾಜಕಾಲುವೆಯನ್ನು ಸ್ಲ್ಯಾಬ್ ಮಟ್ಟಕ್ಕೆ ಇಳಿಸುವುದು ಮತ್ತು ಮುಕ್ತ ಎಡ ತಿರುವಿಗೆ ಕ್ರಮ. ಸಿಲ್ಕ್ ಬೋರ್ಡ್ ಕಡೆಯಿಂದ ಬಿ.ಟಿ.ಎಂ ಲೇಔಟ್ ಬಸ್ ನಿಲ್ದಾಣದವರೆಗೆ ಬಿಎಂಆರ್‌ಸಿಎಲ್‌ನಿಂದ ರಸ್ತೆ ಮೇಲ್ಮೈ ದುರಸ್ತಿ. ಸಿಲ್ಕ್ ಬೋರ್ಡ್ ಜಂಕ್ಷನ್ ಬಸ್ ನಿಲ್ದಾಣದಿಂದ ಎಚ್.ಎಸ್.ಆರ್ ಲೇಔಟ್ ಸರ್ವಿಸ್ ರಸ್ತೆಯ ಪಾದಚಾರಿ ಸ್ಕೈವಾಕ್ ನಿರ್ಮಾಣ. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಬಸ್ ನಿಲ್ದಾಣದಲ್ಲಿ ಸಂಚಾರ ದಟ್ಟಣೆಯಾಗದಂತೆ ಬಿಎಂಟಿಸಿಯಿಂದ ವ್ಯವಸ್ಥಿತ ವಿನ್ಯಾಸ.

ಇಬ್ಬಲೂರು ಜಂಕ್ಷನ್: ಇಬ್ಬಲೂರು ಜಂಕ್ಷನ್‌ನಿಂದ ಸರ್ಜಾಪುರ ರಸ್ತೆಯಲ್ಲಿ ಮಳೆನೀರು ನಿಲ್ಲದಂತೆ ಕ್ರಮ. ಸರ್ಜಾಪುರ ರಸ್ತೆಯಿಂದ ಬಂದು ಹೊರ ವರ್ತುಲ ರಸ್ತೆಗೆ ಹೋಗುವ ಸಂಚಾರಕ್ಕೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲು ವೃತ್ತದ ಮರು ವಿನ್ಯಾಸ. ಹರಳೂರು ಜಂಕ್ಷನ್‌ನಿಂದ ಇಬ್ಬಲೂರು ಜಂಕ್ಷನ್‌ವರೆಗೆ ಎರಡೂ ಬದಿಗಳಲ್ಲಿ ಪಾದಚಾರಿ ಮಾರ್ಗ.

ಸದಸ್ಯತ್ವ ಶುಲ್ಕ ಇಳಿಕೆ ಸೇರಿ 18 ಅಂಶಗಳು ಹೊಸದಾಗಿ ಜಾರಿ

ಕಸಾಪ: ಬೈ–ಲಾ ತಿದ್ದುಪಡಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೈ–ಲಾ ತಿದ್ದುಪಡಿಗೆ ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿಯಿಂದ ಅನುಮೋದನೆ ದೊರೆತಿದೆ. ಇದರಿಂದಾಗಿ ಸದಸ್ಯತ್ವ ಶುಲ್ಕ ಇಳಿಕೆ, ಸ್ಮಾರ್ಟ್ ಕಾರ್ಡ್ ವಿತರಣೆ ಸೇರಿದಂತೆ 18 ಅಂಶಗಳು ಹೊಸದಾಗಿ ಜಾರಿಯಾಗಲಿವೆ.

ಸಾವಿರ ರೂಪಾಯಿಯ ಸದಸ್ಯತ್ವ ಶುಲ್ಕವು (ಕನ್ನಡ ನುಡಿ ಶುಲ್ಕ ₹ 500 ಸಹಿತ) ₹ 250ಕ್ಕೆ ಇಳಿಕೆಯಾಗಲಿದೆ. ಗುರುತಿನ ಚೀಟಿಯನ್ನು ಸ್ಮಾರ್ಟ್‌ಕಾರ್ಡ್ ರೂಪದಲ್ಲಿ ವಿತರಿಸಲಾಗುತ್ತದೆ. ಇದಕ್ಕಾಗಿ ಸ್ಮಾರ್ಟ್‌ಕಾರ್ಡ್ ವೆಚ್ಚ ಮತ್ತು ಸ್ಪೀಡ್ ಪೋಸ್ಟ್ ಅಂಚೆ ವೆಚ್ಚ ₹150 ಪಾವತಿಸಬೇಕಾಗುತ್ತದೆ. ಸದಸ್ಯತ್ವ ಪಡೆಯಲು ಪ್ರಾಥಮಿಕ ಶಿಕ್ಷಣವನ್ನು ವಿದ್ಯಾರ್ಹತೆಯಾಗಿ ನಿಗದಿಪಡಿಸಲಾಗಿದೆ. ಜಾನಪದ, ನೃತ್ಯ, ಸಂಗೀತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕಲಾವಿದರು, ಕೃಷಿಕರು, ಕುಶಲ ಕರ್ಮಿಗಳು, ಕಾರ್ಮಿಕರು, ಇನ್ನಿತರೆ ಸಾಮಾನ್ಯ ವ್ಯಕ್ತಿಗಳು ಹಾಗೂ ಕನ್ನಡ ನಾಡು, ನುಡಿ, ನೆಲ, ಜಲಕ್ಕಾಗಿ ಶ್ರಮಿಸಿದವರಿಗೆ ವಿದ್ಯಾರ್ಹತೆಯಿಂದ ವಿನಾಯಿತಿ ನೀಡಲಾಗುತ್ತದೆ.

‘ಪರಿಷತ್ತಿನ ಬೈ–ಲಾದಲ್ಲಿ ಆಮೂಲಾಗ್ರ ಬದಲಾವಣೆ ತಂದು, ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿಸುವ ನಿಬಂಧನೆಗಳ ತಿದ್ದುಪಡಿಗೆ ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿಯವರು ಅಂಗೀಕರಿಸಿ, ನೋಂದಾಯಿಸಿದ್ದಾರೆ’ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

‘ಪರಿಷತ್ತಿನ ಮುಂದಿನ ಚುನಾವಣೆ 2026ರಲ್ಲಿ ನಡೆಯಲಿದೆ. ಮೊಬೈಲ್ ಆ್ಯಪ್ ಮೂಲಕ ಮತದಾನ ಸೇರಿದಂತೆ ಚುನಾವಣೆಗೆ ಸಂಬಂಧಿಸಿದಂತೆ 2025ರಲ್ಲಿ ತಿದ್ದುಪಡಿ ತರಲಾಗುವುದು. ಆನ್‌ಲೈನ್ ಮೂಲಕ ಸದಸ್ಯತ್ವ ನೋಂದಣಿಗೆ ಆ್ಯಪ್ ಸಿದ್ಧಗೊಂಡಿದೆ. ಆ್ಯಪ್ ಮತ್ತು ಪರಿಷ್ಕೃತ ಜಾಲತಾಣವನ್ನು (ವೆಬ್‌ಸೈಟ್) ಶೀಘ್ರದಲ್ಲಿಯೇ ಲೋಕಾರ್ಪಣೆ ಮಾಡಲಾಗುವುದು’ ಎಂದು ತಿಳಿಸಿದ್ದಾರೆ.

ಹೊಸ ಯೋಜನೆಗಳು

- ‘ಕನ್ನಡ ಶಾಲೆಗಳನ್ನು ಉಳಿಸಿ-ಕನ್ನಡ ಬೆಳೆಸಿ’ ಧ್ಯೇಯೋದ್ದೇಶದಡಿ ಕನ್ನಡ ಶಾಲೆಗಳ ಪುನಶ್ಚೇತನ. ಸರ್ಕಾರ, ಶಿಕ್ಷಣ ಸಂಸ್ಥೆಗಳ ಸಹಕಾರದೊಂದಿಗೆ ಶಾಲೆಗಳಿಗೆ ಮೂಲಭೂತ ಸೌಕರ್ಯ.
- ಆ್ಯಪ್ ಮೂಲಕ ಸದಸ್ಯತ್ವ, ವಿಳಾಸ ಬದಲಾವಣೆಗೆ ಅವಕಾಶ.
- ಆರ್ಥಿಕವಾಗಿ ದುರ್ಬಲರಾದ ವಿದ್ಯಾರ್ಥಿಗಳಿಗೆ ಪರಿಷತ್ತಿನಿಂದ ಆರ್ಥಿಕ ನೆರವು. ಗ್ರಾಮಮಟ್ಟಕ್ಕೂ ಪರಿಷತ್ತನ್ನು ಕೊಂಡೊಯ್ಯುವ ಉದ್ದೇಶದಿಂದ ‘ಹೋಬಳಿ ಘಟಕ’ಗಳ ಸ್ಥಾಪನೆ.
- ಯಾವುದೇ ಸದಸ್ಯನ ವರ್ತನೆಯು ಪರಿಷತ್ತಿನ ಘನತೆ, ಗೌರವ ಹಾಗೂ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿ ಕಂಡುಬಂದಾಗ ಅಂತಹವರ ಸದಸ್ಯತ್ವವನ್ನು ನಿಯಮಾನುಸಾರ ಅಮಾನತ್ತುಗೊಳಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ನೀಡುವುದು.

ಟೇಲರ್ ಕನ್ಹಯ್ಯ ಪುತ್ರರಿಗೆ ಸರ್ಕಾರಿ ನೌಕರಿ

ಜೈಪುರ (ಪಿಟಿಐ): ಉದಯಪುರದಲ್ಲಿ ಹತ್ಯೆಗೀಡಾದ ಟೇಲರ್ ಕನ್ಹಯ್ಯಲಾಲ್ ಅವರ ಇಬ್ಬರು ಪುತ್ರರಿಗೆ ಸರ್ಕಾರಿ ನೌಕರಿ ನೀಡಲು ರಾಜಸ್ಥಾನ ಸರ್ಕಾರದ ಸಚಿವ ಸಂಪುಟವು ಬುಧವಾರ ನಿರ್ಧರಿಸಿದೆ.

ಕನ್ಹಯ್ಯ ಲಾಲ್ ಅವರ ಪುತ್ರರಾದ ಯಶ್ ತೇಲಿ ಮತ್ತು ತರುಣ್ ತೇಲಿ ಅವರನ್ನು ಸರ್ಕಾರಿ ಸೇವೆಗೆ ನೇಮಿಸಿಕೊಳ್ಳಲು ಸಂಪುಟವು ನಿರ್ಧರಿಸಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮಮತಾ ಭೂಪೇಶ್ ತಿಳಿಸಿದ್ದಾರೆ.

ಸರ್ಕಾರಿ ನೇಮಕಾತಿ ನಿಯಮಗಳಲ್ಲಿ ಸಡಿಲಿಕೆ ಮಾಡಲಾಗಿದ್ದು, 2008 ಮತ್ತು 2009ರ ರಾಜಸ್ಥಾನ ಅಧೀನ ಕಚೇರಿ ಕ್ಲರ್ಕ್ ಸೇವೆ (ತಿದ್ದುಪಡಿ) ನಿಯಮಗಳ 6 ಸಿ ಅಡಿಯಲ್ಲಿ ಈ ನೇಮಕಾತಿ ಮಾಡಲು ಸಂಪುಟ ನಿರ್ಧಾರ ಕೈಗೊಂಡಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಇಸ್ಕಾನ್, ಅದಮ್ಯ ಚೇತನ ಸಂಸ್ಥೆಗೆ ಆಹಾರ ಪೂರೈಕೆ ಜವಾಬ್ದಾರಿ

ಇಂದಿರಾ ಕ್ಯಾಂಟೀನ್: ಮೂರು ಹೊತ್ತಿನ ಆಹಾರಕ್ಕೆ ₹71

ಪ್ರಜಾವಾಣಿ ವಾರ್ತೆ



ಬೆಂಗಳೂರು: ಇಂದಿರಾ ಕ್ಯಾಂಟೀನ್‌ಗೆ ಆಹಾರ ಪೂರೈಕೆ ಮಾಡಲು ಅದಮ್ಯ ಚೇತನ ಸಂಸ್ಥೆಗೆ ಬಿಬಿಎಂಪಿಯ ಒಂದು ವಲಯ ಮತ್ತು ಇಸ್ಕಾನ್ ಸಂಸ್ಥೆಯಾದ ಅಕ್ಷಯ ನಿಧಿ ಫೌಂಡೇಷನ್‌ಗೆ ಉಳಿದ ಏಳು ವಲಯಗಳ ಜವಾಬ್ದಾರಿ ವಹಿಸಲು ಸರ್ಕಾರ ತೀರ್ಮಾನಿಸಿದೆ.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಹಾಲಿ ಗುತ್ತಿಗೆದಾರರು ಹೆಚ್ಚುವರಿ ಊಟದ ಸಂಖ್ಯೆ ತೋರಿಸಿ ಬಿಲ್ ಪಾವತಿ ಮಾಡಿಸಿಕೊಳ್ಳುತ್ತಿರುವುದು ಕಂಡುಬಂದಿರುವುದರಿಂದ ಅಕ್ಷಯ ನಿಧಿ ಫೌಂಡೇಷನ್ ಮತ್ತು ಅದಮ್ಯ ಚೇತನ ಸಂಸ್ಥೆಗೆ ಆಹಾರ ಪೂರೈಕೆ ಜವಾಬ್ದಾರಿ ನೀಡುವುದು ಸೂಕ್ತ ಎಂಬ ನಿರ್ಧಾರವನ್ನು ಸಭೆ ಕೈಗೊಂಡಿದೆ.

ಪೌರಕಾರ್ಮಿಕರಿಗೆ ಬಿಸಿಯೂಟ ಪೂರೈಕೆಯನ್ನು ಈ ಎರಡು ಸಂಸ್ಥೆಗಳೇ ಮಾಡುತ್ತಿವೆ. ಆದ್ದರಿಂದ ಈ ಸಂಸ್ಥೆಗಳಿಗೆ ವಹಿಸುವುದು ಸೂಕ್ತ ಎಂಬ ಅಭಿಪ್ರಾಯವನ್ನು ಬಿಬಿಎಂಪಿ ಅಧಿಕಾರಿಗಳು ವ್ಯಕ್ತಪಡಿಸಿದ್ದರು.

ಮೂರು ಹೊತ್ತು ಆಹಾರ ಪೂರೈಕೆಗೆ ₹78 ದರವನ್ನು ಅಕ್ಷಯ ನಿಧಿ ಪೌಂಡೇಷನ್ ನಿಗದಿ ಮಾಡಿದೆ. ಸಂಧಾನದ ಮೂಲಕ ದರವನ್ನು ₹71(+ಜಿಎಸ್‌ಟಿ) ನಿಗದಿ ಮಾಡಿ ಪೂರ್ವ ವಲಯವನ್ನು ಅದಮ್ಯ ಚೇತನ ಸಂಸ್ಥೆಗೆ ಮತ್ತು ಉಳಿದ ಏಳು ವಲಯಗಳನ್ನು ಅಕ್ಷಯ ನಿಧಿ ಫೌಂಡೇಷನ್‌ಗೆ ವಹಿಸುವುದು ಸೂಕ್ತ. ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯಿಂದ 4(ಜಿ) ವಿನಾಯಿತಿ ಕೋರಲು ಸಭೆ ತೀರ್ಮಾನಿಸಿತು.

ಮುಂದಿನ ದಿನಗಳಲ್ಲಿ ಎರಡೂ ಸಂಸ್ಥೆಗಳ ಕಾರ್ಯನಿರ್ವಹಣೆ, ಗುಣಮಟ್ಟ ಗಮನದಲ್ಲಿಟ್ಟುಕೊಂಡು ಅಗತ್ಯ ಕಂಡುಬಂದರೆ ವಲಯಗಳ ಹಂಚಿಕೆ ಬಗ್ಗೆ ಮರು ಪರಿಶೀಲನೆ ಮಾಡಬಹುದು ಎಂದು ಸಭೆ ನಿರ್ಧರಿಸಿತು. ‘ಗುಣಮಟ್ಟದ ಆಹಾರ, ಸಂಬಾರ ಪದಾರ್ಥದ ಲಭ್ಯತೆ, ಋತುಮಾನಕ್ಕೆ ತಕ್ಕಂತೆ ಹಸಿರೆಲೆ ತರಕಾರಿ, ಕಾಯಿಪಲ್ಯಗಳನ್ನು ಬಳಕೆ ಮಾಡಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು’ ಎಂದು ರಾಕೇಶ್ ಸಿಂಗ್ ಸಭೆಯಲ್ಲಿ ಸೂಚಿಸಿದರು.



ಪುಣ್ಯ ಸ್ಮರಣೆ

ವಿಧಾನಸೌಧದ ಪಶ್ಚಿಮದ್ವಾರದ ಬಳಿ ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಬಾಬು ಜಗಜೀವನ್‌ರಾಂ ಅವರ 36ನೇ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ, ಬಾಬು ಜಗಜೀವನ್‌ರಾಂ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿದರು. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಎ. ನಾರಾಯಣಸ್ವಾಮಿ, ಮಾಜಿ ಶಾಸಕ ಎಚ್. ಆಂಜನೇಯ ಇದ್ದರು – ಪ್ರಜಾವಾಣಿ ಚಿತ್ರ

ಲಂಚ: ಬೆಸ್ಕಾಂ ನಿರ್ದೇಶಕರ ಆಪ್ತ ಕಾರ್ಯದರ್ಶಿ ಬಂಧನ

ಬೆಂಗಳೂರು: ಖಾಸಗಿ ವಸತಿ ಬಡಾವಣೆಗೆ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲು ಅನುಮತಿ ನೀಡಲು ₹40,000 ಲಂಚ ಪಡೆದ ಬೆಸ್ಕಾಂ ತಾಂತ್ರಿಕ ನಿರ್ದೇಶಕರ ಆಪ್ತ ಕಾರ್ಯದರ್ಶಿ ಷಣ್ಮುಖಪ್ಪ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬುಧವಾರ ಬಂಧಿಸಿದೆ.

ಹೊಸಕೋಟೆ ತಾಲ್ಲೂಕಿನ ಏಕರಾಜಪುರದಲ್ಲಿ ವಸತಿ ಬಡಾವಣೆ ನಿರ್ಮಿಸಿರುವ ಯಲಹಂಕ ನಿವಾಸಿಯೊಬ್ಬರು 250 ಕೆ.ವಿ ಸಾಮರ್ಥ್ಯದ ನಾಲ್ಕು ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಪರಿಶೀಲಿಸಿ ಅನುಮೋದನೆ ನೀಡುವಂತೆ ಮನವಿ ಮಾಡಲು ಬೆಸ್ಕಾಂ ತಾಂತ್ರಿಕ ನಿರ್ದೇಶಕರ ಆಪ್ತ ಕಾರ್ಯದರ್ಶಿಯನ್ನು ಭೇಟಿ ಮಾಡಿದ್ದರು. ಪ್ರತಿ ಪರಿವರ್ತಕಕ್ಕೆ ₹10,000ದಂತೆ ಒಟ್ಟು ₹40,000 ಲಂಚ ನೀಡುವಂತೆ ಆರೋಪಿ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಬೆಂಗಳೂರು ಘಟಕಕ್ಕೆ ದೂರು ನೀಡಿದ್ದರು.

ಬುಧವಾರ ಸಂಜೆ ಕಚೇರಿಗೆ ಹೋಗಿ ಷಣ್ಮುಖಪ್ಪ ಅವರನ್ನು ಅರ್ಜಿದಾರರು ಭೇಟಿ ಮಾಡಿದರು. ಆಗ ಅವರಿಂದ ₹40,000 ಲಂಚದ ಹಣವನ್ನು ಆರೋಪಿ ಪಡೆದರು. ತಕ್ಷಣ ದಾಳಿಮಾಡಿದ ಎಸಿಬಿ ಅಧಿಕಾರಿಗಳು ಆರೋಪಿಯನ್ನು ಬಂಧಿಸಿದರು.

ಷಣ್ಮುಖಪ್ಪ 2019ರಲ್ಲೇ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ್ದರು. ಬಳಿಕ ಗುತ್ತಿಗೆ ಆಧಾರದ ಮೇಲೆ ಅದೇ ಹುದ್ದೆಯಲ್ಲೇ ಮುಂದುವರಿದಿದ್ದರು ಎಂದು ಎಸಿಬಿ ತಿಳಿಸಿದೆ.

ಅಂಗನವಾಡಿ ನೌಕರರಿಂದ ಸಂಸತ್ತಿನ ಎದುರು ಪ್ರತಿಭಟನೆ

ಬೇಡಿಕೆ ಈಡೇರಿಕೆಗೆ 26ಕ್ಕೆ ದೆಹಲಿ ಚಲೋ

ಬೆಂಗಳೂರು: ‘ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ದೆಹಲಿ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜುಲೈ 26ರಿಂದ ಸಂಸತ್ತಿನ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದು’ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ತಿಳಿಸಿದೆ.

‘ಅಂಗನವಾಡಿ ಕಾರ್ಯಕರ್ತೆಯರಿಗೆ ಗ್ರಾಚ್ಯುಟಿ ಸೌಲಭ್ಯ ಒದಗಿಸುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಆದರೆ ಕೇಂದ್ರ ಸರ್ಕಾರ ಮಾತ್ರ ನಮ್ಮನ್ನು ನೌಕರರು ಎಂದು ಪರಿಗಣಿಸುತ್ತಿಲ್ಲ. ಗ್ರಾಚ್ಯುಟಿಗಾಗಿ ಆಗ್ರಹಿಸಿ ನಡೆಯಲಿರುವ ದೆಹಲಿ ಚಲೋ ಕಾರ್ಯಕ್ರಮದಲ್ಲಿ ರಾಜ್ಯದಿಂದ 5 ಸಾವಿರಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ಭಾಗಿಯಾಗಲಿದ್ದಾರೆ’ ಎಂದು ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಜುಲೈ 26ರಂದು ಪ್ರಾರಂಭವಾಗುವ ಸಂಸತ್ ಅಧಿವೇಶನದಲ್ಲಿ ನಮ್ಮ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವಂತೆ ಸಂಸದರ ಮನೆ ಮತ್ತು ಕಚೇರಿಗಳ ಮುಂದೆ ಜುಲೈ 11ರಂದು ಪ್ರತಿಭಟನೆ ಮಾಡಿ ಮನವಿ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

‘ಕೇಂದ್ರ ಸರ್ಕಾರ ಮಾರ್ಚ್ 29ರಂದು ಹೊರಡಿಸಿರುವ ಆದೇಶದ ಪ್ರಕಾರ ಐಸಿಡಿ-ಎಸ್ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುವ ಅಂಗನವಾಡಿ ನೌಕರರು ಕಾಯಂ ಅಲ್ಲ. 3–4 ತಿಂಗಳಿಗೊಮ್ಮೆ ವೇತನ ಬಿಡುಗಡೆ ಮಾಡುತ್ತಾರೆ. ಹೆಚ್ಚುತ್ತಿರುವ ಶಿಸ್ತು ಕ್ರಮಗಳು ಸರಿಯಿಲ್ಲ. ಎಲ್ಲ ಕೆಲಸಗಳಿಗೂ ಮಹಿಳೆಯರೆಂದು ಪರಿಗಣಿಸದೇ ವಸ್ತುಗಳಂತೆ ನಡೆಸಿಕೊಳ್ಳುತ್ತಿರುವುದು ಖಂಡನೀಯ. ಇವೆಲ್ಲವುಗಳನ್ನು ವಿರೋಧಿಸಿ ಪ್ರತಿಭಟನೆ ಮಾಡುವ ಹಕ್ಕನ್ನು ಕೂಡ ಕಿತ್ತುಕೊಂಡಿದೆ. ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

‘ಕೇಂದ್ರ ಸರ್ಕಾರ ಐಸಿಡಿಎಸ್ ಯೋಜನೆಗೆ ಶೇಕಡ 40ರಷ್ಟು ಅನುದಾನ ಕಡಿತ ಮಾಡಿದೆ. ರಾಜ್ಯ ಸರ್ಕಾರಕ್ಕೆ ನೀಡಬೇಕಾಗಿರುವ ಜಿಎಸ್‌ಟಿ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಇದರಿಂದ ಅಂಗನವಾಡಿ ನೌಕರರು ಕಷ್ಟ ಅನುಭವಿಸುವಂತಾಗಿದೆ. ಗರ್ಭಿಣಿಯರಿಗೆ ವಿತರಣೆ ಮಾಡುವ ಮೊಟ್ಟೆಗಳಿಗೆ ಕಳೆದ ಮೂರು ತಿಂಗಳಿನಿಂದ ಅನುದಾನ ಬಿಡುಗಡೆ ಮಾಡಿಲ್ಲ. ಅಂಗನವಾಡಿ ಕಾರ್ಯಕರ್ತೆಯರಿಗೆ 3–4 ತಿಂಗಳಿನಿಂದ ಗೌರವಧನ ಸಹ ಜಮೆಯಾಗಿಲ್ಲ ಎಂದು ಆರೋಪಿಸಿದರು.

ಶಾಲಾ ಮಕ್ಕಳಿಗೆ ಶೂ, ಬೈಸಿಕಲ್ ವಿತರಿಸಲು ಆಗ್ರಹ

ಬೆಂಗಳೂರು: ಸರ್ಕಾರ ಆಯವ್ಯಯದಲ್ಲಿ ಅನುದಾನ ಮೀಸಲಿಡದ ಕಾರಣ ಸರ್ಕಾರಿ, ಅನುದಾನಿತ ಶಾಲಾ ಮಕ್ಕಳಿಗೆ 2022–23ನೇ ಸಾಲಿನಲ್ಲಿ ಬೈಸಿಕಲ್, ಶೂ ಮತ್ತು ಸಾಕ್ಸ್ ವಿತರಿಸಲು ಸಾಧ್ಯವಾಗದಿರುವುದು ವಿಷಾದನೀಯ ಎಂದು ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ಹೇಳಿದೆ.

ಮಕ್ಕಳು ಗೌರವ ಮತ್ತು ಆತ್ಮಾಭಿಮಾನದಿಂದ ಸಮವಸ್ತ್ರ ಧರಿಸಿ, ಶೂ ಮತ್ತು ಸಾಕ್ಸ್ ಹಾಕಿಕೊಂಡು ಹೆಮ್ಮೆಯಿಂದ ಶಾಲೆಗೆ ಹೋಗುತ್ತಿದ್ದರು. ಕನ್ನಡ ಶಾಲೆಗಳ ಮಕ್ಕಳು ಉಳಿದ ಖಾಸಗಿ ಶಾಲೆಗಳ ಮಕ್ಕಳಂತೆಯೇ ಸ್ವಾಭಿಮಾನದ, ಗೌರವಯುತ ಕಲಿಕಾ ವಾತಾವರಣದಲ್ಲಿ ಕಲಿಯುವ ಭೂಮಿಕೆಯನ್ನು ಒದಗಿಸಲಾಗಿತ್ತು. ಅವರ ಹಕ್ಕನ್ನು ಕಸಿದಿರುವ ಸರ್ಕಾರ ಮಕ್ಕಳು ಬರಿಗಾಲಿನಲ್ಲಿ ಹೋಗುವಂತೆ ಮಾಡಿದೆ ಎಂದು ವೇದಿಕೆಯ ಮಹಾಪೋಷಕ ವಿ.ಪಿ. ನಿರಂಜನಾರಾಧ್ಯ ಅವರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದು ಮಕ್ಕಳ ಸಂವಿಧಾನಬದ್ಧ ಹಕ್ಕಿನ ಉಲ್ಲಂಘನೆ. ಮಕ್ಕಳ ಸ್ವಾಭಿಮಾನ, ಆತ್ಮಸ್ಥೈರ್ಯ ಕುಗ್ಗಿಸುವ ನಡೆ. ಸರ್ಕಾರಿ ಶಾಲೆಗಳ ಮಕ್ಕಳಲ್ಲಿ ಕೀಳರಿಮೆ ಹೆಚ್ಚಿಸಿ, ಶಿಕ್ಷಣದ ಆಸಕ್ತಿಯನ್ನು ತಗ್ಗಿಸುತ್ತದೆ. ಸರ್ಕಾರಿ ಶಾಲೆಗಳು ಮತ್ತಷ್ಟು ದುರ್ಬಲವಾಗುತ್ತವೆ. ಸರ್ಕಾರ ತಕ್ಷಣ ಮಕ್ಕಳಿಗೆ ನ್ಯಾಯ ಒದಗಿಸಬೇಕು ಎಂದು ನಿರಂಜನಾರಾಧ್ಯ ಅವರು ಆಗ್ರಹಿಸಿದ್ದಾರೆ.

₹10 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಯಲಹಂಕ: ಬಿಬಿಎಂಪಿ ನಾಲ್ಕು ವಾರ್ಡ್‌ಗಳ ವ್ಯಾಪ್ತಿಯ ಬಡಾವಣೆಗಳಲ್ಲಿ ₹10 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನಂತಪುರ ಗೇಟ್ ಬಳಿ ಚಾಲನೆ ನೀಡಿದ ಶಾಸಕ ಎಸ್.ಆರ್.ವಿಶ್ವನಾಥ್, ಪೂರ್ಣಗೊಂಡಿರುವ ಹಲವು ಕಾಮಗಾರಿಗಳನ್ನು ಉದ್ಘಾಟಿಸಿದರು.

ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಉದ್ಯಾನಗಳಿಗೆ ತಂತಿಬೇಲಿ ಹಾಗೂ ಎನ್.ಇ.ಎಸ್ ವೃತ್ತದ ಬಳಿ ಎಲ್.ಇ.ಡಿ ಟವರ್ ಲೈಟಿಂಗ್ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಿದರು. ಅನಂತಪುರ ಗೇಟ್ ಬಳಿ ನೂತನ ಬಸ್ ತಂಗುದಾಣ, ಕಾವೇರಿ ಉದ್ಯಾನದ ಬಳಿ ಆರ್.ಒ ಪ್ಲಾಂಟ್ ಮತ್ತು ಎನ್.ಇ.ಎಸ್ ವೃತ್ತದ ಸಮೀಪದಲ್ಲಿ ನಿರ್ಮಿಸಿರುವ ಆರ್.ಒ ಪ್ಲಾಂಟ್ ಹಾಗೂ ಸಾರ್ವಜನಿಕ ಶೌಚಾಲಯ, ಯಲಹಂಕ ಹಳೇನಗರದ ಬಸ್ ನಿಲ್ದಾಣದಲ್ಲಿ ನಿರ್ಮಿಸಿರುವ ನಿರಾಶ್ರಿತರ ತಂಗುದಾಣ ಕೇಂದ್ರದ ಉದ್ಘಾಟನೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ’ಯಲಹಂಕ ನಗರವನ್ನು ಸುಂದರಗೊಳಿಸುವ ನಿಟ್ಟಿನಲ್ಲಿ ಇನ್ನೂ ಹಲವು ಪ್ರಗತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ವಾಚ್ ಟವರ್, ಎನ್‌ಇಎಸ್ ವೃತ್ತವನ್ನು ಸುಂದರಗೊಳಿಸುವ ನಿಟ್ಟಿನಲ್ಲಿ ಮಿನಿ ಪಾರ್ಕ್, ಫೌಂಟೇನ್, ವಿಶಿಷ್ಟ ಮಾದರಿಯ ವಿದ್ಯುದ್ದೀಪ ಅಳವಡಿಕೆ ಸೇರಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ‘ ಎಂದು ತಿಳಿಸಿದರು.

ಎಸ್‌ಸಿ, ಎಸ್‌ಟಿ ಮಹಿಳೆಯರಿಗೆ ಉದ್ಯಮಶೀಲತೆ ತರಬೇತಿ

ಬೆಂಗಳೂರು: ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ಐಐಎಂ ಬೆಂಗಳೂರಿನ ಎಕ್ಸಿಕ್ಯೂಟಿವ್ ಎಜುಕೇಷನ್ ಪ್ರೋಗ್ರಾಮ್ಸ್ (ಇಇಪಿ-ಎಸ್-ಕಾರ್ಯನಿರ್ವಾಹಕರ ಶಿಕ್ಷಣ ಕಾರ್ಯಕ್ರಮಗಳು) ಅಡಿ ಎಸ್‌ಸಿ/ಎಸ್‌ಟಿ ಮಹಿಳಾ ಪದವೀಧರರಿಗೆ ಉದ್ಯಮಶೀಲತೆ ತರಬೇತಿಯನ್ನು ನೀಡಲಿದೆ. ಈ ಕಾರ್ಯಕ್ರಮದ ಮೊದಲ ಬ್ಯಾಚ್ ಆಗಸ್ಟ್ 16ರಂದು ಆರಂಭವಾಗಲಿದೆ.

ತರಬೇತಿ ಪಡೆಯುವವರ ಪೈಕಿ 200 ಮಹಿಳೆಯರು ಎಸ್‌ಸಿ ಮತ್ತು 100 ಮಹಿಳೆಯರು ಎಸ್‌ಟಿಗೆ ಸೇರಿದವರಾಗಿರುತ್ತಾರೆ. ಯಾವುದೇ ಪದವಿ ಪಡೆದ 45 ವರ್ಷ ವಯಸ್ಸಿನೊಳಗಿನ ಮಹಿಳೆಯರು ಅರ್ಜಿ ಸಲ್ಲಿಸಬಹುದು.

ತರಬೇತಿಯ ಅವಧಿಯಲ್ಲಿ ಐಐಎಂಬಿ ಕ್ಯಾಂಪಸ್‌ನಲ್ಲಿ ಭೋಜನ ಮತ್ತು ವಸತಿ ಪೂರೈಸಲಾಗುವುದು. ಇಂಗ್ಲಿಷ್‌ನಲ್ಲಿ ಕಲಿಸಲಾಗುವುದು.

ವಿವರಗಳಿಗೆ ಸಂದರ್ಶಿಸಿ: https://sw.kar.nic.in/swscsp/training/trainingregistration.aspx

ಗುರುವಾರ, ಜುಲೈ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 187 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿರುವ ಕ್ಲರ್ಕ್ ಹುದ್ದೆಗಳ ಭರ್ತಿಗಾಗಿ ಎರಡು ಹಂತಗಳಲ್ಲಿ ನಡೆಯುವ ಪರೀಕ್ಷೆಗೆ ಸಂಬಂಧಿಸಿದ ಅರ್ಜಿ ಸಲ್ಲಿಕೆ ಪ್ರಕ್ರಿಯೆ, ಶುಲ್ಕ ಕುರಿತ ಮತ್ತಿತರ ಮಾಹಿತಿ ಇಲ್ಲಿದೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
53,235 ▲	15,989 ▲	₹ 53,200 (ಬೆಂಗಳೂರು) ▼	₹58,100 (ಬೆಂಗಳೂರು) ▼	78.94 ▲

ಶಾಲೆ, ಅಂಗನವಾಡಿ: ಮಾರ್ಚ್‌ನಲ್ಲಿ ನಡೆದ ಸಮೀಕ್ಷೆ • ಹೈಕೋರ್ಟ್‌ಗೆ ವರದಿ ಸಲ್ಲಿಕೆ

10 ಲಕ್ಷ ಮಕ್ಕಳು ಶಾಲೆಯಿಂದ ಹೊರಗೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 14 ವರ್ಷದ ಒಳಗಿನ 10.12 ಲಕ್ಷಕ್ಕೂ ಹೆಚ್ಚು ಮಕ್ಕಳು ಶಾಲೆ ಮತ್ತು ಅಂಗನವಾಡಿಗಳಿಂದ ಹೊರಗುಳಿದಿದ್ದಾರೆ' ಎಂಬ ಕಳವಳಕಾರಿ ಅಂಶ ಸಮೀಕ್ಷೆಯಲ್ಲಿ ವ್ಯಕ್ತವಾಗಿದ್ದು, ಈ ಕುರಿತ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಲಾಗಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರುವುದಕ್ಕೆ ಸಂಬಂಧಿಸಿದಂತೆ 2013ರಲ್ಲಿ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿಯಾಗಿರುವ (ಕೋರ್ಟ್‌ಗೆ ಸಹಕರಿಸುವ ವಕೀಲರು) ಹೈಕೋರ್ಟ್‌ನ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು ಸಮೀಕ್ಷಾ ವರದಿಯನ್ನು ನ್ಯಾಯಪೀಠಕ್ಕೆ ನೀಡಿದರು.

ಶಾಲೆಯಿಂದ ಹೊರಗುಳಿದ 18 ವರ್ಷದೊಳಗಿನ ಮಕ್ಕಳ ಪತ್ತೆಗೆ ನಗರಾಭಿವೃದ್ಧಿ, ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ಗ್ರಾಮೀಣಾಭಿವೃದ್ಧಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಪ್ರಾಧಿಕಾರಗಳು ನಡೆಸಿರುವ ಮನೆ-ಮನೆ ಸಮೀಕ್ಷೆಯ ವಸ್ತುಸ್ಥಿತಿ ಅಂಶಗಳನ್ನು ಈ ವರದಿ ಒಳಗೊಂಡಿದೆ.

ವರದಿಯನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ರಚಿಸಿರುವ ಉನ್ನತಾಧಿಕಾರ ಸಮಿತಿಯು ಇದೇ 16ರಂದು ಸಭೆ ನಡೆಸಬೇಕು. ಶಾಲೆಯಿಂದ ಹೊರಗುಳಿದ, ವಿಶೇಷವಾಗಿ ಅಂಗನವಾಡಿಗಳಿಂದ ಹೊರಗುಳಿದ 3ರಿಂದ 6ವರ್ಷದ ಒಳಗಿನ ಮಕ್ಕಳನ್ನು ವಾಪಸು ಕರೆತರುವ ಬಗ್ಗೆ ಯಾವ ಕ್ರಮ ಕೈಗೊಳ್ಳಬಹುದು ಎಂಬ ಬಗ್ಗೆ ಸಲಹೆ ನೀಡಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿದೆ.

ಮಕ್ಕಳು ಶಾಲೆಗೆ ಬರೋದು ಶೂ, ಸಾಕ್ಸ್‌ಗಳಿಗಲ್ಲ: ಬಿ.ಸಿ. ನಾಗೇಶ್

ಕಲಬುರಗಿ: 'ಮಕ್ಕಳು ಶಾಲೆಗೆ ಬರುವುದು ಕಲಿಯುವುದಕ್ಕೆ ಹೊರತು ಶೂ, ಸಾಕ್ಸ್ ಹಾಕಿಕೊಳ್ಳಲು ಅಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

'ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ಇಲ್ಲ' ಎಂಬ 'ಪ್ರಜಾವಾಣಿ'ಯ ವರದಿ ಉಲ್ಲೇಖಿಸಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾಡಿದ ಟ್ವೀಟ್‌ಗೆ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೀಗೆ ಪ್ರತಿಕ್ರಿಯಿಸಿದರು.

'ಶೂ, ಸಾಕ್ಸ್ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರು ತಾವು ಮುಖ್ಯಮಂತ್ರಿಯಾಗಿದ್ದ ವೇಳೆ ಎಂತಹ ಗುಣಮಟ್ಟದ ಶಿಕ್ಷಣ ನೀಡಿದ್ದರು? ಎಷ್ಟು ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡಿದ್ದರು? ಎಷ್ಟು ಶಾಲೆಗೆ ಹೊಸ ಕೊಠಡಿ ಕೊಟ್ಟಿದ್ದರು? ಶಿಕ್ಷಣಕ್ಕೆ ಎಷ್ಟು ಅನುದಾನ ನೀಡಿದ್ದರು ಎಂಬುದರ ಬಗ್ಗೆ ದಾಖಲೆ ನೀಡಲಿ. ನಮ್ಮ ಸರ್ಕಾರದ ಅವಧಿಯಲ್ಲಿನ ದಾಖಲೆ-ಪತ್ರಗಳನ್ನೂ ಬಿಡುಗಡೆ ಮಾಡುತ್ತೇವೆ' ಎಂದು ಅವರು ಸವಾಲು ಹಾಕಿದರು.

'ಶೂ, ಸಾಕ್ಸ್ ಕೊಡುತ್ತಿಲ್ಲ ಎಂಬುದು ಸಿದ್ದರಾಮಯ್ಯ ಅವರ 101ನೇ ಸುಳ್ಳು. ಕಲಿಕಾ ಚೇತರಿಕೆಗೆ ₹150 ಕೋಟಿ ಖರ್ಚು ಮಾಡಲಾಗಿದೆ. ಮಳೆಯಿಂದ ಹಲವು ಶಾಲಾ ಕೊಠಡಿಗಳು ಶಿಥಿಲಗೊಂಡಿವೆ. ಹೀಗಾಗಿ, 7 ಸಾವಿರ ಕೊಠಡಿಗಳನ್ನು ನಿರ್ಮಿಸುತ್ತಿದ್ದೇವೆ' ಎಂದರು.

> ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ಮತ್ತು ಸೈಕಲ್ ಅನ್ನು ಈ ವರ್ಷವೇ ನೀಡಲಾಗುವುದು. ಸ್ವಲ್ಪ ವಿಳಂಬವಾಗಿದೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಅಂಕಿ–ಅಂಶ

15,338 ಶಾಲೆಯಿಂದ ಹೊರಗುಳಿದವರು	**10.12** ಲಕ್ಷ ಅಂಗನವಾಡಿ, ಶಾಲೆಯಿಂದ ದೂರ ಇರುವವರು
10,000 ಶಾಲೆಯನ್ನೇ ನೋಡದವರು	**9.87** ಲಕ್ಷ ಅಂಗನವಾಡಿಗೆ ದಾಖಲಾಗದ ಮಕ್ಕಳು

'ಇಷ್ಟು ಗತಿಗೆಟ್ಟ ಸರ್ಕಾರ ಹಿಂದೆ ಇರಲಿಲ್ಲ'

ಬೆಂಗಳೂರು: 'ವಿದ್ಯಾಸಿರಿ ಯೋಜನೆಗೆ ಹಣ ನೀಡದ ರಾಜ್ಯ ಸರ್ಕಾರ, ಕ್ಷೀರಭಾಗ್ಯ, ಮಧ್ಯಾಹ್ನದ ಬಿಸಿಯೂಟಕ್ಕೆ ಕಲ್ಲು ಹಾಕುತ್ತಿದೆ. ಈಗ ಸೈಕಲ್, ಶೂ, ಸಾಕ್ಸ್‌ಗಳನ್ನು ಕಿತ್ತುಕೊಳ್ಳುತ್ತಿದೆ. ಇಷ್ಟೊಂದು ಗತಿಗೆಟ್ಟ ಸರ್ಕಾರ ಹಿಂದೆಂದೂ ಇರಲಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

'ಪ್ರಜಾವಾಣಿ'ಯಲ್ಲಿ ಜುಲೈ 6ರಂದು ಪ್ರಕಟವಾದ 'ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ಇಲ್ಲ!' ಸುದ್ದಿಯನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ಅವರು, 'ಸೈಕಲ್, ಶೂ, ಸಾಕ್ಸ್ ವಿತರಣೆ ನಿಲ್ಲಿಸಲು ಹಿಂದಿನ ವರ್ಷಗಳಲ್ಲಿ ಕೋವಿಡ್ ಕಾರಣ ನೀಡಿದ್ದ ಸರ್ಕಾರ, ಈ ವರ್ಷ ಶೇ 40 ಕಮಿಷನ್‌ನಿಂದಾಗಿ ಖಾಲಿಯಾಗಿರುವ ಖಜಾನೆ ತೋರಿಸುತ್ತಿದೆ' ಎಂದು ಕುಟುಕಿದ್ದಾರೆ.

'ಸೈಕಲ್ ನೀಡುವ ಯೋಜನೆ ಯಡಿಯೂರಪ್ಪ ಅವರದ್ದು. ಅದನ್ನು ಸ್ಥಗಿತಗೊಳಿಸುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಯಡಿಯೂರಪ್ಪನವರ ವಿರುದ್ಧ ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆಯೇ' ಎಂದು ಪ್ರಶ್ನಿಸಿದ್ದಾರೆ.

'ಒಂದೆಡೆ ಸಚಿವರು ಮತ್ತು ಅಧಿಕಾರಿಗಳ ದುಷ್ಟಕೂಟ ಕಮಿಷನ್ ದಂಧೆಯಲ್ಲಿ ತೊಡಗಿ ಖಜಾನೆ ಲೂಟಿ ಮಾಡುತ್ತಿದೆ. ಇನ್ನೊಂದೆಡೆ ಸರ್ಕಾರಿ ಶಾಲಾ ಮಕ್ಕಳಿಗೆ ಪಠ್ಯಪುಸ್ತಕ, ಸೈಕಲ್, ಶೂ, ಸಾಕ್ಸ್ ನೀಡದೆ ಅವರ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದೆ' ಎಂದು ಟೀಕಿಸಿದ್ದಾರೆ.

10ನೇ ಪುಟ ನೋಡಿ



ಮಹಾರಾಷ್ಟ್ರದ ಹಲವು ಕಡೆ ಧಾರಾಕಾರ ಮಳೆ ಸುರಿಯುತ್ತಿದ್ದು, ಬುಧವಾರ ಪವಾಯಿ ಸರೋವರದಿಂದ ಧುಮ್ಮಿಕ್ಕುತ್ತಿರುವ ನೀರಿನಲ್ಲಿ ಯುವಜನರು ಸಂಭ್ರಮಿಸಿದರು – –ಪಿಟಿಐ ಚಿತ್ರ

ಮಳೆ: ಕರಾವಳಿಯಲ್ಲಿ 'ರೆಡ್ ಅಲರ್ಟ್'

ಪ್ರಜಾವಾಣಿ ವಾರ್ತೆ

- ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶಾಲಾ–ಕಾಲೇಜುಗಳಿಗೆ ಗುರುವಾರ ರಜೆ ಘೋಷಣೆ
- ಕಡಲು ಪ್ರಕ್ಷುಬ್ಧ: ಕಡಲಿಗೆ ಇಳಿಯದಂತೆ ಮೀನುಗಾರರಿಗೆ ಎಚ್ಚರಿಕೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಬುಧವಾರವೂ ಭಾರಿ ಮಳೆಯಾಗಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜುಲೈ 7ರಂದು ಅಧಿಕ ಮಳೆಯಾಗುವ ಸಾಧ್ಯತೆ ಇದ್ದು, 'ರೆಡ್ ಅಲರ್ಟ್' ಘೋಷಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಸತತ 5ನೇ ದಿನವೂ ಧಾರಾಕಾರ ಮಳೆ ಸುರಿದಿದೆ. ಮತ್ತೆ ಭಾರಿ ಮಳೆಯ ಮುನ್ಸೂಚನೆಯಿದ್ದು, ಗುರುವಾರ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಭಾನುವಾರ ನದಿಗೆ ಸ್ನಾನಕ್ಕೆ ತೆರಳಿದ್ದ ವೇಳೆ ನೀರುಪಾಲಾಗಿದ್ದ ಬಂಟ್ವಾಳ ತಾಲ್ಲೂಕು ಸಜಿಪಪಡು ಗ್ರಾಮದ ಅಶ್ವಿತ್ ಗಾಣಿಗ(19) ಎಂಬ ಯುವಕನ ಶವ ಉಳ್ಳಾಲ ಸಮೀಪದ ಕೋಟೆಪುರ ಕೋಡಿಯಲ್ಲಿ ಬುಧವಾರ ಪತ್ತೆಯಾಗಿದೆ. ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ನಾಗೂರ(ಬಿ) ಗ್ರಾಮದಲ್ಲಿ ಮಂಗಳವಾರ ಸಂಜೆ ಹಳ್ಳ ದಾಟುತ್ತಿದ್ದ ವೇಳೆ ಸುಮನ್‌ಬಾಯಿ ಬಾಬುರೆಡ್ಡಿ ಖಂದಾಡೆ (48) ಎಂಬುವರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.

ಭಟ್ಕಳದ ತಾಲ್ಲೂಕಿನ ಶಿರಾಲಿಯಲ್ಲಿ ಮನೆಯೊಂದರ ಮಣ್ಣಿನ ಗೋಡೆ ಕುಸಿದು ಮಹಿಳೆ ಗಾಯಗೊಂಡಿದ್ದಾರೆ. ಅವರನ್ನು ಕುಂದಾಪುರದ ಆಸ್ಪತ್ರೆಗೆ ದಾಖಲಿಸಲಾಗಿದೆ.


ಕೊಡಗು ಜಿಲ್ಲೆ ಸೇರಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ಕೆಆರ್‌ಎಸ್ ಜಲಾಶಯದ ಒಳಹರಿವು 30 ಸಾವಿರ ಕ್ಯುಸೆಕ್ ದಾಟಿದೆ. ಬುಧವಾರ ಸಂಜೆ ವೇಳೆಗೆ ಜಲಾಶಯದ ನೀರಿನ ಮಟ್ಟ 115.70 ಅಡಿಗೆ ತಲುಪಿದೆ. ಹಾರಂಗಿ ಜಲಾಶಯಕ್ಕೆ 12,644 ಕ್ಯುಸೆಕ್ ನೀರು ಹರಿದುಬರುತ್ತಿದ್ದು, 11,940 ಕ್ಯುಸೆಕ್‌ನಷ್ಟು ನೀರನ್ನು ಹೊರಬಿಡಲಾಗುತ್ತಿದೆ.


ಹುಬ್ಬಳ್ಳಿ, ಧಾರವಾಡ, ಉತ್ತರ ಕನ್ನಡ, ಬೆಳಗಾವಿ ಜಿಲ್ಲೆಯಾದ್ಯಂತ ಮಳೆ ಮುಂದುವರಿದಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ದೂಧಗಂಗಾ ಹಾಗೂ ವೇದಗಂಗಾ ಉಪನದಿಗಳು ಮೈದುಂಬಿ ಹರಿಯುತ್ತಿವೆ. ಹಾಸನ, ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮಳೆಯಾಗಿದೆ.

ಒಳ ಪುಟಗಳು

ವೀರೇಂದ್ರ ಹೆಗ್ಗಡೆ, ಉಷಾ ರಾಜ್ಯಸಭೆಗೆ

ಪ್ರಜಾವಾಣಿ ವಾರ್ತೆ


ಇಳಯರಾಜಾ


ವೀರೇಂದ್ರ ಹೆಗ್ಗಡೆ


ಪಿ.ಟಿ. ಉಷಾ


ವಿ.ವಿಜಯೇಂದ್ರ ಪ್ರಸಾದ್

ನವದೆಹಲಿ: ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ಖ್ಯಾತ ಚಿತ್ರಸಾಹಿತಿ ವಿಜಯೇಂದ್ರ ಪ್ರಸಾದ್, 'ಓಟದ ರಾಣಿ' ಮಾಜಿ ಅಥ್ಲೀಟ್ ಪಿ.ಟಿ. ಉಷಾ ಹಾಗೂ ಸಂಗೀತ ಮಾಂತ್ರಿಕ ಇಳಯರಾಜ ಅವರನ್ನು ರಾಜ್ಯಸಭೆಗೆ ಬುಧವಾರ ನಾಮನಿರ್ದೇಶನ ಮಾಡಲಾಗಿದೆ.

ನಾಮನಿರ್ದೇಶಿತ ಸದಸ್ಯರ ವಿಭಾಗದಲ್ಲಿ ಖಾಲಿ ಉಳಿದಿದ್ದ ಸ್ಥಾನಗಳಿಗೆ ಇವರನ್ನು ಆಯ್ಕೆ ಮಾಡಲಾಗಿದೆ. ರಾಜ್ಯಸಭೆಗೆ ನಾಮನಿರ್ದೇಶನಗೊಂಡಿರುವ ನಾಲ್ವರು ಸಾಧಕರನ್ನು ಅಭಿನಂದಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಇವರೊಂದಿಗೆ ತಾವು ಕಾಣಿಸಿಕೊಂಡ ಅಪರೂಪದ ಸಂದರ್ಭದ ಚಿತ್ರಗಳನ್ನು ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ.

'ಸಮುದಾಯಕ್ಕೆ ಮಹೋನ್ನತ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ವೀರೇಂದ್ರ ಹೆಗ್ಗಡೆಯವರು ಮುಂಚೂಣಿಯಲ್ಲಿದ್ದಾರೆ. ಧರ್ಮಸ್ಥಳದ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸುವ ಅವಕಾಶ ಹಾಗೂ ಅವರು ಆರೋಗ್ಯ, ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೈಗೊಂಡಿರುವ ಮಹತ್ತರ ಕಾರ್ಯಗಳಿಗೆ ಸಾಕ್ಷಿಯಾಗುವ ಅವಕಾಶ ನನಗೆ ಒದಗಿತ್ತು. ಖಂಡಿತವಾಗಿ ಅವರು ಸಂಸದೀಯ ನಡಾವಳಿಗಳನ್ನು ಮತ್ತಷ್ಟು ಉತ್ಕೃಷ್ಟಗೊಳಿಸುವರು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕನ್ನಡದಲ್ಲೇ ಟ್ವೀಟ್ ಮಾಡಿದ್ದಾರೆ.

'ಪಿ.ಟಿ. ಉಷಾ ಅವರು ದೇಶದ ಪ್ರತಿಯೊಬ್ಬರಿಗೆ ಸ್ಫೂರ್ತಿ. ಕ್ರೀಡಾ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಅವರು ದೇಶಕ್ಕೆ ಸಾಕಷ್ಟು ಉದಯೋನ್ಮುಖ ಪ್ರತಿಭೆಗಳನ್ನು ಪರಿಚಯಿಸಿದ್ದಾರೆ. ಅವರ ಕೊಡುಗೆ ಶ್ಲಾಘನೀಯ. ರಾಜ್ಯಸಭೆಯ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಉಷಾ ಅವರಿಗೂ ಅಭಿನಂದನೆಗಳು' ಎಂದು ಮೋದಿ ಮತ್ತೊಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

'ಸಂಗೀತ ಮಾಂತ್ರಿಕ ಇಳಯರಾಜ ಅವರು ಸೃಜನಶೀಲ ಪ್ರತಿಭೆ. ಸಾಕಷ್ಟು ಸಾಧನೆ ಮಾಡಿದ್ದಾರೆ. ಹಲವು ತಲೆಮಾರುಗಳ ಸುಂದರ ಭಾವನೆಗಳಿಗೆ ಜೀವ ತುಂಬಿದ್ದಾರೆ. ಅವರ ಜೀವನವೂ ಸ್ಫೂರ್ತಿದಾಯಕವಾಗಿದೆ.

11ನೇ ಪುಟ ನೋಡಿ

ಅತಿಥಿ ಉಪನ್ಯಾಸಕರ ಗೌರವ ಸಂಭಾವನೆ ₹ 3 ಸಾವಿರ ಹೆಚ್ಚಳ

ಬೆಂಗಳೂರು: ರಾಜ್ಯದ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಗೌರವ ಸಂಭಾವನೆಯನ್ನು ₹ 3 ಸಾವಿರ ಹೆಚ್ಚಳ ಮಾಡಲಾಗಿದೆ.

ಪಿಯು ಕಾಲೇಜುಗಳಲ್ಲಿನ ಉಪನ್ಯಾಸಕರ ಕೊರತೆ ನೀಗಿಸಲು ಪ್ರಸಕ್ತ ಸಾಲಿನಲ್ಲಿ 3,708 ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗಿತ್ತು. ಅವರಿಗೆ ಇದುವರೆಗೂ ಮಾಸಿಕ ₹ 9 ಸಾವಿರ ನೀಡಲಾಗುತ್ತಿತ್ತು. ಸರ್ಕಾರ ಅವರ ಸಂಭಾವನೆಯ ಪರಿಷ್ಕರಣೆ ಮಾಡಿದೆ. ₹ 9 ಸಾವಿರದಿಂದ ₹ 12 ಸಾವಿರಕ್ಕೆ ಹೆಚ್ಚಿಸಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಟ್ವೀಟ್ ಮಾಡಿದ್ದಾರೆ.

ರಾಜ್ಯದಲ್ಲಿ 1,250 ಪದವಿಪೂರ್ವ ಕಾಲೇಜುಗಳಿವೆ.ತಿಂಗಳಿಗೆ ₹ 15 ಸಾವಿರದಿಂದ ₹ 20 ಸಾವಿರ ಸಂಭಾವನೆ ನೀಡುವಂತೆ ಅತಿಥಿ ಉಪನ್ಯಾಸಕರು ಬೇಡಿಕೆ ಇಟ್ಟಿದ್ದರು.

ಅಡುಗೆ ಎಣ್ಣೆ ಬೆಲೆ ಇಳಿಸಲು ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆ ಇಳಿಕೆ ಆಗಿರುವ ಕಾರಣ, ಆಮದು ಮಾಡಿಕೊಳ್ಳುವ ಅಡುಗೆ ಎಣ್ಣೆಗಳ ಗರಿಷ್ಠ ಮಾರಾಟ ಬೆಲೆಯನ್ನು (ಎಂಆರ್‌ಪಿ) ಲೀಟರ್‌ಗೆ ₹ 10ರವರೆಗೆ ಕಡಿತ ಮಾಡಬೇಕು ಎಂದು ಕೇಂದ್ರ ಸರ್ಕಾರವು ಕಂಪನಿಗಳಿಗೆ ನಿರ್ದೇಶನ ನೀಡಿದೆ.

ಎಂಆರ್‌ಪಿ ಇಳಿಕೆಯು ಒಂದು ವಾರದಲ್ಲಿ ಜಾರಿಗೆ ಬರಬೇಕು ಎಂದು ಕೇಂದ್ರವು ಹೇಳಿದೆ. ದೇಶಕ್ಕೆ ಅಗತ್ಯವಿರುವ ಅಡುಗೆ ಎಣ್ಣೆಯಲ್ಲಿ ಶೇ 60ರಷ್ಟು ವಿದೇಶಗಳಿಂದ ಆಮದಾಗುತ್ತದೆ. ಅಡುಗೆ ಎಣ್ಣೆ ತಯಾರಕ ಕಂಪನಿಗಳು ಹಿಂದಿನ ತಿಂಗಳು ಎಂಆರ್‌ಪಿಯನ್ನು ಲೀಟರಿಗೆ ₹ 10ರಿಂದ ₹ 15ರವರೆಗೆ ತಗ್ಗಿಸಿದ್ದವು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆಯು ಇನ್ನಷ್ಟು ಕಡಿಮೆ ಆಗಿರುವುದನ್ನು ಗಮನಿಸಿ ಕೇಂದ್ರ ಆಹಾರ ಕಾರ್ಯದರ್ಶಿ ಸುಧಾಂಶು ಪಾಂಡೆ ಅವರು ಪ್ರಮುಖ ಕಂಪನಿಗಳು, ತಯಾರಕರ ಸಭೆ ಕರೆದಿದ್ದರು. 'ಜಾಗತಿಕ ಮಟ್ಟದಲ್ಲಿ ಅಡುಗೆ ಎಣ್ಣೆಗಳ ಬೆಲೆ ಒಂದು ವಾರದಲ್ಲಿ ಶೇಕಡ 10ರಷ್ಟು ಇಳಿದಿದೆ. ಇದರ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಬೇಕು. ಎಂಆರ್‌ಪಿ ಇಳಿಸಬೇಕು ಎಂದು ಹೇಳಿದ್ದೇವೆ' ಎಂದು ಪಾಂಡೆ ಸಭೆಯ ನಂತರ ತಿಳಿಸಿದ್ದಾರೆ.

ಆಮದು ಮಾಡಿಕೊಳ್ಳುವ ತಾಳೆಎಣ್ಣೆ, ಸೋಯಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆ ಎಂಆರ್‌ಪಿಯನ್ನು ಮುಂದಿನ ವಾರದೊಳಗೆ ಲೀಟರಿಗೆ ₹ 10 ರವರೆಗೆ ಇಳಿಸುವುದಾಗಿ ಪ್ರಮುಖ ತಯಾರಕರು ಭರವಸೆ ನೀಡಿದ್ದಾರೆ.

ಕೆ.ಜಿ. ಎಣ್ಣೆ ಬೆಲೆ ಎಷ್ಟಿದೆ?	
ತಾಳೆ ಎಣ್ಣೆ	₹ 144.16
ಸೂರ್ಯಕಾಂತಿ ಎಣ್ಣೆ	₹185.77
ಸೋಯಾ ಎಣ್ಣೆ	₹ 185.77
ಸಾಸಿವೆ ಎಣ್ಣೆ	₹177.37
ಶೇಂಗಾ ಎಣ್ಣೆ	₹ 187.93

(ಜುಲೈ 6ರ ಅಖಿಲ ಭಾರತ ಸರಾಸರಿ ಬೆಲೆ.)
ಮಾಹಿತಿ: ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ

12ನೇ ಪುಟ ನೋಡಿ

ಕಲುಷಿತ ನೀರು: ವಿಚಾರಣೆ ಆರಂಭಿಸಿದ ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಗೋರ್ಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಲ್ಕಂದಿನ್ನಿ ಮತ್ತು ಜುಕೂರ ಗ್ರಾಮಗಳಲ್ಲಿ ಕಲುಷಿತ ನೀರು ಕುಡಿದು 8 ಮಂದಿ ಸಾವಿಗೀಡಾಗಿ, ಹಲವರು ಅನಾರೋಗ್ಯಕ್ಕೊಳಗಾದ ಘಟನೆ ಕುರಿತು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ಆರಂಭಿಸಿದ್ದಾರೆ.

'ಕಲುಷಿತ ನೀರು ಕುಡಿದು ಮಹಿಳೆ ಸಾವು; 40ಕ್ಕೂ ಹೆಚ್ಚು ಜನ ಅಸ್ವಸ್ಥ' ಶೀರ್ಷಿಕೆ ಅಡಿಯಲ್ಲಿ 'ಪ್ರಜಾವಾಣಿ'ಯ ಜುಲೈ 4ರ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು. ವರದಿಯ ತುಣುಕನ್ನು ಲಗತ್ತಿಸಿ ಲೋಕಾಯುಕ್ತರಿಗೆ ಇ–ಮೇಲ್ ಕಳುಹಿಸಿದ್ದ 'ನೈಜ ಹೋರಾಟಗಾರರ ವೇದಿಕೆ'ಯ ಎಚ್.ಎಂ. ವೆಂಕಟೇಶ್, ಘಟನೆಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸುವಂತೆ ಮನವಿ ಮಾಡಿದ್ದರು. ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಕೊಂಡು ವಿಚಾರಣೆ ಆರಂಭಿಸಿರುವ ಲೋಕಾಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗದ ನಿರ್ದೇಶಕರು, ರಾಯಚೂರು ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ, ಮಾನ್ವಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಗೋರ್ಕಲ್ ಗ್ರಾಮ ಪಂಚಾ ಯಿತಿಯ ಪಿಡಿಒ ಹಾಗೂ ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಿದ್ದಾರೆ.

'ತಕ್ಷಣದಿಂದಲೇ ಎರಡೂ ಗ್ರಾಮಗಳ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆ ಮಾಡಬೇಕು. ಈ ಕುರಿತು ಆಗಸ್ಟ್ 25ರಂದು ನಡೆಯುವ ವಿಚಾರಣೆ ವೇಳೆ ವರದಿ ಸಲ್ಲಿಸಬೇಕು' ಎಂದು ಲೋಕಾಯುಕ್ತರು ಪ್ರತಿವಾದಿಗಳಿಗೆ ನಿರ್ದೇಶನ ನೀಡಿದ್ದಾರೆ.

ಎರಡೂ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ, ತನಿಖೆ ನಡೆಸಿ ವರದಿ ಸಲ್ಲಿಸುವಂತೆ ರಾಯಚೂರು ಎಸ್‌ಪಿಗೆ ಆದೇಶಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಲ್‌ಪಿಜಿ ಸಿಲಿಂಡರ್ ದರ ₹ 50 ಹೆಚ್ಚಳ

ನವದೆಹಲಿ (ಪಿಟಿಐ): ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವು ಬುಧವಾರದಿಂದ ₹ 50 ಏರಿಕೆ ಆಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ 14.2 ಕೆ.ಜಿ.ಯ ಎಲ್‌ಪಿಜಿ ಸಿಲಿಂಡರ್ ದರವು ₹ 1055.5ಕ್ಕೆ ತಲುಪಿದೆ. 2021ರ ಜೂನ್‌ನಿಂದ ಇಲ್ಲಿಯವರೆಗೆ ಒಟ್ಟಾರೆ ₹ 244 ಹೆಚ್ಚಾಗಿದೆ. ದೆಹಲಿಯಲ್ಲಿ ಸಿಲಿಂಡರ್ ದರವು ₹ 1,003ರಿಂದ ₹ 1,053ಕ್ಕೆ ಏರಿಕೆ ಆಗಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಸಿಲಿಂಡರ್ ದರದಲ್ಲಿ ವ್ಯತ್ಯಾಸ ಇರುತ್ತದೆ.

23 ಪುಸ್ತಕಗಳ ಲೋಕಾರ್ಪಣೆ ನಾಳೆ

ಬೆಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರವು 30 ವರ್ಷಗಳನ್ನು ಪೂರೈಸಿದ ಪ್ರಯುಕ್ತ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ ಸಂಜೆ 5 ಗಂಟೆಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಪ್ರಾಧಿಕಾರ ಪ್ರಕಟಿಸಿದ 23 ಪುಸ್ತಕಗಳು ಲೋಕಾರ್ಪಣೆಯಾಗಲಿವೆ.

'ಕ.ಅ.ಪ್ರಾ 30ರ ಸಮಾರಂಭ', 'ಕನ್ನಡ ರಥ- ಕಾಯಕ ಪಥ' ಹಾಗೂ 'ಚಿಣ್ಣರ ಸಾಹಿತ್ಯ ಮಾಲೆ' ಕಾರ್ಯಕ್ರಮ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಅವರು ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

2023ನೇ ಸಾಲಿನ ವೈಮಾನಿಕ ಪ್ರದರ್ಶನಕ್ಕೆ ರಾಜ್ಯ ಸರ್ಕಾರದಿಂದ ಸಿದ್ಧತೆ ಆರಂಭ

ಯಲಹಂಕದಲ್ಲೇ ಏರೋ ಇಂಡಿಯಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಯಲಹಂಕದ ವಾಯುನೆಲೆಯಲ್ಲೇ 2023ನೇ ಸಾಲಿನ 'ಏರೋ ಇಂಡಿಯಾ' ವೈಮಾನಿಕ ಪ್ರದರ್ಶನ ನಡೆಸಲು ಕೇಂದ್ರ ಸರ್ಕಾರ ಒಲವು ತೋರಿದೆ. ಈ ಹಿನ್ನೆಲೆಯಲ್ಲಿ ವೈಮಾನಿಕ ಪ್ರದರ್ಶನ ಆಯೋಜಿಸಲು ಕರ್ನಾಟಕ ಸರ್ಕಾರ ಸಿದ್ಧತೆ ಆರಂಭಿಸಿದೆ.

1996ರಿಂದ ಅಂದರೆ, ಪ್ರಾರಂಭದಿಂದಲೂ ಯಲಹಂಕದ ವಾಯುನೆಲೆಯಲ್ಲಿಯೇ ಈ ಪ್ರದರ್ಶನ ನಡೆಯುತ್ತಿದೆ. ವೈಮಾನಿಕ ಪ್ರದರ್ಶನದ ಸ್ಥಳಾಂತರದ ಬಗ್ಗೆ ಕಳೆದ ಕೆಲವು ವರ್ಷಗಳಿಂದ ಚರ್ಚೆಗಳು ನಡೆಯುತ್ತಿವೆ.

'ವೈಮಾನಿಕ ಪ್ರದರ್ಶನವನ್ನು ಲಖನೌದಲ್ಲಿ ನಡೆಸಬೇಕು. ಇದರಿಂದ, ಉತ್ತರ ಪ್ರದೇಶದ ಅಭಿವೃದ್ಧಿಗೆ ಅನುಕೂಲವಾಗುತ್ತದೆ' ಎಂದು ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕೇಂದ್ರ ಸಚಿವರಿಗೆ 2019ರಲ್ಲಿ ಮನವಿ ಮಾಡಿದ್ದರು.



ಸಾಂದರ್ಭಿಕ ಚಿತ್ರ

ಇದಕ್ಕೆ ಕರ್ನಾಟಕದ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿ ಕೇಂದ್ರಕ್ಕೆ ಪತ್ರ ಬರೆದಿತ್ತು. ಕರ್ನಾಟಕದ ಸಂಸದರ ನಿಯೋಗವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಒತ್ತಡ ಹೇರಿತ್ತು. ಬಳಿಕ ಸ್ಥಳಾಂತರದ ಪ್ರಸ್ತಾವವನ್ನು ಕೈಬಿಡಲಾಗಿತ್ತು. ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿದ್ದರಿಂದ 2021ನೇ ಸಾಲಿನ ವೈಮಾನಿಕ ಪ್ರದರ್ಶನವನ್ನು ಸ್ಥಗಿತಗೊಳಿಸಲು ಕೇಂದ್ರ ಸರ್ಕಾರ ಯೋಜಿಸಿತ್ತು. ಬಳಿಕ ಸರ್ಕಾರ ಅನುಮತಿ ನೀಡಿತ್ತು. 2023ನೇ ಸಾಲಿನ ವೈಮಾನಿಕ ಪ್ರದರ್ಶನವನ್ನು ತಮ್ಮ ರಾಜ್ಯಕ್ಕೆ ಸ್ಥಳಾಂತರಿಸಬೇಕು ಎಂದು ಉತ್ತರ ಪ್ರದೇಶ, ರಾಜಸ್ಥಾನ, ಗೋವಾ ಸೇರಿದಂತೆ ಅನೇಕ ರಾಜ್ಯಗಳು ಮನವಿ ಸಲ್ಲಿಸಿವೆ. ಆದರೆ, ಈ ಬೇಡಿಕೆಗೆ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ.

ಕರ್ನಾಟಕದಲ್ಲಿ 2023ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಒಂದು ವೇಳೆ ವೈಮಾನಿಕ ಪ್ರದರ್ಶನವನ್ನು ಸ್ಥಳಾಂತರಿಸಿದರೆ ತಪ್ಪು ಸಂದೇಶ ಹೋಗಲಿದೆ ಎಂಬ ಆತಂಕ ಕೇಂದ್ರ ಸರ್ಕಾರವನ್ನು ಕಾಡುತ್ತಿದೆ. ಜತೆಗೆ, ವೈಮಾನಿಕ ಪ್ರದರ್ಶನಕ್ಕೆ ಬೆಂಗಳೂರಿನಷ್ಟು ಸೂಕ್ತ ನೆಲೆ ಬೇರೆ ಎಲ್ಲೂ ಇಲ್ಲ. ವೈಮಾನಿಕ ಪ್ರದರ್ಶನ ಬೆಂಗಳೂರಿನಲ್ಲೇ ನಡೆಯಲಿದೆ ಎಂಬುದನ್ನು ಖಚಿತಪಡಿಸಿಕೊಂಡಿರುವ ಕರ್ನಾಟಕ ಸರ್ಕಾರ, ಅದಕ್ಕಾಗಿ ಪೂರ್ವ ತಯಾರಿ ಆರಂಭಿಸಿದೆ.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅಧ್ಯಕ್ಷತೆಯಲ್ಲಿ ಹಿರಿಯ ಅಧಿಕಾರಿಗಳ ಸಭೆ ಇದೇ 11ರಂದು ಸಂಜೆ 4ಕ್ಕೆ ಬೆಂಗಳೂರಿನ ವಿಧಾನಸೌಧದಲ್ಲಿ ನಡೆಯಲಿದೆ.

ಸಭೆಗೆ ಹಾಜರಾಗುವಂತೆ ಹಲಕಾಸು ಇಲಾಖೆ, ಗೃಹ, ನಗರಾಭಿವೃದ್ಧಿ, ಲೋಕೋಪಯೋಗಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಮೂಲಸೌಕರ್ಯ, ಡಿಜಿಪಿ–ಐಜಿಪಿ, ಯಲಹಂಕದ ವಾಯುನೆಲೆಯ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ನ್ಯಾ.ಸಂದೇಶ್‌ಗೆ ಎಎಪಿ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ತಡೆ ಘಟಕಕ್ಕೆ(ಎಸಿಬಿ) ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಎಚ್. ಸಿ. ಸಂದೇಶ್ ಅವರಿಗೆ ಬೆದರಿಕೆ ಹಾಕಿರುವ ಘಟನೆ ಆಘಾತಕಾರಿ ಬೆಳವಣಿಗೆ' ಎಂದು ಆಮ್ ಆದ್ಮಿ ಪಕ್ಷ ಕಳವಳ ವ್ಯಕ್ತಪಡಿಸಿದೆ.

'ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ನ್ಯಾಯಾಂಗ ವ್ಯವಸ್ಥೆಯನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿದೆ. ಸರ್ಕಾರ ನ್ಯಾಯಮೂರ್ತಿಗಳ ಮೇಲೆ ಒತ್ತಡ ಹಾಕುವ ಮೂಲಕ ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡಲು ಪ್ರಯತ್ನಿಸುತ್ತಿದೆ. ಸರ್ಕಾರದ ಕುತಂತ್ರಗಳಿಗೆ ಮಣಿಯದ ನ್ಯಾ. ಎಚ್.ಸಿ. ಸಂದೇಶ್ ಅವರಿಗೆ ಪಕ್ಷ ನೈತಿಕ ಬೆಂಬಲ ನೀಡಿದೆ' ಎಂದು ಎಎಪಿ ಕಾನೂನು ಘಟಕದ ಅಧ್ಯಕ್ಷ ನಂಜಪ್ಪ ಕಾಳೇಗೌಡ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಬಳ್ಳಾರಿ ಗಣಿ ಅಕ್ರಮಗಳಿಗೆ ಸಹಕರಿಸಿದ ಆರೋಪವಿರುವ ಸೀಮಂತ್ ಕುಮಾರ್ ಅವರನ್ನು ಎಸಿಬಿಯ ಎಡಿಜಿಪಿ ಮಾಡಿರುವುದು ಖಂಡನೀಯ. ಜನರ ತೆರಿಗೆ ಹಣವನ್ನು ರಕ್ಷಿಸಬೇಕಾಗಿದ್ದ ಎಸಿಬಿಯೂ ಭ್ರಷ್ಟರ ಪರವಾಗಿ ಕೆಲಸ ಮಾಡುತ್ತಿದೆ. ಕೂಡಲೇ ಸೀಮಂತ್ ಕುಮಾರ್ ಅವರನ್ನು ಎಸಿಬಿ ಎಡಿಜಿಪಿ ಸ್ಥಾನದಿಂದ ಬದಲಾಯಿಸಬೇಕು' ಎಂದು ಒತ್ತಾಯಿಸಿದರು.

ಎಎಪಿ ರಾಜ್ಯ ವಕ್ತಾರ ಕೆ. ಮಥಾಯಿ, 'ನ್ಯಾಯಮೂರ್ತಿ ಎಚ್. ಸಿ. ಸಂದೇಶ್ ಮಾಡಿರುವ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಪಿಎಸ್ಐ ನೇಮಕಾತಿಯಲ್ಲಿ ನಡೆದ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಮೃತ್ ಪೌಲ್ ವಿರುದ್ಧದ ಆರೋಪಗಳಲ್ಲಿ ಅಶ್ವತ್ಥನಾರಾಯಣ ಮತ್ತು ಯಡಿಯೂರಪ್ಪನವರ ಪುತ್ರ ವಿಜಯೇಂದ್ರ ಹೆಸರು ಕೇಳಿಬರುತ್ತಿದೆ. ಇವರಿಬ್ಬರನ್ನು ಬಂಧಿಸಿ ವಿಚಾರಣೆ ನಡೆಸಬೇಕು' ಎಂದು ಆಗ್ರಹಿಸಿದರು.

ಆರೋಗ್ಯ ಇಲಾಖೆ ಸಿಬ್ಬಂದಿ ಪ್ರತಿಭಟನೆ ಇಂದು

ಬೆಂಗಳೂರು: ಸಮಾನ ಕೆಲಸಕ್ಕೆ ಸಮಾನ ವೇತನ, ಸೇವಾಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ.

'ಆರೋಗ್ಯ ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಇರುವುದರಿಂದ ಆರೋಗ್ಯ ಸೇವೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಗಳಿವೆ' ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ವಿಶ್ವಾರಾಧ್ಯ ಎಚ್.ವೈ. ತಿಳಿಸಿದ್ದಾರೆ.

'ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿಯು 2020ರ ಡಿ.28ಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿ ಅನುಷ್ಠಾನ ಹಾಗೂ ಬೇಡಿಕೆಗಳ ಈಡೇರಿಕೆ ಬಗ್ಗೆ ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರಿಗೆ ಈಗಾಗಲೇ ಹಲವಾರು ಬಾರಿ ಮನವಿ ಸಲ್ಲಿಸಲಾಗಿದೆ. ಆದರೂ ವರದಿ ಅನುಷ್ಠಾನಕ್ಕೆ ಸರ್ಕಾರ ಕ್ರಮ ಕೈಗೊಂಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಡೆಂಗಿ: 10 ದಿನಗಳಲ್ಲಿ 491 ಪ್ರಕರಣ

ಬೆಂಗಳೂರು: ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಮತ್ತಷ್ಟು ಹೆಚ್ಚಳವಾಗಿವೆ. 10 ದಿನಗಳಲ್ಲಿ 491 ಮಂದಿ ಈ ಜ್ವರದಿಂದ ಬಳಲಿದ್ದಾರೆ.

ರಾಜ್ಯದಲ್ಲಿ ಈವರೆಗೆ ಡೆಂಗಿ ಜ್ವರಕ್ಕೆ ಒಳಪಟ್ಟವರ ಒಟ್ಟು ಸಂಖ್ಯೆ 2,741ಕ್ಕೆ ಏರಿಕೆಯಾಗಿದೆ. ಈ ವರ್ಷ 48,219 ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 22,280 ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 15,502 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 388 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಈ ವರ್ಷ ಡೆಂಗಿ ಜ್ವರದಿಂದ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಪ್ರಕರಣಗಳ ಸಂಖ್ಯೆ ಏಳು ಜಿಲ್ಲೆಗಳಲ್ಲಿ ಮೂರಂಕಿ, 22 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಉಡುಪಿಯಲ್ಲಿ 308, ಮೈಸೂರಿನಲ್ಲಿ 296, ದಕ್ಷಿಣ ಕನ್ನಡದಲ್ಲಿ 163, ಶಿವಮೊಗ್ಗದಲ್ಲಿ 144, ಚಿತ್ರದುರ್ಗದಲ್ಲಿ 136, ವಿಜಯಪುರದಲ್ಲಿ 106 ಹಾಗೂ ಹಾಸನದಲ್ಲಿ 102 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ಕ್ಕಿಂತ ಕಡಿಮೆ ಇವೆ.

27 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 17 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 10 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 658 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ.



ಜು.23ರಿಂದ ಎಪಿಪಿ ಮುಖ್ಯ ಪರೀಕ್ಷೆ

ಬೆಂಗಳೂರು: ರಾಜ್ಯದಲ್ಲಿ ಖಾಲಿ ಇರುವ 205 ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ (ಎಪಿಪಿ) ಹುದ್ದೆಗಳ ನೇಮಕಾತಿಗೆ ಇದೇ 23 ಮತ್ತು 24ರಂದು ಮುಖ್ಯ ಪರೀಕ್ಷೆ ನಡೆಯಲಿದೆ.

ರಾಜ್ಯ ಅಭಿಯೋಗ ಹಾಗೂ ಸರ್ಕಾರಿ ವ್ಯಾಜ್ಯಗಳ ಇಲಾಖೆ ಈ ಸಂಬಂಧ ಇದೇ 5ರಂದು ಅಧಿಸೂಚನೆ ಹೊರಡಿಸಿದೆ.

ಪರೀಕ್ಷೆಯ ಸಮಯ, ಕೇಂದ್ರದ ವಿವರ ಹಾಗೂ ಪ್ರವೇಶ ಪತ್ರ ಪಡೆಯುವ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (ಎನ್‌ಎಲ್‌ಎಸ್‌ಐಯು) ವೆಬ್‌ಸೈಟ್‌ನಲ್ಲಿ ಸಂಪೂರ್ಣ ಮಾಹಿತಿ ಲಭ್ಯವಿದೆ. ರಾಜ್ಯದ ಒಟ್ಟು 4 ಕೇಂದ್ರಗಳಲ್ಲಿ ಮುಖ್ಯ ಪರೀಕ್ಷೆ ನಡೆಯಲಿದೆ.



ಚಿಕ್ಕಪೇಟೆ ಕ್ಷೇತ್ರದ ಶಾಸಕರ ಕಚೇರಿ ಆವರಣದಲ್ಲಿ 6 ಜನ ಅಂಗವಿಕಲರಿಗೆ ತ್ರಿಚಕ್ರ ವಾಹನ ಮತ್ತು ಅರ್ಹ 300 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ಶಾಸಕರಾದ ಬಿ.ಉದಯ ಗರುಡಾಚಾರ್, ಗರುಡಾ ಫೌಂಡೇಷನ್ ಸಂಸ್ಥಾಪಕಿ ಮೇದಿನಿ ಗರುಡಾಚಾರ್ ವಿತರಿಸಿದರು

ಸಂಕ್ಷಿಪ್ತ ಸುದ್ದಿ

ಆನ್‌ಲೈನ್‌ನಲ್ಲಿ ದೇವರನಾಮ ಉಚಿತ ಕಲಿಕೆ

ಬೆಂಗಳೂರು: ಶ್ರೀ ಗುರುಗುಹ ಸಂಸ್ಥೆಯು ಪುರಂದರದಾಸರ ಆರಾಧನೋತ್ಸವದ ಅಂಗವಾಗಿ ದೇವರನಾಮ ಉಚಿತ ಶಿಬಿರವನ್ನು ಆನ್‌ಲೈನ್ ಮೂಲಕ ಒಂದು ತಿಂಗಳ ಕಾಲ ಹಮ್ಮಿಕೊಂಡಿದೆ.

ಪ್ರತಿ ಭಾನುವಾರ ವಿವಿಧ ವೇಳಾಪಟ್ಟಿ ಅಡಿ ಸುಲಲಿತ ರಾಗಸಂಯೋಜನೆ ಹೊಂದಿದ ದಾಸಸಾಹಿತ್ಯ, ವಚನಸಾಹಿತ್ಯ ಹಾಗೂ ಹಲವಾರು ಭಕ್ತಿಸಾಹಿತ್ಯ ರಚನೆಗಳ ಗಾಯನ ತರಗತಿಗಳನ್ನು ನಡೆಸಲಿದೆ.

ಆಗಸ್ಟ್ 7ರಿಂದ ಕಲಿಕಾ ಕಾರ್ಯಕ್ರಮದ ಅಭಿಯಾನ ಶುರುವಾಗಲಿದೆ. 15 ವರ್ಷ ಮೇಲ್ಪಟ್ಟ, ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡದೇ ಇರುವ ಮಹಿಳೆಯರೂ ಪಾಲ್ಗೊಳ್ಳಬಹುದು. ಆಗಸ್ಟ್ 1ರೊಳಗೆ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು.

ಅಭಿಯಾನಕ್ಕೆ ಸಂಬಂಧಿಸಿದಂತೆ ಪ್ರಶ್ನೆ, ಅನುಮಾನ ಇದ್ದರೆ music.guruguha@gmail.comಗೆ ಇ–ಮೇಲ್ ಮಾಡಬಹುದು. ಬೆಳಿಗ್ಗೆ 11.30ರಿಂದ ಮಧ್ಯಾಹ್ನ 12.30ರವರೆಗೆ 9448241149, 9480915777ಕ್ಕೆ ಕರೆ ಮಾಡಬಹುದು. ವೆಬ್‌ಸೈಟ್: bhakthisankeerthana.com.

ನಾಳೆಯಿಂದ 'ಫೋಟೊ ಟುಡೇ, ಸೈನ್ ಟುಡೇ' ಮೇಳ

ಬೆಂಗಳೂರು: ಅಂತರರಾಷ್ಟ್ರೀಯ ಛಾಯಾಚಿತ್ರ ಪ್ರದರ್ಶನ ಮೇಳ 'ಫೋಟೊ ಟುಡೆ, ಸೈನ್ ಟುಡೆ–2022' ಇದೇ 8 ಮತ್ತು 10ರಂದು ತ್ರಿಪುರ ವಾಸಿನಿ ಅರಮನೆ ಮೈದಾನದಲ್ಲಿ ನಡೆಯಲಿದೆ.

ಫೋಟೊ ಹಾಗೂ ವಿಡಿಯೊಗ್ರಫಿಗೆ ಸಂಬಂಧಿಸಿದಂತೆ ವಿವಿಧ ಕ್ಯಾಮೆರಾ ತಯಾರಿಕಾ ಕಂಪನಿಗಳು ಹಾಗೂ ಫೋಟೊ ಲ್ಯಾಬ್‌ಗಳು ಸೇರಿದಂತೆ 150ಕ್ಕೂ ಹೆಚ್ಚು ಮಳಿಗೆಗಳು ಪಾಲ್ಗೊಳ್ಳಲಿವೆ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಬೆಂಜಮಿನ್ ಭಾಸ್ಕರ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರದರ್ಶನ ಮೇಳವನ್ನು ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ. ಫೋಟೊ ಮತ್ತು ವಿಡಿಯೋಗ್ರಫಿಗೆ ಸಂಬಂಧಿಸಿದ 150ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. ಫೋಟೊ ಸ್ಟುಡಿಯೋಗೆ ಸಂಬಂಧಿಸಿದ ಉಪಕರಣಗಳು, ಫೋಟೊ ಮತ್ತು ವಿಡಿಯೊ ಕ್ಯಾಮೆರಾಗಳು, ಅಲ್ಬಂ ತಯಾರಿಸುವ, ವಿಡಿಯೊ ಎಡಿಟಿಂಗ್ ಮಾಡುವ, ಸ್ಟುಡಿಯೊ ಲೈಟಿಂಗ್‌ಗೆ ಪೂರಕವಾದ, ಫ್ರೇಮ್ ಸಿದ್ಧಪಡಿಸುವ ಉಪಕರಣಗಳು, ಐಡಿ ಕಾರ್ಡ್‌ಗಳ ಸಿದ್ಧಪಡಿಸುವಿಕೆ ಮಷಿನ್‌ಗಳ ಪ್ರದರ್ಶನ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಹೃದಯ ಕಾಯಿಲೆ ಪತ್ತೆಗೆ ಒಪ್ಪಂದ

ಬೆಂಗಳೂರು: ಹೃದಯ ಕಾಯಿಲೆಗಳ ಅಪಾಯದ ಬಗ್ಗೆ ಮುನ್ಸೂಚನೆ ನೀಡಲು ಅಪೋಲೊ ಆಸ್ಪತ್ರೆಯು ಸಿಂಗಪುರದ ಕನೆಕ್ಟೆಡ್ ಲೈಫ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅಪೋಲೊ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಪ್ರತಾಪ್ ಸಿ. ರೆಡ್ಡಿ ಮಾತನಾಡಿ,'ಆಸ್ಪತ್ರೆಯ ಸಾಧನವನ್ನು ಕಂಪ ನಿಯ ಆ್ಯಪ್‌ನೊಂದಿಗೆ ಸಂಪರ್ಕಿಸಲಾ ಗುತ್ತಿದೆ. ಕಾಯಿಲೆಯ ಗಂಭೀರತೆ ಅರಿಯಲು ಈ ಒಪ್ಪಂದ ಸಹಕಾರಿ. ಮುಂಚಿತವಾಗಿ ರೋಗ ನಿರ್ಣಯಿಸಿ, ಚಿಕಿತ್ಸೆಯನ್ನೂ ಒದಗಿಸಬಹುದು. ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ಲಭ್ಯವಾಗಲಿದೆ. ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ತಂತ್ರಜ್ಞಾನಗಳ ನೆರವಿನಿಂದ ಚಿಕಿತ್ಸೆಗಳು ಸುಲಭವಾಗುತ್ತಿವೆ' ಎಂದು ಹೇಳಿದರು.

'ಸಾಂಕ್ರಾಮಿಕವಲ್ಲದ ರೋಗಗಳು ಹೆಚ್ಚಳವಾಗುತ್ತಿವೆ. ಹೆಚ್ಚಿನ ಜನರು ಹೃದಯ ಸಂಬಂಧಿ ಸಮಸ್ಯೆ ಎದುರಿಸುತ್ತಿದ್ದಾರೆ. ಚಿಕ್ಕ ವಯಸ್ಸಿನವರಿಗೂ ಹೃದಯಾಘಾತ ವಾಗುತ್ತಿರುವುದು ಆತಂಕಕಾರಿ. ಸಾಂಕ್ರಾಮಿಕವಲ್ಲದ ರೋಗಗಳಿಂದ ಆರ್ಥಿಕ ಸಂಕಷ್ಟವೂ ಎದುರಾಗುತ್ತದೆ. ರೋಗ ಉಲ್ಬಣಿಸಿದಾಗ ಚಿಕಿತ್ಸೆ ನೀಡಿದರೆ ವೆಚ್ಚ ಅಧಿಕವಾಗುತ್ತದೆ. ಆದ್ದರಿಂದ ಪ್ರಾರಂಭಿಕ ಹಂತದಲ್ಲಿಯೇ ರೋಗ ನಿರ್ಣಯಿಸಿ, ಚಿಕಿತ್ಸೆ ಒದಗಿಸಬೇಕು' ಎಂದು ತಿಳಿಸಿದರು.

ಆಸ್ಪತ್ರೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಸಂಗೀತಾ ರೆಡ್ಡಿ, 'ಡಿಜಿಟಲ್ ತಂತ್ರಜ್ಞಾನದ ನೆರವಿನಿಂದ ವೈದ್ಯರು ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನೂ ಸುಲಭವಾಗಿ ನಡೆಸಲು ಸಾಧ್ಯ. ತಂತ್ರಜ್ಞಾನದ ನೆರವಿನಿಂದ ವೈದ್ಯಕೀಯ ಕ್ಷೇತ್ರದಲ್ಲಿ ಆವಿಷ್ಕಾರಗಳೂ ಹೆಚ್ಚಲಿವೆ' ಎಂದು ಹೇಳಿದರು.

ಕೃಷಿ ವಿ.ವಿ: ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಪ್ರಶಸ್ತಿಗಳಿಗಾಗಿ ಅರ್ಜಿ ಆಹ್ವಾನಿಸಿದೆ. ಆಸಕ್ತ ರೈತರು, ರೈತ ಮಹಿಳೆಯರು ಅರ್ಜಿ ಸಲ್ಲಿಸಬಹುದಾಗಿದೆ.

ಪ್ರಶಸ್ತಿಗಳ ವಿವರ ಇಂತಿದೆ:ರಾಜ್ಯ ಮಟ್ಟದ ಪ್ರಶಸ್ತಿಗಳು:

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಅಥವಾ ರೈತ ಮಹಿಳೆ ಪ್ರಶಸ್ತಿ, ಡಾ. ಎಂ.ಎಚ್. ಮರಿಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಅಥವಾ ರೈತ ಮಹಿಳೆ ಪ್ರಶಸ್ತಿ, ಕೆನರಾ ಬ್ಯಾಂಕ್ ಪ್ರಯೋಜಿತ ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ , ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಅಥವಾ ರೈತಮಹಿಳೆ ಪ್ರಶಸ್ತಿ.

ಜಿಲ್ಲಾ ಮಟ್ಟದ ಪ್ರಶಸ್ತಿಗಳು: ಜಿಲ್ಲಾ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ಜಿಲ್ಲಾ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ.

ತಾಲ್ಲೂಕು ಮಟ್ಟದ ಪ್ರಶಸ್ತಿಗಳು: ತಾಲ್ಲೂಕು ಮಟ್ಟದ ಅತ್ಯುತ್ತಮ ಯುವ ರೈತ ಪ್ರಶಸ್ತಿ, ತಾಲ್ಲೂಕು ಮಟ್ಟದ ಅತ್ಯುತ್ತಮ ಯುವ ರೈತ ಮಹಿಳೆ ಪ್ರಶಸ್ತಿ.

ನಿಗದಿತ ಅರ್ಜಿ ನಮೂನೆಯು ಜಂಟಿ ಕೃಷಿ ನಿರ್ದೇಶಕರ ಕಚೇರಿ, ವಿಸ್ತರಣಾ ನಿರ್ದೇಶಕರ ಕಚೇರಿ, ಜಿಕೆವಿಕೆ ಬೆಂಗಳೂರು ಮತ್ತು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ದೊರೆಯುತ್ತದೆ. ವೆಬ್‌ಸೈಟ್‌ನಲ್ಲೂ (www.uasbangalore.edu.in) ಸಹ ಅರ್ಜಿ ನಮೂನೆ ಲಭ್ಯ. ಜುಲೈ 31ರ ಒಳಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ 080-23330153, ವಿಸ್ತರಣೆ: 401.

ಬಿಬಿಎಂಪಿ: 534 ಮಕ್ಕಳಿಂದ ಭಿಕ್ಷಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 720 ಮಕ್ಕಳು ಶಾಲೆಯಿಂದ ಹೊರಗಿದ್ದು, 534 ಮಕ್ಕಳು ಭಿಕ್ಷಾಟನೆ ಹಾಗೂ 186 ಮಕ್ಕಳು ವ್ಯಾಪಾರ ಮಾಡುತ್ತಿದ್ದಾರೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಬಿಬಿಎಂಪಿಯ ಪೂರ್ವ ವಲಯದಲ್ಲಿ ಇಂತಹ ಮಕ್ಕಳು ಹೆಚ್ಚಿದ್ದಾರೆ. ಇವರನ್ನು ಶಾಲೆಗೆ ಸೇರಿಸಿ, ಅವರಿಗೆ ವಸತಿ ಕಲ್ಪಿಸುವ ಕೆಲಸವನ್ನೂ ಮಾಡಲಾಗುತ್ತಿದೆ. ಆದರೆ ಅವರು ಅಲ್ಲಿ ಉಳಿಯುವುದಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

‘ಶಿಕ್ಷಣ ಇಲಾಖೆಯಲ್ಲಿ ನಾನು ಕೆಲಸ ಮಾಡಿದ್ದೇನೆ. ಅಲ್ಲಿ ಸಾಕಷ್ಟು ಯೋಜನೆಗಳಿವೆ. ಆದರೆ ಮಕ್ಕಳು ನಿರಾಶ್ರಿತರ ಕೇಂದ್ರದ ಗೋಡೆ ಹಾರಿಕೊಂಡು ಹೊರಹೋಗುತ್ತಾರೆ. ಕಾರ್ಮಿಕರು ಹೆಚ್ಚಿರುವ ಸ್ಥಳದಲ್ಲಿ ಸಂಚಾರಿ ಶಾಲೆ ಪ್ರಾರಂಭಿಸಿದೆವು. ಅದೂ ಪರಿಣಾಮಕಾರಿಯಾಗಲಿಲ್ಲ. ಹೀಗಾಗಿ ನಾವು ಅವರ ಮನವೊಲಿಸಬೇಕು. ಪೋಷಕರಿಗೂ ಅರಿವು ಮೂಡಿಸಬೇಕಿದೆ. ಕೆಲವು ಎನ್‌ಜಿಒಗಳು ಇಂತಹ ಕೆಲಸ ಮಾಡುತ್ತಿವೆ. ಅವರೊಂದಿಗೆ ಸೇರಿ ಇಂತಹ ಕೆಲಸ ಮಾಡಲು ಸಾಧ್ಯವೇ ಎಂಬ ಪ್ರಯತ್ನ ಮಾಡಲಾಗುತ್ತದೆ’ ಎಂದರು.

ಪಾವತಿ ಪಾರ್ಕಿಂಗ್ ಚರ್ಚೆ ಇಲ್ಲ: ನಗರದಲ್ಲಿ ಪೇ ಆ್ಯಂಡ್ ಪಾರ್ಕಿಂಗ್ ಜಾರಿಗೆ ತರುವ ಬಗ್ಗೆ ಯಾವುದೇ ರೀತಿಯ ಚರ್ಚೆ ಈಗ ಆಗುತ್ತಿಲ್ಲ. ಆದರೆ ಎಲ್ಲೆಲ್ಲಿ ಬಹು ಅಂತಸ್ತಿನ ಕಾರು ನಿಲುಗಡೆ ವ್ಯವಸ್ಥೆ ಇದೆಯೋ ಅದರ ಸುತ್ತಮುತ್ತ ಕಾರು ನಿಲುಗಡೆಗೆ ಅವಕಾಶ ನೀಡಬಾರದು ಎಂಬ ಚರ್ಚೆ ಇದೆ ಎಂದು ಮುಖ್ಯ ಆಯುಕ್ತರು ಹೇಳಿದರು.

ಸ್ವಾತಂತ್ರ್ಯ ಉದ್ಯಾನದ ಕಾಮಗಾರಿ ವಿಳಂಬವಾಗಿದೆ. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಗಳು ನಡೆಯುತ್ತಿರುವುದರಿಂದ ಸಮಸ್ಯೆಯಾಗಿದೆ. ಆದಷ್ಟು ಬೇಗ ಕಾಮಗಾರಿ ಮುಗಿಸಿ, ಪ್ರವೇಶ ಕಲ್ಪಿಸಲಾಗುತ್ತದೆ ಎಂದರು.

ರೈಲ್ವೆ ಗೂಡ್ಸ್ ರಸ್ತೆಯನ್ನು ಸಂಚಾರಕ್ಕೆ ಸದ್ಯದಲ್ಲಿಯೇ ಮುಕ್ತಗೊಳಿಸಲಾಗುತ್ತದೆ. ಇನ್ನೊಂದು ವಾರದಲ್ಲಿ ವಾಹನ ಸಂಚರಿಸಬಹುದು ಎಂದರು.

‘ಮಂತ್ರಿ ಮಾಲ್ ಸೇರಿದಂತೆ ಮಾಲ್‌ಗಳ ಆಸ್ತಿ ತೆರಿಗೆ ವಿಷಯದಲ್ಲಿ ಬ್ಯಾಂಕ್ ಖಾತೆ ಜಪ್ತಿಗೆ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲು ಕಾನೂನು ವಿಭಾಗದಲ್ಲಿ ಚರ್ಚೆ ನಡೆಸಲಾಗುತ್ತಿದೆ. ಶೀಘ್ರವೇ ಕ್ರಮವಾಗಲಿದೆ. ಈ ಕೆಲಸವನ್ನು ನಾವು ಈ ಮೊದಲೇ ಮಾಡಬೇಕಿತ್ತು. ನಮ್ಮಿಂದ ವಿಳಂಬವಾಗಿದೆ’ ಎಂದು ತುಷಾರ್ ಗಿರಿನಾಥ್ ಒಪ್ಪಿಕೊಂಡರು.

ಬೀದಿಬದಿ ವ್ಯಾಪಾರಿಗಳಿಗೆ ಪರವಾನಗಿ ನೀಡುವ ಪ್ರಕ್ರಿಯೆ ನಡೆಯುತ್ತಿದೆ. ದಾಸರಹಳ್ಳಿ ವ್ಯಾಪ್ತಿಯಲ್ಲಿ ಎನ್‌ಜಿಒ ಉತ್ತಮ ಪ್ರಕ್ರಿಯೆ ನಡೆಸುತ್ತಿದೆ. ಅದನ್ನು ಅಳವಡಿಸಿಕೊಳ್ಳುವ ಬಗ್ಗೆ ಚಿಂತಿಸಲಾಗುತ್ತಿದೆ. ಆಹಾರದ ಗುಣಮಟ್ಟ, ಸ್ವಚ್ಛತೆ ಬಗ್ಗೆಯೂ ತರಬೇತಿ ನೀಡಲು ಯೋಜಿಸಲಾಗಿದೆ ಎಂದರು.

ಡೆಂಗಿ ನಿಯಂತ್ರಣಕ್ಕಾಗಿ ಲಾರ್ವಾ ನಿವಾರಣೆ, ಮನೆಗಳ ಬಳಿ ಔಷಧ ಸಿಂಪಡಣೆ ಕಾರ್ಯ ನಡೆಯುತ್ತಿದೆ ಎಂದರು.

ಪೊರಕೆಗೆ ₹300 ನಗದು

ಪೌರಕಾರ್ಮಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪೊರಕೆ ಖರೀದಿಸಲು ₹300 ನಗದು ನೀಡಲು ನಿರ್ಧರಿಸಲಾಗಿದೆ ಎಂದು ತುಷಾರ್ ಗಿರಿನಾಥ್ ಹೇಳಿದರು.

ಸಾಮಗ್ರಿಗಳ ಖರೀದಿಗೂ ನಗದು ನೀಡಬೇಕೆಂಬ ಬೇಡಿಕೆ ಇತ್ತು. ಆದರೆ ಎಲ್ಲದ್ದಕ್ಕೂ ಹಣ ನೀಡಿದರೆ ಅದು ಬೇರೆಯದ್ದಕ್ಕೆ ವ್ಯಯವಾಗುವ ಸಾಧ್ಯತೆ ಇರುವುದರಿಂದ ಪೊರಕೆಗೆ ಮಾತ್ರ ಅವಕಾಶ ಮಾಡಿಕೊಡಲಾಗಿದೆ ಎಂದರು.



ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಬುಧವಾರ ಕುರಿಗಳ ವ್ಯಾಪಾರ ನಡೆಯಿತು –ಪ್ರಜಾವಾಣಿ ಚಿತ್ರ

‘ಈದ್ಗಾ ಮೈದಾನ ಸ್ವಚ್ಛ ಮಾಡಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯಲ್ಲಿರುವ ಈದ್ಗಾ ಮೈದಾನದಲ್ಲಿ ಬಿಬಿಎಂಪಿ ವತಿಯಿಂದ ಸ್ವಚ್ಛತೆ ಸೇರಿದಂತೆ ಇನ್ನು ಮುಂದೆ ಯಾವುದೇ ರೀತಿಯ ಕೆಲಸ ಮಾಡುವುದಿಲ್ಲ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಈದ್ಗಾ ಮೈದಾನಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಪ್ರವೇಶಕ್ಕೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿದೆ. ಹಿಂದೆ ಸಮುದಾಯ ಹಾಗೂ ಬಿಬಿಎಂಪಿ ನಡುವಿನ ಸಾಮರಸ್ಯದಿಂದ ಕೆಲಸವಾಗುತ್ತಿತ್ತು. ಈಗ ಎಲ್ಲವೂ ಕಾನೂನು ಪ್ರಕಾರವೇ ನಡೆಯಲಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಹೇಳಿದರು.

‘ಯಾವುದೇ ಕಾರ್ಯಕ್ರಮಕ್ಕೆ ಅನುಮತಿ ನೀಡಲು ಬಿಬಿಎಂಪಿಗೆ ಅಧಿಕಾರ ಇಲ್ಲ. ಮಾಲೀಕತ್ವಕ್ಕೆ ಸಂಬಂಧಿಸಿದಂತೆ ತಕರಾರು ಇದೆ. ಖಾತೆ ಇದ್ದರೂ ನಮಗೂ ಮಾಲೀಕತ್ವ ಇಲ್ಲ. ಯಾರಿಗೂ ಮಾಲೀಕತ್ವ ಇಲ್ಲ’ ಎಂದರು.

‘ಈದ್ಗಾ ಮೈದಾನದಲ್ಲಿ ಕುರಿ ವ್ಯಾಪಾರಕ್ಕೆ ಬಿಬಿಎಂಪಿ ಯಾವುದೇ ರೀತಿಯ ಅನುಮತಿ ಅಥವಾ ಟ್ರೇಡ್ ಲೈಸೆನ್ಸ್ ನೀಡಿರುವ ಬಗ್ಗೆ ಪರಿಶೀಲಿಸಲಾಗುತ್ತದೆ. ಬಿಬಿಎಂಪಿ ಈ ಹಿಂದೆ ಚಾಮರಾಜಪೇಟೆ ಈದ್ಗಾ ಮೈದಾನದ ಸ್ವಚ್ಛತೆ ಕಾಪಾಡಲು, ಸುಗಂಧ ಸಿಂಪಡಿಸಲು ಸಾಕಷ್ಟು ವೆಚ್ಚ ಮಾಡಿದೆ. ಇದೀಗ ಸುಪ್ರೀಂಕೋರ್ಟ್ ಆದೇಶ ಇದೆ. ಅದರಂತೆ ನಡೆಯಬೇಕು ಎಂದು ಒತ್ತಾಯವಿರುವುದರಿಂದ ನಾವು ಇನ್ನುಮುಂದೆ ಒಳಪ್ರವೇಶಿಸುವುದಿಲ್ಲ’ ಎಂದು ತಿಳಿಸಿದರು.

6,056 ಸಕ್ರಿಯ ಪ್ರಕರಣ



ಬೆಂಗಳೂರು: ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳದಿಂದ ಸಕ್ರಿಯ ಪ್ರಕರಣಗಳ ಸಂಖ್ಯೆ 6,056ಕ್ಕೆ ಏರಿಕೆಯಾಗಿದೆ.

ಬುಧವಾರ 1,053 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ದೈನಂದಿನ ಕೋವಿಡ್ ಪರೀಕ್ಷೆಗಳ ಸಂಖ್ಯೆ 19 ಸಾವಿರದ ಗಡಿ ಸಮೀಪಿಸಿದೆ. ಸೋಂಕು ದೃಢ ಪ್ರಮಾಣ ಶೇ 4.26ರಷ್ಟಿದೆ. ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ 985 ಮಂದಿ ಹೊಸದಾಗಿ ಚೇತರಿಸಿಕೊಂಡಿದ್ದಾರೆ. ನಗರದಲ್ಲಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 18.09 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ ಈವರೆಗೆ 17.86 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಸೋಂಕಿತರಲ್ಲಿ ಸದ್ಯ 93 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. 84 ಮಂದಿ ಸಾಮಾನ್ಯ ಹಾಸಿಗೆ, ಆರು ಮಂದಿ ಎಚ್‌ಡಿಯು ಹಾಸಿಗೆ ಹಾಗೂ ಮೂವರು ಐಸಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಉಳಿದವರು ಮನೆ ಆರೈಕೆಗೆ ಒಳಗಾಗಿದ್ದಾರೆ. ನಗರದಲ್ಲಿ ಒಂದು ವಾರದಲ್ಲಿ 1.21 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, 6,189 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಅವಧಿಯಲ್ಲಿ 5,577 ಮಂದಿ ಚೇತರಿಸಿಕೊಂಡಿದ್ದಾರೆ. ಇಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ.

ವಾರದಿಂದ ಬೆಳ್ಳಂದೂರು (74), ಕಾಡುಗೋಡಿ (40), ದೊಡ್ಡನೆಕ್ಕುಂದಿ (37), ವರ್ತೂರು (31), ಎಚ್‌ಎಸ್‌ಆರ್ ಲೇಔಟ್ (27), ಹೊರಮಾವು (25), ಹಗದೂರು (21), ಹೂಡಿ (18), ಗರುಡಾಚಾರ್ ಪಾಳ್ಯ(14), ಬೇಗೂರಿನಲ್ಲಿ (14) ದೈನಂದಿನ ಪ್ರಕರಣಗಳ ಸರಾಸರಿ ಅಧಿಕವಿದೆ. ಈ ವಾರ್ಡ್‌ಗಳಲ್ಲಿ ನೂರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.

ಬೆಂಗಳೂರು ವಿ.ವಿ: 2 ತಿಂಗಳಾದರೂ ವಿದ್ಯಾರ್ಥಿಗಳಿಗೆ ಸಿಗದ ಕನ್ನಡ ಪಠ್ಯ

ಪದವಿ ಪಠ್ಯಪುಸ್ತಕಕ್ಕೂ ಪರದಾಟ

ಪ್ರಜಾವಾಣಿ ವಾರ್ತೆ



ಬೆಂಗಳೂರು: ತರಗತಿಗಳು ಆರಂಭವಾಗಿ ಎರಡು ತಿಂಗಳಾದರೂ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಪದವಿ ತರಗತಿಗಳ ಎರಡನೇ ಸೆಮಿಸ್ಟರ್‌ನ ಕನ್ನಡ ವಿಷಯದ ಪಠ್ಯಪುಸ್ತಕಗಳು ಇನ್ನೂ ದೊರೆಯುತ್ತಿಲ್ಲ.

ಈ ಬಾರಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕಾರಣಕ್ಕೆ ಪಠ್ಯಕ್ರಮ ರೂಪಿಸುವುದು ವಿಳಂಬವಾಯಿತು. ಪಠ್ಯಕ್ರಮಕ್ಕೆ ಅಂತಿಮ ರೂಪುರೇಷೆ ನೀಡುವ ಪ್ರಕ್ರಿಯೆ ತಡವಾಗಿದ್ದರಿಂದ ಪಠ್ಯಪುಸ್ತಕಗಳು ದೊರೆಯುವುದು ವಿಳಂಬವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೆಮಿಸ್ಟರ್ ಅವಧಿಗೆ ತಕ್ಕಂತೆ ಪಠ್ಯಕ್ರಮ ರೂಪಿಸಬೇಕು. ಪಠ್ಯಕ್ರಮದ ಸ್ವರೂಪವೂ ಗೊತ್ತಿರಬೇಕು. ಆದರೆ, ಈ ಬಾರಿ ಎಲ್ಲವೂ ಗೊಂದಲಗಳಲ್ಲೇ ನಡೆದಿದೆ. ವ್ಯವಸ್ಥಿತವಾಗಿ ನಡೆಯದ ಕಾರಣ ಈ ಪರಿಸ್ಥಿತಿ ಸೃಷ್ಟಿಯಾಗಿದೆ ಎನ್ನುವುದು ಪ್ರಾಧ್ಯಾಪಕರ ಅಭಿಪ್ರಾಯ.

‘ಈ ಬಾರಿ ಪಠ್ಯಕ್ರಮದ ಪಿಡಿಎಫ್ ಸಹ ನೀಡಿಲ್ಲ. ಪಠ್ಯಕ್ರಮದ ಅಂತಿಮ ರೂಪುರೇಷೆಯೇ ಗೊತ್ತಿಲ್ಲದಿದ್ದರೆ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಏನು ಬೋಧನೆ ಮಾಡುವುದು? ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಗೊಂದಲದಲ್ಲಿ ಸಿಲುಕಿದ್ದಾರೆ’ ಎಂದು ಕನ್ನಡ ಪ್ರಾಧ್ಯಾಪಕ ಶಿವಪ್ರಸಾದ್ ಎನ್ನುವವರು ದೂರಿದ್ದಾರೆ.

‘ಕಳೆದ ಸೆಮಿಸ್ಟರ್‌ನಲ್ಲೂ ಪರೀಕ್ಷೆ ಇನ್ನು ಒಂದು ವಾರ ಇರುವಾಗ ಪುಸ್ತಕಗಳು ದೊರೆತವು. ಈ ಬಾರಿಯೂ ಇದೇ ಪರಿಸ್ಥಿತಿಯಾಗಿದೆ. ಸುಮಾರು ಎರಡು ತಿಂಗಳಾಗುತ್ತ ಬಂದಿದ್ದರೂ ಪಠ್ಯಪುಸ್ತಕಗಳು ಇಲ್ಲ. ಸೆಮಿಸ್ಟರ್‌ನ ಆರಂಭದಲ್ಲೇ ದೊರೆತರೆ ಅನುಕೂಲವಾಗುತ್ತದೆ. ವಿಶ್ವವಿದ್ಯಾಲಯದಲ್ಲಿ ಯಾರೂ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ. ಪಠ್ಯಕ್ರಮವನ್ನಾದರೂ ತಿಳಿಸಿ ಎಂದು ಕೋರಿದರೂ ಸ್ಪಂದಿಸುತ್ತಿಲ್ಲ’ ಎಂದು ದೂರಿದರು.

‘ಕೆಲ ತಾಂತ್ರಿಕ ಸಮಸ್ಯೆಗಳಿಂದ ಪಠ್ಯಪುಸ್ತಕಗಳು ದೊರೆಯುವುದು ತಡವಾಗಿದೆ. ಎಲ್ಲ ಸಮಸ್ಯೆಗಳು ನಿವಾರಣೆಯಾಗಿವೆ. ಇನ್ನು ಒಂದು ವಾರದಲ್ಲಿ ಎಲ್ಲ ಪಠ್ಯಪುಸ್ತಕಗಳು ದೊರೆಯುತ್ತವೆ’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕಾಲೇಜು ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಆರ್. ಅಮರೇಂದ್ರ ಶೆಟ್ಟಿ ತಿಳಿಸಿದರು.

ಉದ್ಯಮಿ ರಾಹುಲ್ ಬಲ್ಲಾಳ್ ಇನ್ನಿಲ್ಲ



ಮಂಗಳೂರು: ಹೋಟೆಲ್ ಉದ್ಯಮಿ ಮೂಡುಬಿದಿರೆಯ ಬಲ್ಲಾಳ್ ಕುಟುಂಬದ ರಾಹುಲ್ ಬಲ್ಲಾಳ್ (51) ಬುಧವಾರ ನಿಧನರಾದರು.

ಅವರಿಗೆ ಪತ್ನಿ ಡಾ.ಪ್ರೀತಿ ಬಲ್ಲಾಳ್, ಪುತ್ರ ಆದಿತ್ಯ ಬಲ್ಲಾಳ್ ಇದ್ದಾರೆ. ಸಬರಬೈಲ್‌ನಲ್ಲಿ ಅಂತ್ಯಸಂಸ್ಕಾರ ನೆರವೇರಿತು.

ಉದ್ಯಮಿ ಜಯವರ್ಮರಾಜ್ ಬಲ್ಲಾಳ್ ಅವರ ಪುತ್ರ ರಾಹುಲ್ ಬಲ್ಲಾಳ್ ಕಾನೂನು ಪದವೀಧರರಾಗಿದ್ದರು. ಚೆನ್ನೈ, ಬೆಂಗಳೂರು, ಮಂಗಳೂರು, ಮೂಡುಬಿದಿರೆಯಲ್ಲಿ ಅವರ ಹೋಟೆಲ್ ಉದ್ಯಮ ಇವೆ.

ಖರೀದಿ ನೆಪದಲ್ಲಿ 110 ಲ್ಯಾಪ್‌ಟಾಪ್ ಕಳವು

ಬೆಂಗಳೂರು: ಸರ್ವಿಸ್‌ಗೆ ಬಂದಿದ್ದ ಲ್ಯಾಪ್‌ಟಾಪ್ ಕಳವು ಮಾಡಿದ್ದ ನಾಲ್ವರು ಆರೋಪಿಗಳನ್ನು ಸೋಲದೇವನಹಳ್ಳಿ ಪೊಲೀಸರು ಬಂಧಿಸಿ, 110 ಲ್ಯಾಪ್‌ಟಾಪ್ ವಶಪಡಿಸಿಕೊಂಡಿದ್ದಾರೆ.

ಝೆಡ್.ಎಂ.ಆರ್. ಎಂಟರ್‌ಪ್ರೈಸಸ್‌ನಲ್ಲಿ ರಿಪೇರಿ ಹಾಗೂ ಸರ್ವಿಸ್‌ಗೆ ಬಂದಿದ್ದ 120 ಲ್ಯಾಪ್‌ಟಾಪ್‌ಗಳಿದ್ದವು. ಹಳೇ ಲ್ಯಾಪ್‌ಟಾಪ್ ಖರೀದಿಸಿ ಮರು ಮಾರಾಟ ಸಹ ಮಾಡಲಾಗುತ್ತಿತ್ತು. ಜೂನ್ 16ರಂದು ಮಾಲೀಕರು ಅಂಗಡಿ ಬಂದ್ ಮಾಡಿ ಮನೆಗೆ ತೆರಳಿದ್ದರು. ಮರುದಿನ ಬಂದು ನೋಡುವಾಗ ಬಾಗಿಲು ಒಡೆದು ಲ್ಯಾಪ್‌ಟಾಪ್ ಕಳವು ಮಾಡಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆ ನಡೆಸಿದ ಪೊಲೀಸರು ಗುಜರಿ ವ್ಯಾಪಾರಿ ಅಸ್ಲಂ ಪಾಷಾ, ಬಟ್ಟೆ ವ್ಯಾಪಾರಿ ಯಾಸೀನ್ ಷರೀಫ್, ಮೊಬೈಲ್‌ಗೆ ಟೆಂಪರ್ಡ್ ಗ್ಲಾಸ್ ಅಳವಡಿಸುತ್ತಿದ್ದ ರಫೀಕ್, ಅಕ್ಬರ್‌ನನ್ನು ಬಂಧಿಸಲಾಗಿದೆ.

ಅಸ್ಲಂ ಪಾಷಾ ಗುಜರಿ ವ್ಯಾಪಾರದಲ್ಲಿ ನಷ್ಟ ಅನುಭವಿಸಿದ್ದ. ಸೆಕೆಂಡ್ ಹ್ಯಾಂಡ್ ಲ್ಯಾಪ್‌ಟಾಪ್ ಕಡಿಮೆ ಬೆಲೆಗೆ ಖರೀದಿಸಿ ಮಾರಾಟ ಮಾಡಿ ಹಣ ಸಂಪಾದಿಸುವ ಉದ್ದೇಶದಿಂದ ಅಸ್ಲಂ ಗ್ರಾಹಕರ ಸೋಗಿನಲ್ಲಿ ಅಂಗಡಿಗೆ ಹೋಗಿ ಖರೀದಿಯ ನಾಟಕವಾಡಿದ್ದ. ಖರೀದಿ ವಿಚಾರವಾಗಿ ಮಾಲೀಕರೊಂದಿಗೆ ಜಗಳವಾಡಿದ್ದ. ಬಳಿಕ ಅಂದೇ ರಾತ್ರಿ ಇತರ ಮೂವರೊಂದಿಗೆ ಸೇರಿಕೊಂಡು ಲ್ಯಾಪ್‌ಟಾಪ್ ಕಳವು ಮಾಡಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಚಿನ್ನಾಭರಣ ಕಳವು: ಇಬ್ಬರ ಬಂಧನ

ಬೆಂಗಳೂರು: ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದ ಇಬ್ಬರು ಮನೆ ಕೆಲಸದವರನ್ನು ಮಾಗಡಿ ರಸ್ತೆ ಠಾಣೆಯ ಪೊಲೀಸರು ಬಂಧಿಸಿ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಸೋನಿಯಾ ಹಾಗೂ ಜಯಂತಿ ಬಂಧಿತ ಆರೋಪಿಗಳು. ಬಂಧಿತರಿಂದ ಅಂದಾಜು ₹ 16 ಲಕ್ಷ ಮೌಲ್ಯದ 272 ಗ್ರಾಂ ಚಿನ್ನಾಭರಣ, 997 ಗ್ರಾಂ ಬೆಳ್ಳಿ ಸಾಮಗ್ರಿಗಳು ಹಾಗೂ ₹ 1.72 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.


ಸುದ್ದಿ 2 ನಿಮಿಷ

ಪ್ರೌಢಶಾಲೆಯಲ್ಲೇ ವೃತ್ತಿ ಮಾರ್ಗದರ್ಶನ ಕೋರ್ಸ್: ಅಶ್ವತ್ಥನಾರಾಯಣ

ಬೆಂಗಳೂರು: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಓದಿದವರೆಲ್ಲರೂ ಜಾಗತಿಕ ಉದ್ಯೋಗ ಮಾರುಕಟ್ಟೆಯಲ್ಲಿ ಪ್ರಸ್ತುತವಾಗುವಂತೆ ಮಾಡಲು ಪ್ರೌಢಶಾಲಾ ಹಂತದಲ್ಲೇ ವೃತ್ತಿ ಮಾರ್ಗದರ್ಶನ ಕೋರ್ಸ್ ಪರಿಚಯಿಸಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಬೆಂಗಳೂರಿನಲ್ಲಿ ಬುಧವಾರ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಡಿಜಿಟಲ್ ಅಕಾಡೆಮಿ ಮಿಷನ್ ಆಯೋಜಿಸಿದ್ದ ಸರ್ಕಾರ, ಉದ್ಯಮ, ಶೈಕ್ಷಣಿಕ ವಲಯದ ಪ್ರತಿನಿಧಿಗಳ ಜತೆಗಿನ ವರ್ಚ್ಯುಯಲ್ ಸಭೆಯಲ್ಲಿ ಅವರು ಮಾತನಾಡಿದರು.

ಯುವಪೀಳಿಗೆಯನ್ನು ಭವಿಷ್ಯದಲ್ಲಿ ಸ್ವಾವಲಂಬಿಯಾಗಿಸುವುದು ಮುಖ್ಯ. ಪ್ರಧಾನಿ ನರೇಂದ್ರ ಮೋದಿ ಅವರ ಗುರಿಯಂತೆ ಭಾರತವನ್ನು ಬಲಿಷ್ಠ ಆರ್ಥಿಕತೆಯ ರಾಷ್ಟ್ರವನ್ನಾಗಿಸಲು ಕರ್ನಾಟಕದ ಕೊಡುಗೆಯ ಅಗತ್ಯವಿದೆ. ಹಾಗಾಗಿ, ಸರ್ಕಾರ ವಿದ್ಯಾರ್ಥಿಗಳನ್ನು ಪ್ರತಿಭಾವಂತರನ್ನಾಗಿಸುವ ಯೋಜನೆ ಹೊಂದಿದೆ. ಉದ್ದಿಮೆದಾರರು, ಉದ್ದಿಮೆಗಳ ಪರಿಣತರು ಸೂಕ್ತ ಪ್ರಸ್ತಾವ ಹಾಗೂ ಅನುಷ್ಠಾನದ ವಿಧಿವಿಧಾನಗಳ ಕುರಿತು ಸಲಹೆ, ಸೂಚನೆ ಕೊಡಬೇಕು ಎಂದು ಮನವಿ ಮಾಡಿದರು.



ವಿಟಿಯು ಕುಲಪತಿ ಪ್ರೊ ಕರಿಸಿದ್ದಪ್ಪ, ಕರ್ನಾಟಕ ಡಿಜಿಟಲ್ ಎಕಾನಮಿ ಮುಖ್ಯಸ್ಥ ಸಂಜೀವ್ ಗುಪ್ತ, ಡಿಸಿಟಿಇ ಆಯುಕ್ತ ಪಿ.ಪ್ರದೀಪ್, ಎಲೆಕ್ಟ್ರಾನಿಕ್ಸ್, ಐಟಿಬಿಟಿ ಇಲಾಖೆ ನಿರ್ದೇಶಕಿ ಮೀನಾ ನಾಗರಾಜ್ ಮಾತನಾಡಿದರು.

ಜಕ್ಕೂರು ಕೆರೆ: ಅಭಿವೃದ್ಧಿ ಕಾಮಗಾರಿಗೆ ಸೂಚನೆ

ಬೆಂಗಳೂರು: ಯಲಹಂಕ ವಲಯ ವ್ಯಾಪ್ತಿಯ ಜಕ್ಕೂರು ಕೆರೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಆರಂಭಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

110 ಎಕರೆ ವ್ಯಾಪ್ತಿಯ ಜಕ್ಕೂರು ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಮುಖ್ಯ ಆಯುಕ್ತರು, ‘ಅಮೃತ ನಗರೋತ್ಥಾನ ಯೋಜನೆಯಡಿ ₹1.10 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತದೆ. ತುರ್ತು ಕಾಮಗಾರಿಗಳ ಯೋಜನೆ ರೂಪಿಸಿಕೊಂಡು ಕ್ರಮ ಕೈಗೊಳ್ಳಿ’ ಎಂದು ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಮೋಹನ್‌ಕೃಷ್ಣ ಅವರಿಗೆ ಆದೇಶಿಸಿದರು.

ತಜ್ಞರೊಂದಿಗೆ ಸಮಾಲೋಚಿಸಿ ವೆಟ್‌ಲ್ಯಾಂಡ್, ಶೌಚಾಲಯ ನವೀಕರಣ, ಒಳಹರಿವಿನ ಸುಧಾರಣೆ ಮತ್ತು ಒಳಹರಿವಿನ ಭಾಗಕ್ಕೆ ಫೆನ್ಸಿಂಗ್, ಜಲಪೋಷಣ ಸಂಘದವರ ಕೋರಿಕೆಯಂತೆ ವಾಚ್ ಟವರ್ ಹಾಗೂ ಮಾಹಿತಿ ಕೇಂದ್ರ ಸ್ಥಾಪಿಸಲು ಸೂಚಿಸಿದರು.

ವಲಯ ಜಂಟಿ ಆಯುಕ್ತರಾದ ಪೂರ್ಣಿಮಾ, ವಲಯ ಮುಖ್ಯ ಎಂಜಿನಿಯರ್ ರಂಗನಾಥ್ ಇದ್ದರು.

ವಂಚನೆ: ಕೇರಳದ ಇಬ್ಬರ ಸೆರೆ

ಬೆಂಗಳೂರು: ಬ್ಯಾಂಕ್ ಖಾತೆಗಳನ್ನು ಗುರಿಯಾಗಿಸಿ ವಂಚನೆ ಮಾಡುತ್ತಿದ್ದ ಕೇರಳದ ಇಬ್ಬರನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

ರಾಘವ್ ಲಾಲ್ ಹಾಗೂ ಪಿಳ್ಳೈ ಬಂಧಿತರು. ₹ 5 ಕೋಟಿಗೂ ಅಧಿಕ ಸಾಲ ಪಡೆದು ಸಾಲ ತೀರಿಸದೇ ಎನ್‌ಪಿಎ ಪಟ್ಟಿಯಲ್ಲಿದ್ದವರನ್ನು ಪತ್ತೆ ಮಾಡುತ್ತಿದ್ದ ಆರೋಪಿಗಳು ಬ್ಯಾಂಕ್ ಗ್ರಾಹಕರಿಗೆ ಕರೆ ಮಾಡಿ, ‘ಕಡಿಮೆ ಹಣಕ್ಕೆ ಬ್ಯಾಂಕ್ ವ್ಯವಹಾರ ಪೂರ್ಣಗೊಳಿಸುತ್ತೇವೆ’ ಎಂದು ನಂಬಿಸಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸುತ್ತಿದ್ದರು. ಸತೀಶ್ ಎಂಬುವರಿಗೆ ಆರೋಪಿಗಳು ₹ 82 ಲಕ್ಷ ವಂಚಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.



ಆರೋಗ್ಯ ಶಿಬಿರ

ಡಾ. ಶ್ಯಾಮಪ್ರಸಾದ್ ಮುಖರ್ಜಿ ಜನ್ಮದಿನದ ಪ್ರಯುಕ್ತ ಮಲ್ಲೇಶ್ವರದ ಬಿಜೆಪಿ ಕಚೇರಿಯಲ್ಲಿ ಆರೋಗ್ಯ ಶಿಬಿರ ಏರ್ಪಡಿಸಲಾಗಿತ್ತು. ಬಿಜೆಪಿ ರಾಜ್ಯ ಘಟಕದ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ಸಚಿವ ಮುನಿರತ್ನ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಜೈಲಿನಲ್ಲೇ ಒಬ್ಬರಿಗೊಬ್ಬರು ಭೇಟಿ: 14 ಪ್ರಕರಣಗಳಲ್ಲಿ ಭಾಗಿ

ದರೋಡೆ: ಆರೋಪಿಗಳ ಬಂಧನ

ರಾಮನಗರ: ಬೆಂಗಳೂರು ಸೇರಿದಂತೆ 9 ಠಾಣೆಗಳಿಗೆ ಬೇಕಾಗಿದ್ದ ದರೋಡೆಕೋರರನ್ನು ಚನ್ನಪಟ್ಟಣ ಗ್ರಾಮೀಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಮಾದನಾಯಕನಹಳ್ಳಿಯ ಮಣಿ (27), ಗಿರಿನಗರದ ರೇಣುಕುಮಾರ್ ಅಲಿಯಾಸ್ ಟಾಂಗು (27), ಬಸವನಗುಡಿಯ ವಿಜಿ ಅಲಿಯಾಸ್ ವಿಜಯ್(26) ಮತ್ತು ಮದ್ದೂರು ತಾಲ್ಲೂಕಿನ ಕುಕ್ಕೊರುದೊಡ್ಡಿ ಗ್ರಾಮದ ಶಿವ ಅಲಿಯಾಸ್ ಶಿವಪ್ರಸಾದ್ (29) ಬಂಧಿತರು.

ಇವರೆಲ್ಲರೂ ವಿವಿಧ ವೃತ್ತಿ ಮಾಡಿಕೊಂಡಿದ್ದು, ಕಳ್ಳತನವನ್ನು ಪ್ರವೃತ್ತಿಯಾಗಿಸಿಕೊಂಡಿದ್ದರು. ಅಪರಾಧ ಕೃತ್ಯ ಎಸಗಿ ಜೈಲು ಸೇರಿದ್ದರು. ಅಲ್ಲಿಯೇ ಎಲ್ಲರೂ ಭೇಟಿಯಾಗಿ ಹೊರಬಂದ ಬಳಿಕ ತಂಡ ಕಟ್ಟಿಕೊಂಡು ದರೋಡೆ ನಡೆಸುತ್ತಿದ್ದರು ಎನ್ನಲಾಗಿದೆ.

‘ಆರೋಪಿಗಳಿಂದ ಒಟ್ಟು 315 ಗ್ರಾಂ ಚಿನ್ನ, 7 ದ್ವಿಚಕ್ರವಾಹನಗಳನ್ನು ವಶಪಡಿಸಿಕೊಂಡಿದ್ದು, ಇದರ ಒಟ್ಟು ಮೌಲ್ಯ ₹18 ಲಕ್ಷ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಸಂತೋಷ ಬಾಬು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಚನ್ನಪಟ್ಟಣ, ಸಾತನೂರು, ರಾಮನಗರ ಗ್ರಾಮೀಣ, ತಲಘಟ್ಟಪುರ, ಕೆಂಗೇರಿ, ಗಿರಿನಗರ, ಜ್ಞಾನಭಾರತಿ, ಚಂದ್ರಾಲೇಔಟ್, ಸುಬ್ರಮಣ್ಯನಗರ ಪೊಲೀಸ್ ಠಾಣೆಗಳಲ್ಲಿ ಆರೋಪಿಗಳ ಮೇಲೆ ಒಟ್ಟು 14 ಪ್ರಕರಣಗಳು ದಾಖಲಾಗಿವೆ’ ಎಂದು ಮಾಹಿತಿ ನೀಡಿದರು.

ಪತ್ತೆಯಾಗಿದ್ದು ಹೇಗೆ?: ಚನ್ನಪಟ್ಟಣದ ಕೆಂಗಲ್ ಬಳಿ ಕಳೆದ ಜೂನ್ 30ರಂದು ಬೆಳಿಗ್ಗೆ 5 ಗಂಟೆ ಸುಮಾರಿಗೆ ಐವರು ದುಷ್ಕರ್ಮಿಗಳು ಆಯುಧಗಳನ್ನು ಹಿಡಿದು ದರೋಡೆಗೆ ಹೊಂಚು ಹಾಕುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಚನ್ನಪಟ್ಟಣ ಗ್ರಾಮೀಣ ಠಾಣೆ ಪೊಲೀಸರು ದಾಳಿ ನಡೆಸಿದ್ದರು. ಈ ವೇಳೆ ಈ ನಾಲ್ವರು ಆರೋಪಿಗಳು ಪೊಲೀಸರಿಗೆ ಅತಿಥಿಯಾಗಿದ್ದಾರೆ. ವಿಚಾರಣೆ ವೇಳೆ ಆರೋಪಿಗಳ ಹಿಂದಿನ ಕೃತ್ಯಗಳು ಬೆಳಕಿಗೆ ಬಂದಿವೆ.

ಗೌರಿ ಲಂಕೇಶ್ ಹತ್ಯೆ: ಮೂರನೇ ದಿನವೂ ಮುಂದುವರಿದ ವಿಚಾರಣೆ

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ವಿಚಾರಣೆಯನ್ನು ಸೆಷನ್ಸ್ ನ್ಯಾಯಾಲಯ ಮೂರನೇ ದಿನವಾದ ಬುಧವಾರವೂ ನಡೆಸಿತು.

ಪ್ರಕರಣದ ವಿಚಾರಣೆ ನಡೆಸಿದ ಬೆಂಗಳೂರು ನಗರ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಚಂದ್ರಶೇಖರ ಮೃತ್ಯುಂಜಯ ಜೋಶಿ ಅವರು, ಗೌರಿ ವಾಸವಿದ್ದ ಮನೆಯ ಎದುರಿನ ಅಪಾರ್ಟ್‌ಮೆಂಟ್ ವಾಚ್‌ಮನ್ ಮತ್ತು ಕೇಬಲ್ ಆಪರೇಟರ್ ಅವರ ಸಾಕ್ಷಿ ಹೇಳಿಕೆ ದಾಖಲಿಸಿಕೊಂಡರು. ಇವರಿಬ್ಬರೂ ಹತ್ಯೆ ನಡೆದ ನಂತರ ಮೊದಲಿಗೆ ಶವವನ್ನು ನೋಡಿದ ವ್ಯಕ್ತಿಗಳಾಗಿದ್ದು ವಕೀಲ ಎಸ್. ಬಾಲನ್ ನೇತೃತ್ವದ ಪ್ರಾಸಿಕ್ಯೂಷನ್ ಮತ್ತು ರಕ್ಷಣಾ ತಂಡದ ಪರ ವಕೀಲರಾದ ಎಂ. ಗಂಗಾಧರ ಶೆಟ್ಟಿ ಹಾಗೂ ಪಿ. ಕೃಷ್ಣಮೂರ್ತಿ ಪಾಟಿ ಸವಾಲಿಗೆ ಒಳಪಡಿಸಿದರು.

ಗೌರಿ ಲಂಕೇಶ್ ಅವರನ್ನು 2017ರ ಸೆಪ್ಟೆಂಬರ್ 5ರಂದು ರಾಜರಾಜೇಶ್ವರಿ ನಗರದಲ್ಲಿರುವ ಅವರ ನಿವಾಸದ ಹೊರಗೆ ಬೈಕಿನಲ್ಲಿ ಬಂದ ವ್ಯಕ್ತಿಗಳು ಗುಂಡಿಟ್ಟು ಹತ್ಯೆ ಮಾಡಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 17 ಮಂದಿಯನ್ನು ಬಂಧಿಸಲಾಗಿದೆ. ಎಲ್ಲ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ), ಕರ್ನಾಟಕ ಸಂಘಟಿತ ಅಪರಾಧಗಳ ಕಾಯ್ದೆ (ಕೊಕಾ) ಮತ್ತು ಶಸ್ತ್ರಾಸ್ತ್ರ ಕಾಯ್ದೆಗಳ ವಿವಿಧ ಕಲಂಗಳಡಿ ದೋಷಾರೋಪ ಹೊರಿಸಲಾಗಿದೆ.

ಸವದತ್ತಿ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿಗೆ ಸಭೆ

ಬೆಂಗಳೂರು: ಬೆಳಗಾವಿ ಜಿಲ್ಲೆ ಸವದತ್ತಿ ಯಲ್ಲಮ್ಮ ದೇವಸ್ಥಾನದ ಮೂಲಸೌಕರ್ಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಅಧಿಕಾರಿಗಳ ಜತೆ ಸಭೆ ನಡೆಸಿದರು.

ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಲಾಯಿತು. ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ ವರದಿ ಸಲ್ಲಿಸುವಂತೆಯೂ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು. ಸುಮಾರು ₹26 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲು ಚಿಂತನೆ ನಡೆದಿದೆ. ರೇಣುಕಾ ಯಲ್ಲಮ್ಮ, ಬಸವರಾಜ ಬೊಮ್ಮಾಯಿ ಅವರ ಮನೆ ದೇವರು ಎಂದೂ ಮೂಲಗಳು ಹೇಳಿವೆ.

ಪ್ರತ್ಯೇಕ ಅಪಘಾತ: ಶಿಕ್ಷಕಿ ಸೇರಿ ಇಬ್ಬರ ಸಾವು

ಬೆಂಗಳೂರು: ನಗರದಲ್ಲಿ ಬುಧವಾರ ನಡೆದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪಘಾತದಲ್ಲಿ ಖಾಸಗಿ ಶಾಲಾ ಶಿಕ್ಷಕಿ ನಮ್ರತಾ ಶರ್ಮಾ (54) ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಟಿಪ್ಪರ್ ಚಾಲಕ ಪರಾರಿಯಾಗಿದ್ದಾನೆ. ಸಂಜೆ 4 ಗಂಟೆಯ ವೇಳೆಯಲ್ಲಿ ಕೆಲಸ ಮುಗಿಸಿಕೊಂಡು ಯಲಹಂಕ ಮಾರ್ಗವಾಗಿ ಮನೆಗೆ ತೆರಳುತ್ತಿದ್ದರು. ವಿದ್ಯಾನಗರ ಕಡೆಯಿಂದ ಬಂದ ಟಿಪ್ಪರ್, ಬೈಕ್‌ಗೆ ಡಿಕ್ಕಿಯಾಗಿದೆ. ಚಿಕ್ಕಜಾಲ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಮಾಕ್ಷಿಪಾಳ್ಯದಲ್ಲಿ ನಡೆದ ಅಪಘಾತದಲ್ಲಿ ಪೇಂಟರ್ ನಾಗರಾಜ್ (54) ಮೃತಪಟ್ಟಿದ್ದಾರೆ. ರಸ್ತೆ ದಾಟುತ್ತಿದ್ದ ವೇಳೆ ಕಾರು ಅವರಿಗೆ ಡಿಕ್ಕಿಯಾಗಿದೆ. ನೈಸ್ ರಸ್ತೆಯಲ್ಲಿ ಬ್ರಹ್ಮದೇವರ ಗುಟ್ಟೆ ಬಳಿ ರಸ್ತೆ ದಾಟುತ್ತಿದ್ದರು. ಮಾಗಡಿ ರಸ್ತೆ ಕಡೆ ಅತಿ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ.

ಪಠ್ಯಪುಸ್ತಕ ಪರಿಷ್ಕರಣೆ ಕುರಿತ ಸಂವಾದದಲ್ಲಿ ನಿವೃತ್ತ ನ್ಯಾ. ನಾಗಮೋಹನ ದಾಸ್ ಒತ್ತಾಯ

ಸಮಿತಿಗೆ ಆಯೋಗದ ಸ್ಥಾನ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ, ಪ್ರಜಾಸತ್ತಾತ್ಮಕ ಆಶಯಗಳಿಗೆ ಪೂರಕವಾಗಿ ಪಠ್ಯಪುಸ್ತಕ ರಚಿಸಲು ಸ್ವತಂತ್ರ ಆಯೋಗದ ರೀತಿ ರಾಷ್ಟ್ರೀಯ, ರಾಜ್ಯ ಪಠ್ಯಪುಸ್ತಕ ರಚನಾ ಸಮಿತಿಗಳನ್ನು ಅನುಷ್ಠಾನಗೊಳಿಸಬೇಕು ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಒತ್ತಾಯಿಸಿದರು.

ವಿಶ್ವಮಾನವ ಕ್ರಾಂತಿಕಾರಿ ಕುವೆಂಪು ಹೋರಾಟ ಸಮಿತಿ ಪಠ್ಯ ಪರಿಷ್ಕರಣೆ ಕುರಿತು ಬುಧವಾರ ಇಲ್ಲಿ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಠ್ಯಪುಸ್ತಕ ರಚನಾ ಸಮಿತಿ ಯಾವ ಅಂಶಗಳ ಆಧಾರದ ಮೇಲೆ ಪಠ್ಯಗಳನ್ನು ಆಯ್ಕೆ ಮಾಡಬೇಕು ಎನ್ನುವ ಕುರಿತು ಸ್ಪಷ್ಟ ನಿಯಮಗಳನ್ನು ರೂಪಿಸಬೇಕು. ಸಂವಿಧಾನದ ಮೂಲತತ್ವ, ಸಾಮಾಜಿಕ ನ್ಯಾಯ, ಒಕ್ಕೂಟ ವ್ಯವಸ್ಥೆ, ಜನ ಕಲ್ಯಾಣ, ಬಹುತ್ವ, ಸಮಾನತೆಗೆ ಒತ್ತು ನೀಡುವ ವಿಷಯ ವಸ್ತುಗಳನ್ನು ಕಡ್ಡಾಯಗೊಳಿಸಬೇಕು. ವಿದ್ಯಾರ್ಥಿಗಳು ಭವಿಷ್ಯದಲ್ಲಿ ದೇಶದ ಸಮಸ್ಯೆ, ಸವಾಲುಗಳನ್ನು ಎದುರಿಸುವ, ಸೂಕ್ತ ಪರಿಹಾರ ಕಂಡುಕೊಳ್ಳುವ, ಸಾಮಾಜಿಕ ಸಾಮರಸ್ಯ ಕಾಪಾಡುವ, ನೈತಿಕ ಪ್ರಜ್ಞೆ ಒಳಗೊಂಡ ಮನೋಸ್ಥಿತಿ ಬೆಳೆಸಿಕೊಳ್ಳಲು ಪಠ್ಯಗಳು ಸಹಕಾರಿಯಾಗಬೇಕು. ಅದಕ್ಕಾಗಿ ಸಮಿತಿಯಲ್ಲಿ ಯಾರು ಇರಬೇಕು ಎನ್ನುವ ಮಾನದಂಡಗಳನ್ನೂ ಅಳವಡಿಸಬೇಕು ಎಂದು ಸಲಹೆ ನೀಡಿದರು.

ಸ್ವಾತಂತ್ರ್ಯಾ ನಂತರ ಇದೇ ಮೊದಲ ಬಾರಿ ರಾಜ್ಯದಲ್ಲಿ ಸಮಾನ, ಗುಣಾತ್ಮಕ ಶಿಕ್ಷಣದ ಕೊರತೆ ಇರುವ ಪಠ್ಯಪುಸ್ತಕ ವಿತರಿಸಲಾಗಿದೆ. ಪರಿಷ್ಕರಣೆ ನೆಪದಲ್ಲಿ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಸಂಸ್ಕೃತಿ, ನಾಗರಿಕತೆ, ಇತಿಹಾಸವನ್ನೇ ಹಿಂದಕ್ಕೆ ತಳ್ಳುವ ಪ್ರಯತ್ನಗಳಿಗೆ ಅವಕಾಶ ಇರಬಾರದು. ಇದರಿಂದ ಮಕ್ಕಳ ಮನಸ್ಸಿನಲ್ಲಿ ವಿಷ ತುಂಬಿದಂತಾಗುತ್ತದೆ ಎಂದು ಎಚ್ಚರಿಸಿದರು.

ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಮಾತನಾಡಿ, 1975ರಲ್ಲಿ ರೂಪಿಸಿದ ಮೊದಲ ಪಠ್ಯಕ್ರಮದಲ್ಲೇ ಯಾವ ವಿಷಯಗಳು ನಿರ್ಣಾಯಕವಾಗಬೇಕು ಎನ್ನುವ ಸ್ಪಷ್ಟತೆ ನೀಡಲಾಗಿದೆ. ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸುವ ಪಠ್ಯಗಳ ರಚನೆ ಸಮಿತಿಗಳ ಜವಾಬ್ದಾರಿ. ರಾಜ್ಯದಲ್ಲಿ ಅಯೋಗ್ಯ ಶಿಕ್ಷಣ ಸಚಿವರಿಂದಾಗಿ ಅಂತಹ ಎಲ್ಲ ಆಶಯಗಳೂ ಮಣ್ಣುಪಾಲಾಗಿವೆ. ಭವಿಷ್ಯದಲ್ಲಿ ಎಲ್ಲ ವಿಷಯಗಳನ್ನೂ ಹೊಸ ವಿನ್ಯಾಸದಲ್ಲಿ ಬರೆಸುವ ಗುಪ್ತ ಕಾರ್ಯಸೂಚಿಯನ್ನು ಬಿಜೆಪಿ ಸರ್ಕಾರಗಳು ಹೊಂದಿವೆ ಎಂದು ಆರೋಪಿಸಿದರು.

ಸಾಹಿತಿ ರಾಜಪ್ಪ ದಳವಾಯಿ, ಪತ್ರಕರ್ತ ಬಿ.ಎಂ.ಹನೀಫ್, ಎಲ್. ಎನ್. ಮುಕುಂದ್ ರಾಜ್ ವಿಷಯ ಮಂಡಿಸಿದರು. ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ಸಮಿತಿಯ ಅಧ್ಯಕ್ಷ ಜಿ.ಬಿ.ಪಾಟೀಲ, ಮಂಜುನಾಥ ಅದ್ದೆ, ಗಂಗಾಧರ ಮೂರ್ತಿ ಉಪಸ್ಥಿತರಿದ್ದರು.



ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಆಯೋಜಿಸಿದ್ದ ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಕೆ.ಆರ್ ಸೌಮ್ಯ, ರಾಜಪ್ಪ ದಳವಾಯಿ, ಬರಗೂರು ರಾಮಚಂದ್ರಪ್ಪ, ಎಚ್.ಎನ್. ನಾಗಮೋಹನ್ ದಾಸ್, ಜಿ.ಬಿ ಪಾಟೀಲ್, ನಿರಂಜನಾರಾಧ್ಯ ವಿ.ಪಿ., ಬಿ.ಎಂ ಹನೀಫ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಕುವೆಂಪು ಹೋರಾಟ ಸಮಿತಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮ
- 'ರಾಜ್ಯದಲ್ಲಿ ಸಮಾನ, ಗುಣಾತ್ಮಕ ಶಿಕ್ಷಣದ ಕೊರತೆ ಇರುವ ಪಠ್ಯಪುಸ್ತಕ ವಿತರಣೆ'
- 'ರಾಜ್ಯದಲ್ಲಿ ಅಯೋಗ್ಯ ಶಿಕ್ಷಣ ಸಚಿವರಿದ್ದಾರೆ'

ಪಠ್ಯಪುಸ್ತಕಗಳಲ್ಲಿ ಸಾಮಾಜಿಕ ಆಶಯ, ಸಾಮರಸ್ಯಕ್ಕೆ ಧಕ್ಕೆಯಾಗಿದ್ದರೂ ಹಲವು ಮಠಾಧೀಶರು, ಶರಣರು, ದೊಡ್ಡ ಸಾಹಿತಿಗಳು, ಹೋರಾಟಗಾರರು ತಣ್ಣಗೆ ಕುಳಿತಿದ್ದಾರೆ. ಸರ್ಕಾರದ ಋಣದ ಭಾರ ಅವರನ್ನು ತಡೆದಿರಬಹುದು.

ಕೆ.ಆರ್.ಸೌಮ್ಯ, ಕವಯಿತ್ರಿ.

ಖರ್ಚುವೆಚ್ಚಗಳ ಹೋಲಿಕೆಗೆ ಬರಗೂರು ಆಕ್ಷೇಪ

2014–15ರಲ್ಲಿ ರಚಿತವಾದ ತಮ್ಮ ನೇತೃತ್ವದ ಪಠ್ಯ ಪರಿಷ್ಕರಣಾ ಸಮಿತಿ 172 ಸದಸ್ಯರನ್ನು ಒಳಗೊಂಡಿತ್ತು. 123 ಪಠ್ಯಗಳನ್ನು ಪರಿಷ್ಕರಿಸಿತ್ತು. ನೂರಾರು ಸಭೆಗಳ ಮೂಲಕ ಸಮಗ್ರ ಪರಿಷ್ಕರಣೆಗೆ ಎರಡೂವರೆ ವರ್ಷಗಳ ಅವಧಿ ತೆಗೆದುಕೊಂಡಿತ್ತು. ಹಾಗಾಗಿ, ಖರ್ಚು ವೆಚ್ಚಗಳನ್ನು ಮಾಡಲಾಗಿತ್ತು. ಈಗಿನ ಸಮಿತಿಯಂತೆ ನಿರ್ದಿಷ್ಟ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸದೇ, ಮೂರೂವರೆ ತಿಂಗಳಲ್ಲಿ ಬೇಕಾಬಿಟ್ಟಿ ಪಠ್ಯಗಳನ್ನು ಬದಲಿಸಿರಲಿಲ್ಲ. ಇದನ್ನೆಲ್ಲ ಗಮನಿಸದೇ ಕಟ್ಟುಕಥೆಯ ರೀತಿ ಸಮಿತಿಗಳ ಖರ್ಚು ವೆಚ್ಚದ ಹೋಲಿಕೆಯ ಮಿಥ್ಯದ ವರದಿಗಳನ್ನು ಹರಿಬಿಡಲಾಗುತ್ತಿದೆ ಎಂದು ಸಾಹಿತಿ, ಹಿಂದಿನ ಪಠ್ಯಪುಸ್ತಕ ಸಮಿತಿ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ದೂರಿದರು.

'ನಮ್ಮದು ಮಹಾತ್ಮ ಗಾಂಧಿ, ವಿವೇಕಾನಂದರ ಹಿಂದುತ್ವ. ಅವರದು ಗೋಡ್ಸೆ ಹಿಂದುತ್ವ. ಸೈದ್ಧಾಂತಿಕವಾಗಿ ತಮ್ಮನ್ನು ಎದುರಿಸಲು ಸಾಧ್ಯವಾಗದವರು ವೈಯಕ್ತಿಕ ತೇಜೋವಧೆಗೆ ಇಳಿದಿದ್ದಾರೆ. ಅಸಭ್ಯ ಭಾಷೆ ಬಳಸುತ್ತಿದ್ದಾರೆ. ಬಹಿರಂಗ ಚರ್ಚೆಗೆ ಆಹ್ವಾನಿಸುತ್ತಿದ್ದಾರೆ' ಎಂದು ಕಿಡಿಕಾರಿದರು.

'ಪಠ್ಯಪುಸ್ತಕ ರಚನೆ ಎನ್ನುವುದು ಶಿಕ್ಷಣ ತಜ್ಞರ ಜತೆಗೆ ನಡೆಯುವ ಚರ್ಚೆ. ಬೀದಿ ಚರ್ಚೆಯಲ್ಲ ಎನ್ನುವ ಸಾಮಾನ್ಯ ಜ್ಞಾನವೂ ಅವರಿಗಿಲ್ಲ. ನಮ್ಮದು ಬೇಂದ್ರೆ, ಕುವೆಂಪು, ಕನಕ, ಬಸವಣ್ಣ, ಕುಮಾರವ್ಯಾಸರ ಭಾಷೆ. ಕುವೆಂಪು ಅವರು ಹೇಳಿದಂತೆ ಭಾಷೆಗೇಡಿ, ದ್ವೇಷಗೇಡಿಯೂ ಆಗುತ್ತಾನೆ' ಎಂದು ಕುಟುಕಿದರು.

ಗ್ಲೋಬಲ್ ಮಾಲ್‌ನಲ್ಲಿ ಮಿಡ್‌ನೈಟ್ ಸೇಲ್

ಬೆಂಗಳೂರು: ರಾಜಾಜಿನಗರದ ಗ್ಲೋಬಲ್ ಮಾಲ್‌ನಲ್ಲಿ ಜುಲೈ 7ರಿಂದ 10ರ ತನಕ ಮಿಡ್‌ನೈಟ್ ಸೇಲ್ ನಡೆಯಲಿದೆ. 100ಕ್ಕೂ ಹೆಚ್ಚು ಬ್ರ್ಯಾಂಡ್‌ಗಳಿಗೆ ಶೇ 50ರಷ್ಟು ರಿಯಾಯಿತಿಯಿದೆ.

ಬೆಂಗಳೂರು ಜನರಿಗೆ ಮಾಲ್‌ಗಳಲ್ಲಿ ಖರೀದಿ ಹೊಸತಲ್ಲ. ರಾತ್ರಿ ವೇಳೆ ಮಾಲ್‌ಗಳಲ್ಲಿ ಖರೀದಿಯು ಗ್ರಾಹಕರ ಉತ್ಸುಕತೆ ಹೆಚ್ಚಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ರಿಯಾಯಿತಿ ಜೊತೆಗೆ ಗ್ರಾಹಕರಿಗೆ ವಿಶೇಷ ಉಡುಗೊರೆ ನೀಡಲಾಗುವುದು. ವಿವಿಧ ಖಾದ್ಯ ಸವಿಯಲು, ಸಂಗೀತ ಆಸ್ವಾದಿಸಿ ಮನರಂಜನೆ ಪಡೆಯಲೂ ಅವಕಾಶವಿದೆ ಎಂದು ಹೇಳಿದೆ.

ರಾಜರಾಜೇಶ್ವರಿ ದೇವಸ್ಥಾನದ 44ನೇ ವಾರ್ಷಿಕೋತ್ಸವ

ಬೆಂಗಳೂರು: ರಾಜರಾಜೇಶ್ವರಿ ನಗರದ ಜ್ಞಾನಾಕ್ಷಿ ರಾಜರಾಜೇಶ್ವರಿ ದೇವಸ್ಥಾನದ 44ನೇ ವಾರ್ಷಿಕೋತ್ಸವ ಜುಲೈ 8ರಿಂದ ಮೂರು ದಿನ ನಡೆಯಲಿದೆ.

ವಾರ್ಷಿಕೋತ್ಸವದ ಸಂದರ್ಭದಲ್ಲಿ ದೇವಸ್ಥಾನದ ಮಹಾಶಕ್ತಿ ದ್ವಾರ ಹಾಗೂ ಪಿರಮಿಡ್ ಮಾದರಿಯ ಶಿವರತ್ನಪುರಿ ಆರೋಗ್ಯ ಮಂದಿರ ಉದ್ಘಾಟನೆಯಾಗಲಿವೆ. ಜುಲೈ 9ರಂದು ದೀಪಾರಾಧನೆ, 10ರಂದು ಹೂವಿನ ಪಲ್ಲಕ್ಕಿ ನಡೆಯಲಿದೆ.

ಕೈಲಾಶ ಆಶ್ರಮದ ಜಯೇಂದ್ರಪುರಿ, ಸ್ವಾಮೀಜಿ, ಸಿರಿಗೆರೆಯ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಉಡುಪಿ ಪುತ್ತಿಗೆ ಮಠದ ಸುಗುಣೇಂದ್ರ ಸ್ವಾಮೀಜಿ ಸೇರಿದಂತೆ 30 ಮಠಗಳ ಸ್ವಾಮೀಜಿಗಳು ಭಾಗವಹಿಸಲಿದ್ದಾರೆ.

ಬಿಬಿಎಂಪಿ... ಇಲ್ಲಿವೆ ನೋಡಿ ಫ್ಲೆಕ್ಸ್...

ನೀವು ವಾಸ ಮಾಡುತ್ತಿರುವ ನಗರದ ಸ್ಥಳದಲ್ಲೂ ಫ್ಲೆಕ್ಸ್ ಇದ್ದರೆ ಅದರದ್ದೊಂದು ಫೋಟೊ, ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊ ವಾಟ್ಸ್ ಆ್ಯಪ್ ಮಾಡಿ. ಬಡಾವಣೆಯಲ್ಲಿ ಅಂತಹ ಎಷ್ಟು ಫ್ಲೆಕ್ಸ್‌ಗಳು ಎಲ್ಲೆಲ್ಲಿ ನಿಮ್ಮ ಕಣ್ಣಿಗೆ ಬಿದ್ದಿವೆ ಎಂಬ ಮಾಹಿತಿಯನ್ನೂ ಕಳುಹಿಸಿ. 'ಪ್ರಜಾವಾಣಿ' ಫ್ಲೆಕ್ಸ್ ತೆರವಿಗೆ ಇಂಬುಗೊಡಲು ವೇದಿಕೆ ಕಲ್ಪಿಸಲಿದ್ದು, ಆಯ್ದ ಬರಹಗಳು ಪ್ರಕಟವಾಗಲಿವೆ. 9606038256



ಸಚಿವರಿಗೆ ಸ್ವಾಗತ



ಕೆ.ಆರ್.ಪುರಂ ಕ್ಷೇತ್ರದ ಬಸವನಪುರ ವಾರ್ಡ್ ನಂ. 53ರ ದೇವಸಂದ್ರ ಮುಖ್ಯರಸ್ತೆಯಿಂದ ಚಿಕ್ಕದೇವಸಂದ್ರ ಕೆರೆಯವರಿಗೆ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ. ರಾಷ್ಟ್ರೀಯ ಹೆದ್ದಾರಿ 75ರ ಭಟ್ಟರಹಳ್ಳಿ ಆರ್.ಟಿ.ಒ ಕಚೇರಿ ಮುಂಭಾಗದಲ್ಲಿನ ಸ್ಕೈ ವಾಕ್‌ನಲ್ಲಿ ಸಹ ಫ್ಲೆಕ್ಸ್ ಇದೆ. ಶುದ್ಧ ಕುಡಿಯುವ ನೀರಿನ ಘಟಕ ಚಾಲನೆಗೆ ಬಂದ ಸಚಿವರಿಗೆ ಸ್ವಾಗತ ಕೋರಲಾಗಿತ್ತು. ವಿವಿಧ ನಾಯಕರ ಹುಟ್ಟುಹಬ್ಬದ, ಜಾಹೀರಾತುಗಳ ಫ್ಲೆಕ್ಸ್‌ಗಳು ಈ ಭಾಗದಲ್ಲಿ ಇವೆ. ಆದರೆ ಬಿಬಿಎಂಪಿ ತೆರವು ಮಾಡಿಲ್ಲ.

ಪರಿಸರ ಮಂಜು, ಅಧ್ಯಕ್ಷರು, ಮಿಡಿತ ಫೌಂಡೇಷನ್, ದೇವಸಂದ್ರ, ಕೆ.ಆರ್.ಪುರಂ.


ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಧರ್ಮರಾಯ ಸ್ವಾಮಿ ವಾರ್ಡ್‌ನ ಬಿಬಿಎಂಪಿ ಪ್ರಧಾನ ಕಚೇರಿ ಹತ್ತಿರವೇ ರಾರಾಜಿಸುತ್ತಿರುವ ಫ್ಲೆಕ್ಸ್

ಸಿದ್ದರಾಮಯ್ಯ ಅರ್ಕಾವತಿ ಹಗರಣದ ಪಿತಾಮಹ: ಅಶ್ವತ್ಥನಾರಾಯಣ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ 'ಅರ್ಕಾವತಿ ಹಗರಣ'ದ ಪಿತಾಮಹ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಕಿಡಿ ಕಾರಿದ್ದಾರೆ.

'ಪಿಎಸ್ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳಿಲ್ಲದೆ ಗಾಳಿಯಲ್ಲಿ ಗುಂಡು ಹೊಡೆದಂತೆ ಸಿದ್ದರಾಮಯ್ಯ ಅವರು ಪೆದ್ದರಾಮಯ್ಯರಂತೆ ವರ್ತಿಸುತ್ತಿದ್ದಾರೆ. ಮುಖ್ಯಮಂತ್ರಿಯಾಗಿ ದಾಖಲೆ ಸಂಖ್ಯೆಯ ಬಜೆಟ್ ಮಂಡಿಸಿದವರು. ಆದರೆ ಈಗ ದಾಖಲೆಗಳಿಲ್ಲದೇ ಇಲ್ಲಸಲ್ಲದ ಆಪಾದನೆ ಮಾಡುವ ಮೂಲಕ ತಮ್ಮ ಮಟ್ಟವನ್ನು ತಾವೇ ಇಳಿಸಿಕೊಳ್ಳುತ್ತಿದ್ದಾರೆ' ಎಂದು ಕುಟುಕಿದ್ದಾರೆ.

'ಎಲ್ಲರ ಕೈಗಳೂ ತನ್ನ ಕೈಗಳಂತೆಯೇ ಕೊಳಕು ಎಂದುಕೊಂಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಮಾತಿಗೆ ಸಿದ್ದರಾಮಯ್ಯ ಗೋಣು ಆಡಿಸುತ್ತಿದ್ದಾರೆ. ಒಂದು ಸುಳ್ಳನ್ನು ನೂರು ಸಲ ಹೇಳಿದರೆ ಅದನ್ನು ಸತ್ಯವಾಗಿಸಬಹುದು ಎಂಬ ಭ್ರಮೆ ಸಿದ್ದರಾಮಯ್ಯ ಅವರನ್ನು ಆವರಿಸಿಕೊಂಡಿದೆ. ತಮ್ಮ 75ನೇ ವರ್ಷಾಚರಣೆ ಸಂದರ್ಭದಲ್ಲಿ ಅವರು ಈ ಭ್ರಮೆಯಿಂದ ಹೊರಬರಬೇಕು' ಎಂದು ಹೇಳಿದ್ದಾರೆ.

'ಸಿದ್ದರಾಮಯ್ಯ ಸುಳ್ಳುಗಳ ಸರಮಾಲೆ ಹೆಣೆಯುವುದರಲ್ಲಿ ಸಿದ್ಧಹಸ್ತರು. ಜೊತೆಗೆ, ತಾವು ಅಧಿಕಾರದಲ್ಲಿದ್ದಾಗ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗಲಾಗದೆ ಸಮುದಾಯಗಳನ್ನು ಪರಸ್ಪರ ಎತ್ತಿಕಟ್ಟಿ ಜನರ ಕೆಂಗಣ್ಣಿಗೆ ಗುರಿಯಾದ ಅವರು ಜನರಿಂದ ತಿರಸ್ಕೃತರಾಗಿರುವುದು ಎಲ್ಲರಿಗೂ ಗೊತ್ತಿರುವಂಥದ್ದೇ ಆಗಿದೆ. ಮಾತಿನ ಚಾತುರ್ಯದಿಂದ ಸುಳ್ಳನ್ನು ಸತ್ಯ ಮಾಡಲಾಗದು ಎಂಬ ಅರಿವು ಅವರಿಗಿದ್ದರೆ ಒಳ್ಳೆಯದು' ಎಂದೂ ಅಶ್ವತ್ಥನಾರಾಯಣ ಹೇಳಿದ್ದಾರೆ.

'ದಸರಾಕ್ಕೂ ಮುನ್ನ ನೇಮಕಾತಿ ಪತ್ರ ನೀಡಿ'

ಮೈಸೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿದ ಭರವಸೆಯಂತೆ ದಸರಾದೊಳಗಾಗಿ ಪೌರಕಾರ್ಮಿಕರಿಗೆ ಕಾಯಂ ನೇಮಕಾತಿ ಆದೇಶ ನೀಡಬೇಕು. ಇಲ್ಲದಿದ್ದರೆ ಮತ್ತೆ ಹೋರಾಟ ನಡೆಸಲಾಗುವುದು' ಎಂದು ಗುತ್ತಿಗೆ ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ನಾರಾಯಣ ಎಚ್ಚರಿಸಿದರು.

'ಕಾಯಂಮಾತಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ, ಜುಲೈ 1ರಿಂದ ನಾಲ್ಕು ದಿನಗಳವರೆಗೆ ರಾಜ್ಯಾದ್ಯಂತ ಕೆಲಸ ಸ್ಥಗಿತಗೊಳಿಸಿ ಹೋರಾಟ ನಡೆಸಲಾಗಿತ್ತು. ಈ ವೇಳೆ ಸಂಘದ ಜೊತೆ ಮಾತುಕತೆ ನಡೆಸಿದ್ದ ರಾಜ್ಯ ಸರ್ಕಾರ, 9 ಬೇಡಿಕೆಗಳನ್ನು ಈಡೇರಿಸುವುದಾಗಿ ವಾಗ್ದಾನ ನೀಡಿದೆ. ಕೊಟ್ಟ ಮಾತಿನಂತೆ ದಸರಾದ ಒಳಗಾಗಿ ಬೇಡಿಕೆ ಈಡೇರಿಸದಿದ್ದರೆ, ಮತ್ತೆ ಹೋರಾಟ ನಡೆಸಲಾಗುವುದು' ಎಂದು ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಐಪಿಎಲ್ ಕ್ರಿಕೆಟ್ ಟೂರ್ನಿ ಹರಾಜು: ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾ

ಬೆಂಗಳೂರು: 'ಐಪಿಎಲ್ ಕ್ರಿಕೆಟ್ ಟೂರ್ನಿಗೆ ಆಟಗಾರರನ್ನು ಹರಾಜು ಹಾಕುವುದು ಮಾನವ ಹಕ್ಕುಗಳ ಉಲ್ಲಂಘನೆ' ಎಂದು ಆಕ್ಷೇಪಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಸಾಮಾಜಿಕ ಕಾರ್ಯಕರ್ತ ವೆಂಕಟೇಶ್‌ಶೆಟ್ಟಿ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಐಪಿಎಲ್ ಕ್ರಿಕೆಟ್ ಟೂರ್ನಿ ಈಗಾಗಲೇ ಮುಗಿದು ಗೆದ್ದ ತಂಡಕ್ಕೆ ಟ್ರೋಫಿಯನ್ನೂ ನೀಡಲಾಗಿದೆ. ಅಂತೆಯೇ ಐಪಿಎಲ್ ಆಟಗಾರರ ಹರಾಜು ಸಹ ಮುಕ್ತಾಯವಾಗಿದೆ. ಇಂತಹುದೇ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ಕೂಡ ವಜಾಗೊಳಿಸಿದೆ. ಆದ್ದರಿಂದ, ಈ ಅರ್ಜಿ ಪುರಸ್ಕರಿಸಲು ಆಗದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಐಪಿಎಲ್ ಕ್ರಿಕೆಟ್ ಪಂದ್ಯಗಳಿಗೆ ಆಟಗಾರರನ್ನು ವಸ್ತುಗಳಂತೆ ಹರಾಜು ಹಾಕುವುದು ಕಾನೂನು ಬಾಹಿರ. ಈ ರೀತಿಯ ಹರಾಜು ಪ್ರಕ್ರಿಯೆ ಮನುಷ್ಯರ ಘನತೆಗೆ ಧಕ್ಕೆ ತರುತ್ತಿದೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಆದ್ದರಿಂದ, ಐಪಿಎಲ್ ಆಟಗಾರರ ಹರಾಜಿಗೆ ತಡೆ ನೀಡಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದರು.

ಅರ್ಜಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಕಾರ್ಯದರ್ಶಿ ಜಯ್ ಶಾ, ಕೋಲ್ಕತ್ತ ನೈಟ್ ರೈಡರ್ಸ್ ಮಾಲೀಕ ಶಾರುಖ್ ಖಾನ್ ಸೇರಿದಂತೆ ಐಪಿಎಲ್ ತಂಡಗಳ ಎಲ್ಲಾ ಮಾಲೀಕರು ಹಾಗೂ ಬಿಸಿಸಿಐ ಪದಾಧಿಕಾರಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು.

'ಲಕ್ಕಿಡಿಪ್ ಸಿಎಂ'


ಬಿಜೆಪಿ– ಎಚ್‌ಡಿಕೆ ಟ್ವೀಟ್ ಸಮರ

ಬೆಂಗಳೂರು: 'ಲಕ್ಕಿಡಿಪ್‌ನಲ್ಲಿ ಗೆದ್ದರೆ ಆಳುತ್ತೇನೆ, ಸೋತರೆ ಅಳುತ್ತೇನೆ. ಲಕ್ಕಿಡಿಪ್ ಸಿಎಂ ಎಂದು ಕರೆದರೆ ಉರಿದು ಬೀಳುತ್ತೇನೆ, ಮೈ ಪರಚಿಕೊಳ್ಳುತ್ತೇನೆ. ನಾನ್ಯಾರು ಬಲ್ಲಿರಾ?

'ನಾನೇ ಲಕ್ಕಿಡಿಪ್ ಸಿಎಂ ಎಚ್‌ಡಿಕೆ'.

ಈ ರೀತಿ ಒಗಟಿನ ರೂಪದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನು ಬಿಜೆಪಿ ಟ್ವೀಟ್ ಮೂಲಕ ಕಾಲೆಳೆದಿದೆ.

'ಕುಮಾರಸ್ವಾಮಿ ಅವರೇ ನೀವು ಅದೃಷ್ಟವಂತರು, ಎರಡು ಬಾರಿ ನೀವು ಅದೃಷ್ಟ ಚೀಟಿಯ ಮೂಲಕ ಸಿಎಂ ಆಗಿದ್ದೀರಿ. ಎರಡಂಕಿಯ ಶಾಸಕರನ್ನು ಇಟ್ಟುಕೊಂಡು ಎರಡೆರಡು ಬಾರಿ ಚೀಟಿ ಮೂಲಕ ಮುಖ್ಯಮಂತ್ರಿಯಾಗುವುದು ಅಪೂರ್ವ ಸಂಗತಿ' ಎಂದೂ ಲೇವಡಿ ಮಾಡಿದೆ.



ಎಚ್‌ಡಿಕೆ ತಿರುಗೇಟು: 'ಹೌದು, ನಾನು ಲಕ್ಕಿಡಿಪ್ ಸಿಎಂ, ಏನೀಗ? ಈಗ ಪಟ್ಟದಲ್ಲಿ ಕೂತಿರುವ ನಿಮ್ಮ ಮುಖ್ಯಮಂತ್ರಿ ಅವರೇನು ಜನಾದೇಶ ಪಡೆದ, ಘೋಷಿತ ಮುಖ್ಯಮಂತ್ರಿಯಾ? ಅವರೂ ಲಕ್ಕಿಡಿಪ್ಪು ಎಂಬುದನ್ನು ಮರೆತರೆ ಹೇಗೆ' ಎಂದು ಎಚ್.ಡಿ.ಕುಮಾರಸ್ವಾಮಿ ಬಿಜೆಪಿಗೆ ತಿರುಗೇಟು ನೀಡಿದ್ದಾರೆ.

'ಅಧಿಕಾರದ ನೆರಳೂ ಕಾಣದೆ ಕಂಗೆಟ್ಟಿದ್ದ ಬಿಜೆಪಿಗೆ ರಾಜ್ಯದಲ್ಲಿ ಕುರ್ಚಿ ರುಚಿ ತೋರಿಸಿದ ಅಂದಿನ 20:20 ಸರ್ಕಾರದ ಡಿಸಿಎಂ ಆಗಿದ್ದ ನಿಮ್ಮವರನ್ನೇ ಕೇಳಿ. ನಿಮ್ಮಲ್ಲೆಷ್ಟು ಲಕ್ಕಿಡಿಪ್‌ಗಳಿದ್ದಾರೆ ಎಂಬುದನ್ನು ಅವರೇ ಹೇಳುತ್ತಾರೆ. ಸತ್ಯ ಸಾಕ್ಷಾತ್ಕಾರ ಮಾಡಿಸುತ್ತಾರೆ' ಎಂದು ಹೇಳಿದ್ದಾರೆ.

'ಲಕ್ಕಿಡಿಪ್ ಸಿಎಂ ಎಂದರೆ ನನಗೆ ಅಪಮಾನವೇನೂ ಅಲ್ಲ. ಆಕಸ್ಮಿಕ ಮುಖ್ಯಮಂತ್ರಿ ಎಂದು ಅನೇಕ ಸಲ ಹೇಳಿದ್ದೇನೆ. ಆದರೆ, ಆಪರೇಷನ್ ಕಮಲದ ಸಿಎಂ ಎನ್ನುವುದಕ್ಕಿಂತ ಕೀಳಾ ಅದು? ಯಾವುದು ಮೇಲು? ಯಾವುದು ಕೀಳು? ಸ್ವಲ್ಪ ಹೇಳಿ' ಎಂದಿದ್ದಾರೆ.

'ಬಿಜೆಪಿ ಕುಟುಂಬ ರಾಜಕಾರಣದ ಆಗರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಕುಟುಂಬ ರಾಜಕಾರಣದ ಆಗರ' ಎಂದು ಟೀಕಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಆ ಪಕ್ಷದಲ್ಲಿ ಒಂದೇ ಕುಟುಂಬದ ಹಲವರು ರಾಜಕಾರಣದಲ್ಲಿರುವ 16 ಉದಾಹರಣೆಗಳನ್ನು ಟ್ವಿಟರ್‌ನಲ್ಲಿ ನೀಡಿದ್ದಾರೆ.

ಯಡಿಯೂರಪ್ಪ, ರವಿ ಸುಬ್ರಹ್ಮಣ್ಯ, ಆರ್.ಅಶೋಕ, ವಿ.ಸೋಮಣ್ಣ, ಅರವಿಂದ ಲಿಂಬಾವಳಿ, ಎಸ್.ಆರ್. ವಿಶ್ವನಾಥ್, ಜಗದೀಶ ಶೆಟ್ಟರ್, ಮುರುಗೇಶ ನಿರಾಣಿ, ಉಮೇಶ ಕತ್ತಿ, ಶಶಿಕಲಾ ಜೊಲ್ಲೆ, ಜಾರಕಿಹೊಳಿ, ಜನಾರ್ದನ ರೆಡ್ಡಿ ಸೇರಿದಂತೆ 16 ಕುಟುಂಬಗಳ ಹಲವು ಸದಸ್ಯರು ಚುನಾಯಿತ ಪ್ರತಿನಿಧಿಗಳಾಗಿರುವುದನ್ನು ಬುಧವಾರ ಸರಣಿ ಟ್ವೀಟ್‌ನಲ್ಲಿ ಅವರು ಉಲ್ಲೇಖಿಸಿದ್ದಾರೆ.

'ನಿಮ್ಮ ಪರಿವಾರ ಪುರಾಣ ಇನ್ನೂ ಇದೆ. 'ಬಿಜೆಪಿ ಕುಟುಂಬ ಕೊಂಡಿಗಳ ಆಡಂಬೊಲ' ಎನ್ನುವುದೂ ಗೊತ್ತಿದೆ. ರಾಷ್ಟ್ರವ್ಯಾಪಿ ವ್ಯಾಪಿಸಿರುವ ಕಮಲದ ಕುಟುಂಬವ್ಯಾಧಿಯ ಕೊಂಡಿಗಳನ್ನು ಬಿಚ್ಚಬೇಕೆ?, ನೀವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಗೌರಿಶಂಕರದಷ್ಟು ಎತ್ತರ ಕಾಣುವ 'ಬಿಜೆಪಿ ಪರಿವಾರ ಪರ್ವತ'ಗಳ ಬಗ್ಗೆ ಹೇಳಬೇಕೆ' ಎಂದು ಪ್ರಶ್ನಿಸಿದ್ದಾರೆ.



ಧರ್ಮರಥ ವಾಹನ ಕೊಡುಗೆ...

ಇನ್ಫೊಸಿಸ್ ಪ್ರತಿಷ್ಠಾನದ ಸುಧಾಮೂರ್ತಿ ಅವರು ತಿರುಮಲ ತಿರುಪತಿ ದೇವಸ್ಥಾನಕ್ಕೆ ಸುಮಾರು ₹42 ಲಕ್ಷ ವೆಚ್ಚದ ಧರ್ಮರಥ ವಾಹನವನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ಧರ್ಮರಥವು ತಿರುಪತಿ ಸುತ್ತಮುತ್ತ ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸಿ ಭಕ್ತರಿಗೆ ಶ್ರೀನಿವಾಸನ ದರ್ಶನ ನೀಡಲಿದೆ ಎಂದು ದೇವಸ್ಥಾನದ ಅಧಿಕಾರಿಗಳು ತಿಳಿಸಿದ್ದಾರೆ

ಬಕ್ರೀದ್ ದಿನ ಜಾನುವಾರು ಹತ್ಯೆಗೆ ಕಡಿವಾಣ: ಚವ್ಹಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಕ್ರೀದ್ ಹಬ್ಬದ ಸಮಯದಲ್ಲಿ ಜಾನುವಾರುಗಳನ್ನು ಬಲಿ ನೀಡಬಾರದು. ಗೋಹತ್ಯೆ ನಿಷೇಧ ಕಾನೂನು ಪಾಲಿಸಬೇಕು. ಗೋಹತ್ಯೆ ತಡೆಗೆ ಅಧಿಕಾರಿಗಳು ಜಾಗ್ರತೆ ವಹಿಸಬೇಕು ಎಂದು ಪಶುಸಂಗೋಪನಾ ಸಚಿವ ಪ್ರಭು ಬಿ.ಚವ್ಹಾಣ ಸೂಚಿಸಿದ್ದಾರೆ.

ಹೊರ ರಾಜ್ಯಗಳಿಂದ ಅಕ್ರಮವಾಗಿ ಗೋವುಗಳು, ಗೋಮಾಂಸ ಸಾಗಣೆ ಮಾಡುವವರ ಮೇಲೆ ಹದ್ದಿನ ಕಣ್ಣಿಡಬೇಕು. ಗೋಹತ್ಯೆ ತಡೆಗಟ್ಟುವಲ್ಲಿ ಸಕ್ರಿಯರಾಗಿರಬೇಕು ಎಂದು ಪಶುಸಂಗೋಪನೆ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರಿಗೆ ಸೂಚಿಸಿದ್ದಾರೆ.

ಬಕ್ರೀದ್‌ಗೆ ಗೋವು, ಹಸು, ಎತ್ತು, ಕರು, ಒಂಟೆಗಳನ್ನು ಬಲಿ ಕೊಡುವ ಸಂಪ್ರದಾಯವಿದೆ. ಗೋಹತ್ಯೆ ನಿಷೇಧ ಕಾಯ್ದೆಯ ಉಲ್ಲಂಘನೆ ಆಗದಂತೆ ಜಾಗ್ರತೆ ವಹಿಸಬೇಕು. ಹಬ್ಬದ ಸಮಯದಲ್ಲಿ ಗೋಹತ್ಯೆ ತಡೆಯಲು ಕಾರ್ಯಪಡೆ ನೇಮಕ ಮಾಡಲಾಗಿದೆ. ಗೋಹತ್ಯೆ ಕಂಡು ಬಂದರೆ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸಬೇಕು. ತಡೆಯದ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ಸಾರ್ವಜನಿಕರೂ ಜಾಗ್ರತೆ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮುಕ್ತ ದಿನ

ತಂತ್ರಜ್ಞಾನ ಲೋಕದ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ–ಸೈಕಲ್, ಮಾನವ ರಹಿತ ವೈಮಾನಿಕ ವಾಹನ (ಯುಎವಿ), ರೇಸ್ ಕಾರುಗಳು, ಪ್ಲಾಸ್ಟಿಕ್ ಮರುಬಳಕೆ ವೆಂಡಿಂಗ್ ಯಂತ್ರಗಳು....

ರಾಮಯ್ಯ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಬುಧವಾರ ಮುಕ್ತ ದಿನದ ಅಂಗವಾಗಿ ಆಯೋಜಿಸಿದ್ದ 'ಪ್ರದರ್ಶನ–2022' ರಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನದ ಲೋಕವನ್ನೇ ತೆರೆದಿಟ್ಟಿದ್ದರು.

ವಿದ್ಯಾರ್ಥಿಗಳ ಕೌಶಲ ಹಾಗೂ ಪ್ರಾಯೋಗಿಕ ಜ್ಞಾನದ ಪ್ರದರ್ಶನಕ್ಕಾಗಿ ಕಾರ್ಯಕ್ರಮ ರೂಪಿಸಲಾಗಿತ್ತು. ತಮ್ಮ ವಿನೂತನ ಕಲ್ಪನೆಗಳಿಗೆ ರೂಪ ನೀಡಿದ್ದ ವಿದ್ಯಾರ್ಥಿಗಳು ವೈವಿಧ್ಯಮಯ ತಾಂತ್ರಿಕತೆಯನ್ನು ಪ್ರದರ್ಶಿಸಿದರು. ವೈಮಾನಿಕ ಕ್ಷೇತ್ರ, ಪರಿಸರ, ಕ್ಲೌಡ್ ಕಂಪ್ಯೂಟಿಂಗ್, ಡೇಟಾ ಅನಲಿಟಿಕ್ಸ್, ನ್ಯಾನೊ ಟೆಕ್ನಾಲಜಿ, ಎಲೆಕ್ಟ್ರಿಕಲ್ ವಾಹನಗಳು ಸೇರಿದಂತೆ ವೈವಿಧ್ಯಮಯ ವಿಷಯಗಳ ಮೇಲೆ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದರು. ಸುಮಾರು 425 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು. ಕಾಲೇಜಿನ 13 ವಿಭಾಗಗಳ 1,300 ವಿದ್ಯಾರ್ಥಿಗಳು ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಸಂಸ್ಥೆಯ ವಿದ್ಯಾರ್ಥಿಗಳೇ ರಚಿಸಿಕೊಂಡಿರುವ 'ಇಧಿಥಾ' ತಂಡವು ಮಾನವರಹಿತ ವಿಮಾನಗಳ (ಯುಎವಿ) ಮಾದರಿಗಳನ್ನು ರೂಪಿಸಿದೆ. ವಿವಿಧ ವಿಭಾಗಗಳ ವಿದ್ಯಾರ್ಥಿಗಳು ರೂಪಿಸಿರುವ ಈ ಮಾನವರಹಿತ ವಿಮಾನವು ಹಾರುವ ಮತ್ತು ಇಳಿಯುವ ಸ್ವಯಂ ಚಾಲಿತ ವ್ಯವಸ್ಥೆಯನ್ನು ಹೊಂದಿದೆ.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿರುವ ಬ್ಯಾಟರಿ ಚಾಲಿತ ಇ–ಸೈಕಲ್ ಗಮನಸೆಳೆಯಿತು.

ಸಾಫ್ಟ್‌ವೇರ್ ತಂತ್ರಜ್ಞಾನದ ನೆರವಿನಿಂದ ಈ ಸೈಕಲ್ ಅಭಿವೃದ್ಧಿಪಡಿಸಲಾಗಿದೆ. ಇದರಿಂದ ಸೈಕಲ್ ಸವಾರರಿಗೆ ಹೆಚ್ಚು ಅನುಕೂಲಗಳಿವೆ. ಪ್ರತಿಯೊಂದು ಅಂಶವನ್ನು ಸಾಫ್ಟ್‌ವೇರ್ ಮೂಲಕ ವಿಶ್ಲೇಷಿಸಿ ಸೈಕಲ್ ಸವಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಇ–ಸೈಕಲ್ ಅಭಿವೃದ್ಧಿಪಡಿಸಲಾಗಿದೆ ಎಂದು ವಿದ್ಯಾರ್ಥಿಗಳು ವಿವರಿಸಿದರು.

ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ವಿಭಾಗಗಳ ವಿದ್ಯಾರ್ಥಿಗಳು ರೂಪಿಸಿರುವ 'ಎಫ್–1 ರೇಸಿಂಗ್' ಎಲೆಕ್ಟ್ರಿಕಲ್ ವಾಹನದ ಮಾದರಿಯು ವೀಕ್ಷಕರ ಕುತೂಹಲ ತಣಿಸಿತು. 'ಸ್ಟೂಡೆಂಟ್ಸ್ ಫಾರ್ಮುಲಾ ಎಲೆಕ್ಟ್ರಿಕಲ್' ವಿದ್ಯಾರ್ಥಿಗಳ ತಂಡವು ಈ ಕಾರು ಅಭಿವೃದ್ಧಿಪಡಿಸಿದೆ. ಈ ಕಾರು ಸುರಕ್ಷತಾ ವ್ಯವಸ್ಥೆಯನ್ನು ಹೊಂದಿದೆ. ಇದೇ ರೀತಿ 'ವೆಲಾಸಿಟಿ ರೇಸಿಂಗ್' ತಂಡವು ಪೆಟ್ರೋಲ್ ಎಂಜಿನ್ ಕಾರು ಅಭಿವೃದ್ಧಿಪಡಿಸಿದೆ.

ಕಾರ್ಯಕ್ರಮಗಳಲ್ಲಿ ಬಳಸುವ ಪ್ಲಾಸ್ಟಿಕ್ ಬಾಟಲ್ ಮತ್ತು ಲೋಟಗಳನ್ನು ಸ್ಥಳದಲ್ಲೇ ಪುಡಿ ಮಾಡುವ ಯಂತ್ರವನ್ನು ವಿದ್ಯಾರ್ಥಿಗಳು ರೂಪಿಸಿದ್ದಾರೆ.

2 ದಿನ ನಡೆಯುವ ಈ ಪ್ರದರ್ಶನಕ್ಕೆ ಸ್ಯಾಮ್ಸಂಗ್ ಮತ್ತು ಸಂಶೋಧನಾ ಅಭಿವೃದ್ಧಿಯ ಹಿರಿಯ ನಿರ್ದೇಶಕ ರವೀಂದ್ರ ಬಾಲಕೃಷ್ಣ ಶೆಟ್ಟಿ ಚಾಲನೆ ನೀಡಿದರು. ಗೋಕುಲ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ. ಎಂ.ಆರ್ ಜಯರಾಮ್ ಇದ್ದರು.



'ವೆಲಾಸಿಟಿ ರೇಸಿಂಗ್' ತಂಡ ರೂಪಿಸಿರುವ ಎಲೆಕ್ಟ್ರಿಕಲ್ ವಾಹನವನ್ನು ವಿದ್ಯಾರ್ಥಿಗಳು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ನಾಟಕ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭ: ಅತಿಥಿಗಳು: ಕೆ.ಎಂ. ಚೈತನ್ಯ, ಅಧ್ಯಕ್ಷತೆ: ಎ.ಎಚ್. ರಾಮರಾವ್, ಎಸ್.ಎನ್. ನಾಗಾರಜ ರೆಡ್ಡಿ, ಪಿ. ಸದಾನಂದ ಮಯ್ಯ, ಉಪಸ್ಥಿತಿ: ಸಿ. ರಾಘವೇಂದ್ರ ಪ್ರಸಾದ್, ಡಿ. ಸುಮಂತ್ ಕುಮಾರ್, ನಿರಂಜನ ಖಾಲಿಕೊಡ, ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4

ಸತ್ಯು ಸಂಭ್ರಮ–93, ಯು.ಆರ್. ಅನಂತಮೂರ್ತಿ ಕಥೆ ಆಧಾರಿತ 'ಬರ' ಚಲನಚಿತ್ರ ಪ್ರದರ್ಶನ: ನಿರ್ಮಾಣ ಮತ್ತು ನಿರ್ದೇಶನ: ಎಂ.ಎಸ್. ಸತ್ಯು, ಚಿತ್ರಕಥೆ: ಜಾವೇದ್ ಸಿದ್ದಿಕಿ ಮತ್ತು ಶಮಾ ಝೈದಿ, ಸಂಭಾಷಣೆ: ಎಸ್. ರಾಮಸ್ವಾಮಿ, ಸಂಗೀತ: ಮೈಸೂರು ಅನಂತಸ್ವಾಮಿ, ಆಯೋಜನೆ: ವಿಭಿನ್ನ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ– ಸಂಜೆ 6

ಗೋಪಿ ನುಡಿನಮನ 'ಲೋಟ ಕಲಿಸಿದ ಪಾಠ' ನಾಟಕ ಪ್ರದರ್ಶನ: ಅಧ್ಯಕ್ಷತೆ: ಅನಂತಕೃಷ್ಣ, ಉದ್ಘಾಟನೆ: ಗೀತಾ ವಿಶ್ವನಾಥ್, ಅತಿಥಿಗಳು: ಗೀತಾ ಶ್ರೀನಾಥ್, ರಾಘವೇಂದ್ರ ಕಶ್ಯಪ್, ವೇಣುಗೋಪಾಲ್, ಆಯೋಜನೆ: ರಂಗ ಶಿಖರ, ಸ್ಥಳ: ಲಾಸ್ಯ ರಂಜನಿ ಕಲಾಕ್ಷೇತ್ರ, ಕಮ್ಮನಹಳ್ಳಿ ನೆಹರೂ ರಸ್ತೆ, ಸಂಜೆ 6.30.

ರಂಗಗೀತೆಗಳು ಮತ್ತು ಪೌರಾಣಿಕ ನಾಟಕದ ದೃಶ್ಯಾವಳಿಗಳು: ಅಧ್ಯಕ್ಷತೆ: ಕೂಡ್ಲೂರು ವೆಂಕಟಪ್ಪ, ಉದ್ಘಾಟನೆ: ಗಣೇಶಯಾಜಿ, ಅತಿಥಿಗಳು: ರಾಮಚಂದ್ರಪ್ಪ, ಸುಜಾತ.ಎನ್. ಮಗಳ್, ಆಯೋಜನೆ: ದೃಶ್ಯ ರಂಗ ಕಲಾಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಉದಯಭಾನು ಕಲಾಸಂಘ, ಗವಿಪುರಂ ಗುಟ್ಟಹಳ್ಳಿ, ಕೆ.ಜಿ. ನಗರ– ಸಂಜೆ 6.30

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನೃತ್ಯಲಹರಿ ಕಲಾ ಟ್ರಸ್ಟ್‌ನ ವಿದ್ಯಾರ್ಥಿಗಳು, ನಿರ್ದೇಶನ: ರೂಪಾ ಗಿರೀಶ್, ಆಯೋಜನೆ: ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಜಯನಗರ, ಸಂಜೆ 7.30.

ಅಪಘಾತ: ಸೀಟ್‌ಬೆಲ್ಟ್ ಹಾಕಿದ್ದ ನಿಡಸೋಸಿ ಸ್ವಾಮೀಜಿ ಪಾರು

ಧಾರವಾಡ/ಬೆಳಗಾವಿ: ಇಲ್ಲಿನ ತೇಗೂರು ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ಸಂಜೆ ರಸ್ತೆ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದ ಬೆಳಗಾವಿ ಸಿದ್ದಸಂಸ್ಥಾನದ ನಿಡಸೋಸಿ ಮಠದ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಅಪಾಯದಿಂದ ಪಾರಾಗಿದ್ದಾರೆ.

ಅಪಘಾತದಲ್ಲಿ ಸಣ್ಣಪುಟ್ಟ ಗಾಯಗೊಂಡ ಅವರನ್ನು ಬೆಳಗಾವಿಯ ಕೆಎಲ್ಇ ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಶ್ರೀಗಳ ಮೊಣಕಾಲು, ಮೊಣಕೈಗೆ ಸಣ್ಣಪುಟ್ಟ ಗಾಯಗಳಾಗಿವೆ. ಮುಂಜಾಗ್ರತಾ ಕ್ರಮವಾಗಿ ಅವರನ್ನು ತೀವ್ರ ನಿಗಾ ಘಟಕದಲ್ಲಿ ದಾಖಲಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಬ್ಯಾಂಕ್ ಕೆಲಸ ಬೇಕಾ? ಪರೀಕ್ಷೆಗೆ ತಯಾರಾಗಿ

ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ(ಐಬಿಪಿಎಸ್), ದೇಶದ 11 ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ಖಾಲಿಯಿರುವ 6035 ಕ್ಲರ್ಕ್ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಹೊರಡಿಸಿದೆ. ಎರಡು ಹಂತಗಳ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದೆ. ಈ ಪರೀಕ್ಷೆಗೆ ಸಂಬಂಧಿಸಿದ ಅರ್ಜಿ ಸಲ್ಲಿಕೆ ಪ್ರಕ್ರಿಯೆ, ಶುಲ್ಕ, ಪರೀಕ್ಷೆಯ ವಿವರ ಮತ್ತಿತರ ಮಾಹಿತಿಗಳು ಇಲ್ಲಿವೆ.

ಆರ್.ಕೆ. ಬಾಲಚಂದ್ರ

ಬ್ಯಾಂಕ್‌ನಲ್ಲಿ ಉದ್ಯೋಗ ಪಡೆಯಬೇಕು ಎಂಬ ಕನಸು ಹೊತ್ತವರಿಗೆ, ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ಸಿಹಿ ಸುದ್ದಿ ನೀಡಿದ್ದು, ದೇಶದ 11 ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿ ಇರುವ 6035 ಕ್ಲರ್ಕ್ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಹೊರಡಿಸಿದೆ. ಇದರಲ್ಲಿ ಕರ್ನಾಟಕದ ವಿವಿಧ ಬ್ಯಾಂಕ್‌ಗಳ 358 ಹುದ್ದೆಗಳು ಸೇರಿವೆ. ಈ ಹುದ್ದೆಗಳ ಭರ್ತಿಗಾಗಿ ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆ ನಡೆಸಲು ಸಂಸ್ಥೆ ಮುಂದಾಗಿದೆ. ರಾಜ್ಯದ 12 ಜಿಲ್ಲಾ ಕೇಂದ್ರಗಳಲ್ಲಿ ಪೂರ್ವಭಾವಿ ಪರೀಕ್ಷೆ ಮತ್ತು ಮೂರು ಜಿಲ್ಲಾ ಕೇಂದ್ರಗಳಲ್ಲಿ ಮುಖ್ಯ ಪರೀಕ್ಷೆ ಆನ್‌ಲೈನ್ ಮೂಲಕ ನಡೆಯಲಿದೆ.

ಇದು ನೆನಪಿರಲಿ

ಒಬಿಸಿ ವರ್ಗಕ್ಕೆ ಸೇರಿದ ಆದರೆ ಕೆನೆ ಪದರದ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಒಬಿಸಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ. ಅವರು ಆನ್‌ಲೈನ್ ಅರ್ಜಿ ನಮೂನೆಯಲ್ಲಿ ತಮ್ಮ ವರ್ಗವನ್ನು ಸಾಮಾನ್ಯ ವರ್ಗ ಎಂದೇ ನಮೂದಿಸಬೇಕು. ಅಭ್ಯರ್ಥಿಯು ಕಾಲಕಾಲಕ್ಕೆ ಭಾರತ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಕೆನೆರಹಿತ ಲೇಯರ್ (Non cremy layer) ಷರತ್ತಿನೊಂದಿಗೆ ಒಬಿಸಿ ಪ್ರಮಾಣಪತ್ರವನ್ನು ಹೊಂದಿರಬೇಕು. ಎಲ್ಲ ಪ್ರಮಾಣ ಪತ್ರಗಳನ್ನು ಐಬಿಪಿಎಸ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿದ ನಮೂನೆಯಲ್ಲಿಯೆ ಸಲ್ಲಿಸಬೇಕು.

ಯಾವ ಬ್ಯಾಂಕಿನಲ್ಲಿ ಎಷ್ಟು ಹುದ್ದೆ?

ಕೆನರಾ ಬ್ಯಾಂಕ್ 140, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ 156, ಯೂಕೊ ಬ್ಯಾಂಕ್ 13, ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ 2, ಸೆಂಟ್ರಲ್ ಬ್ಯಾಂಕ್ ಆಪ್ ಇಂಡಿಯಾ 36, ಬ್ಯಾಂಕ್ ಆಫ್ ಇಂಡಿಯಾ 6, ಪಂಜಾಬ್ ನ್ಯಾಷನಲ್ ಬ್ಯಾಂಕ್ 5, ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವುದಾಗಿ ಪ್ರಕಟಿಸಿವೆ. ಹೀಗೆ ಒಟ್ಟಾರೆ ಕರ್ನಾಟಕದಲ್ಲಿ 358 ಹುದ್ದೆಗಳಿವೆ. ಯಾವ ವರ್ಗಕ್ಕೆ ಎಷ್ಟು ಹುದ್ದೆಗಳು ಮೀಸಲಿವೆ ಎಂಬ ಮಾಹಿತಿಯನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಶೈಕ್ಷಣಿಕ ಅರ್ಹತೆ

ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ಜೊತೆಗೆ, ಕಂಪ್ಯೂಟರ್ ಜ್ಞಾನ ಹೊಂದಿರುವುದು ಕಡ್ಡಾಯ. ಈ ಸಂಬಂಧ ಕಂಪ್ಯೂಟರ್ ಕಲಿಕೆಯ ಬಗ್ಗೆ ದೃಢೀಕರಣ ಪತ್ರವನ್ನು ಕೂಡ ಹೊಂದಿರಬೇಕು. ಅಂದರೆ, ಕಂಪ್ಯೂಟರ್ ಕಲಿಕೆಯಲ್ಲಿ ಡಿಪ್ಲೊಮಾ/ಸರ್ಟಿಫಿಕೆಟ್ ಕೋರ್ಸ್/ಡಿಗ್ರಿ/ ಶಾಲಾ-ಕಾಲೇಜಿನಲ್ಲಿ ಕಂಪ್ಯೂಟರ್ ಅಥವಾ ಮಾಹಿತಿ ತಂತ್ರಜ್ಞಾನ (Information Technology) ವನ್ನು ಒಂದು ವಿಷಯವಾಗಿ ಓದಿರುವ ಪ್ರಮಾಣಪತ್ರವಿರಬೇಕು. ಅಲ್ಲದೆ, ರಾಜ್ಯದ ಅಧಿಕೃತ ಭಾಷೆಯಲ್ಲಿ ಮಾತನಾಡುವ, ಬರೆಯುವ ಸಾಮರ್ಥ್ಯವಿರಬೇಕು.

ಅರ್ಜಿ ಸಲ್ಲಿಕೆ ಪ್ರಕ್ರಿಯೆ

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಕೆಗೆ ಜುಲೈ 21 ಕೊನೆದಿನ. ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ಆಯ್ಕೆ ಮಾಡಿಕೊಳ್ಳಬೇಕಾದ ಬ್ಯಾಂಕ್‌ಗಳ ಪಟ್ಟಿ ನೀಡಲಾಗಿದೆ.. ಅಭ್ಯರ್ಥಿಗಳು ತಮ್ಮ ಆದ್ಯತೆಯ ಬ್ಯಾಂಕ್ ಅನ್ನು ಅಗತ್ಯವಾಗಿ ಸೂಚಿಸಬೇಕು.

ಗಮನಿಸಿ; ಯಾವ್ಯಾವ ಬ್ಯಾಂಕ್‌ಗಳಲ್ಲಿ ಎಷ್ಟೆಷ್ಟು ಹುದ್ದೆಗಳಿವೆ ಹಾಗೂ ನಮ್ಮ ರಾಜ್ಯದಲ್ಲಿ ಆ ಬ್ಯಾಂಕ್‌ಗಳ ಶಾಖೆಗಳಿವೆಯೇ ಎಂಬುದರ ಮೇಲೆ ನಿಮ್ಮ ಆದ್ಯತೆಯ ಆಯ್ಕೆ ಇರಲಿ. ಒಮ್ಮೆ ನೀವು ಆಯ್ಕೆಯಾದರೆ ಬ್ಯಾಂಕ್ ಬದಲಾವಣೆಗೆ/ಸ್ಥಳ ಬದಲಾವಣೆಗೆ ಅವಕಾಶ ವಿರುವುದಿಲ್ಲ. ಮತ್ತೊಂದು ಅಂಶ ಏನೆಂದ್ರೆ,

ಐಬಿಪಿಎಸ್ ಪರೀಕ್ಷೆ

ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ, ಕೈಬರಹದ ಘೋಷಣಾ ಪತ್ರವನ್ನು (Delaration) ಸಲ್ಲಿಸಿರುತ್ತಾರೆ. ಮುಂದೆ ಆಯ್ಕೆ ಪ್ರಕ್ರಿಯೆ ಹಂತದಲ್ಲಿ ಅಥವಾ ನೌಕರಿಗೆ ಸೇರುವಾಗ ಅಭ್ಯರ್ಥಿಗಳ ಕೈಬರಹವನ್ನು ಹಿಂದೆ ಸಲ್ಲಿಸಿದ್ದ ಘೋಷಣಾ ಪತ್ರದ ಬರಹದೊಂದಿಗೆ ಹೋಲಿಕೆ ಮಾಡಲಾಗುತ್ತದೆ. ಒಂದೊಮ್ಮೆ ತಜ್ಞರ ವಿಶ್ಲೇಷಣೆಯಲ್ಲಿ ಕೈಬರಹದಲ್ಲಿ ಭಿನ್ನತೆ ಕಂಡುಬಂದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ. ಹೀಗಾಗಿ ಅರ್ಜಿ ಸಲ್ಲಿಸುವ ಹಂತದಲ್ಲಿಯೇ ಬಹಳ ಎಚ್ಚರಿಕೆಯಿಂದ ಪ್ರಕ್ರಿಯೆಗಳನ್ನು ಅನುಸರಿಸಬೇಕು.

ಪರೀಕ್ಷಾ ಪೂರ್ವ ತರಬೇತಿ

ಐಬಿಪಿಎಸ್ ಎಸ್.ಸಿ/ಎಸ್.ಟಿ, ಅಲ್ಪಸಂಖ್ಯಾತ ಅಭ್ಯರ್ಥಿಗಳು, ಮಾಜಿ ಸೈನಿಕರು, ಅಂಗವಿಕಲ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲಿದೆ. ಆಸಕ್ತರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗಲೇ ತರಬೇತಿ ಪಡೆಯುವ ಬಗ್ಗೆ ಅದಕ್ಕಾಗಿ ಮೀಸಲಿಟ್ಟ ಕಾಲಂನಲ್ಲಿ ನಮೂದಿಸಬೇಕು. ತರಬೇತಿ ಸ್ಥಳದ ಖರ್ಚು ವೆಚ್ಚಗಳನ್ನು ಹಾಗೂ ಪ್ರಯಾಣದ ಖರ್ಚು ವೆಚ್ಚವನ್ನು ಅಭ್ಯರ್ಥಿಗಳೇ ಭರಿಸಬೇಕಾಗುತ್ತದೆ.

ಪರೀಕ್ಷಾ ಪ್ರಕ್ರಿಯೆ

ಎರಡು ಹಂತಗಳಲ್ಲಿ ಪರೀಕ್ಷೆ ನಡೆಯುತ್ತದೆ. ಮೊದಲ ಹಂತ- ಪೂರ್ವಭಾವಿ ಪರೀಕ್ಷೆ. ಇದು ಈ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆಯುತ್ತದೆ. ಎರಡನೇ ಹಂತ- ಮುಖ್ಯಪರೀಕ್ಷೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ನಡೆಯುತ್ತದೆ. ಎರಡೂ ಆನ್‌ಲೈನ್ ಮೂಲಕ ನಡೆಯುವ ಪರೀಕ್ಷೆಗಳಾಗಿವೆ.

ವಯೋಮಿತಿ

ಕನಿಷ್ಠ 20 ವರ್ಷ, ಗರಿಷ್ಠ 28 ವರ್ಷಗಳು (ಜುಲೈ 1, 2022ರವರೆಗೆ). ಸರ್ಕಾರದ ನಿಯಮದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಐದು ವರ್ಷ, ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಅಂಗವಿಕಲರಿಗೆ 10 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಶುಲ್ಕ ಪಾವತಿ

ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ₹850 ಹಾಗೂ ಎಸ್‌ಸಿ/ಎಸ್‌ಟಿ/ಅಂಗವಿಕಲರು/ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹175 ಶುಲ್ಕ ನಿಗದಿಪಡಿಸಲಾಗಿದೆ. ಬ್ಯಾಂಕ್ ಸೇವಾ ಶುಲ್ಕ ಮತ್ತು ಇಂಟಿಮೇಷನ್ ಶುಲ್ಕ ಪ್ರತ್ಯೇಕವಾಗಿ ಪಾವತಿಸಬೇಕಾಗುತ್ತದೆ. ಆನ್‌ಲೈನ್ ಮೂಲಕ ಮಾತ್ರ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿದೆ.

ಅರ್ಜಿ ನೋಂದಣಿ ಮತ್ತು ಪರೀಕ್ಷೆ ಕುರಿತ ಹೆಚ್ಚಿನ ಮಾಹಿತಿಗಾಗಿ ಈ ಲಿಂಕ್ ಕ್ಲಿಕ್ ಮಾಡಿ: www.ibps.in

((ಲೇಖಕರು: ಬ್ಯಾಂಕಿಂಗ್ ಪರೀಕ್ಷೆ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು. ಮಡಿಕೇರಿ)



(ಮುಂದಿನ ವಾರ: ಪಠ್ಯಕ್ರಮಗಳು ಹಾಗೂ ಹೊಸದಾಗಿ ಬ್ಯಾಂಕಿಂಗ್ ಪರೀಕ್ಷೆ ಬರೆಯುವವರಿಗೆ ಮಾಹಿತಿ)

ಯಾವ ಬ್ಯಾಂಕ್? ಎಷ್ಟು ಹುದ್ದೆಗಳು?

ಬ್ಯಾಂಕ್ ಹೆಸರು	ಪ.ಜಾ	ಪ.ಪಂ	ಒಬಿಸಿ	ಇಡಬ್ಲುಎಸ್	ಸಾಮಾನ್ಯ	ಒಟ್ಟು
ಬ್ಯಾಂಕ್ ಆಫ್ ಇಂಡಿಯಾ	-	-	1	-	5	6
ಕೆನರಾ ಬ್ಯಾಂಕ್	22	9	37	14	58	140
ಸೆಂಟ್ರಲ್ ಬ್ಯಾಂಕ್	6	3	10	4	13	36
ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್	-	-	-	-	2	2
ಪಿಎನ್‌ಬಿ	-	-	-	1	4	5
ಯುಕೊ ಬ್ಯಾಂಕ್	2	1	3	1	6	13
ಯೂನಿಯನ್ ಬ್ಯಾಂಕ್	20	9	37	13	77	156
ಒಟ್ಟು	50	32	89	32	165	358

* ಪ.ಜಾ- ಪರಿಶಿಷ್ಟ ಜಾತಿ, ಪ.ಪಂ- ಪರಿಶಿಷ್ಟ ಪಂಗಡ, ಇಡಬ್ಲ್ಯು ಎಸ್ - ಆರ್ಥಿಕ ದುರ್ಬಲ ವರ್ಗ, ಒಬಿಸಿ- ಇತರೆ ಹಿಂದುಳಿದ ವರ್ಗ

ಸೂಕ್ತ ಮಾರ್ಗದರ್ಶನ, ದಣಿವಾಗದ ಓದು ಅಗತ್ಯ

ಮೆಕಾನಿಕಲ್ ಎಂಜಿನಿಯರಿಂಗ್ ಹಾಗೂ ಕಾನೂನು ಪದವಿಗಳನ್ನು ಪಡೆದಿರುವ ಕೊಡಗು ಜಿಲ್ಲೆಯ ರಾಜೇಶ್ ಪೊನ್ನಪ್ಪ ಈ ಬಾರಿಯ ಕೇಂದ್ರ ಲೋಕಸೇವಾ ಆಯೋಗದ(ಯುಪಿಎಸ್‌ಸಿ) ಪರೀಕ್ಷೆಯಲ್ಲಿ 222 ರ‍್ಯಾಂಕ್ ಪಡೆದಿದ್ದಾರೆ. ಮೂರನೇ ಪ್ರಯತ್ನದಲ್ಲಿ ಈ ಸ್ಪರ್ಧಾತ್ಮಕ ಪರೀಕ್ಷೆ ಯಶಸ್ವಿಯಾಗಿ ಪೂರ್ಣಗೊಳಿಸಿರುವ ಅವರು, ಪರೀಕ್ಷೆ ತಯಾರಿಯ ಸಿದ್ಧತೆಗಳ ಕುರಿತು 'ಸ್ಪರ್ಧಾವಾಣಿ'ಯೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಕೆ.ಎಸ್.ಗಿರೀಶ



ರಾಜೇಶ್ ಪೊನ್ನಪ್ಪ

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್

● ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ್ದೀರಿ, ನಿಮ್ಮ ಮುಂದಿನ ಹೆಜ್ಜೆ?

ಮುಂದಿನ ತರಬೇತಿಯ ದಿನಾಂಕಕ್ಕಾಗಿ ಕಾಯುತ್ತಿದ್ದೇನೆ. ಯಾವುದೇ ಹುದ್ದೆ ಕೊಟ್ಟರೂ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತೇನೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸರ್ಕಾರದ ಸೌಲಭ್ಯಗಳು ದೊರೆಯುವಂತೆ ಮಾಡುವುದು ನನ್ನ ಗುರಿ.

● ಯುಪಿಎಸ್ಸಿ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳನ್ನು ಎಷ್ಟನೇ ಪ್ರಯತ್ನದಲ್ಲಿ ಪೂರ್ಣಗೊಳಿಸಿದಿರಿ? ಹಿಂದಿನ ಪ್ರಯತ್ನಗಳು ಫಲಿಸದಿರಲು ಕಾರಣವೇನು? ಆ ನ್ಯೂನತೆಗಳನ್ನು ಈ ಪ್ರಯತ್ನದಲ್ಲಿ ಹೇಗೆ ಸರಿಪಡಿಸಿಕೊಂಡಿರಿ ?

ಮೂರನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆ ಪೂರ್ಣಗೊಳಿಸಿದೆ. ಸರಿಯಾದ ಮಾರ್ಗದರ್ಶನದ ಕೊರತೆ ಕಾರಣ ಎರಡು ಬಾರಿಯೂ ಪರೀಕ್ಷೆ ಪಾಸಾಗಿರಲಿಲ್ಲ. ನಂತರ ಐಎಎಸ್ ಬಾಬ ಕೋಚಿಂಗ್ ಇನ್‌ಸ್ಟಿಟ್ಯೂಟ್ ಸೆಂಟರ್‌ಗೆ ಸೇರಿದೆ. 'ನಮ್ಮ ಕೆಪಿಎಸ್‌ಸಿ ಅಕಾಡೆಮಿ' ನಿರ್ದೇಶಕರಾದ ಡಾ.ಅರ್ಜುನ್ ಬೋಪಣ್ಣ ಅವರ ಸಲಹೆ ಪಡೆದೆ. ಅವರು ಆಂಥ್ರೊಪಾಲಜಿ (ಮಾನವಶಾಸ್ತ್ರ) ವಿಷಯದ ಪ್ರಾಧ್ಯಾಪಕರು. ನನ್ನ ಯುಪಿಎಸ್‌ಸಿ ವಿಷಯವೂ ಅದೇ ಆಗಿತ್ತು. ಇವೆಲ್ಲವೂ ನನ್ನ ಯಶಸ್ಸಿಗೆ ಕಾರಣಗಳಾದವು.

● ನೀವು ಬಳಸುತ್ತಿದ್ದ ಅಧ್ಯಯನ ಪರಿಕರಗಳ ಬಗ್ಗೆ ತಿಳಿಸಿ

15 ರಿಂದ 16 ಗಂಟೆ ಓದುವುದರಿಂದ ಯಾವುದೇ ಪ್ರಯೋಜನವಿಲ್ಲ. ಒಂದು ಸಮತೋಲಿತ ಓದು ಇರಬೇಕು. ದಣಿವಾಗದ ಹಾಗೆ ಓದಬೇಕು. ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಮಾರ್ಗದರ್ಶನ ಸಿಕ್ಕಿದರೆ ಇದು ಇನ್ನೂ ಸುಲಭ. ಪುನರಾವರ್ತನೆ, ಅಣಕು ಪರೀಕ್ಷೆಗಳು ತೀರಾ ಅಗತ್ಯ. ನನಗೆ ಕೋಚಿಂಗ್ ಸೆಂಟರ್ ಮಾರ್ಗದರ್ಶನ ನೆರವಿಗೆ ಬಂತು. 'ಡೆಕನ್ ಹೆರಾಲ್ಡ್'ನ ಸಂಪಾದಕೀಯವನ್ನು ನಿತ್ಯವೂ ಓದುತ್ತಿದ್ದೆ. 'ಪ್ರಜಾವಾಣಿ' ಸೇರಿದಂತೆ ಇನ್ನಿತರ ಪತ್ರಿಕೆಗಳನ್ನೂ ಓದುತ್ತಿದ್ದೆ. ಕೋಚಿಂಗ್ ಸೆಂಟರ್‌ನ ಮಾಸಿಕ ಪತ್ರಿಕೆಗಳು, ಸಿಬಿಎಸ್‌ಸಿ ಬೋರ್ಡ್‌ನ ಎನ್‌ಸಿಇಆರ್‌ಟಿ 6 ನೇ ತರಗತಿ 12ನೇ ತರಗತಿಯವರೆಗಿನ ಪಠ್ಯಪುಸ್ತಕಗಳನ್ನು ಓದಿದ್ದೆ.

● ಈ ಸ್ಪರ್ಧಾತ್ಮಕ ಪರೀಕ್ಷೆಗೆ ಹೆಚ್ಚುವರಿ ಕೋಚಿಂಗ್ ಅಗತ್ಯವಿದೆಯೇ ? ನೀವು ಕೋಚಿಂಗ್‌ಗೆ ಹೋಗಿದ್ದಿರಾ? ಯಾವ ರೀತಿ ತರಬೇತಿ ನೆರವಾಗುತ್ತದೆ?

ಕೋಚಿಂಗ್ ತೆಗೆದುಕೊಂಡರೆ ಯಶಸ್ಸುಗಳಿಸಲು ನಿಜಕ್ಕೂ ಸಹಕಾರಿಯಾಗುತ್ತದೆ. ಏಕೆಂದರೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾರ್ಗದರ್ಶನದ ಅಗತ್ಯ ಇದೆ. ಅದು ಉತ್ತಮ ರೀತಿಯ ಮಾರ್ಗದರ್ಶನವಾಗಿರಬೇಕು. ಏನನ್ನು ಓದಬೇಕು ಎನ್ನುವುದು ಎಷ್ಟು ಮುಖ್ಯವೋ ಏನನ್ನು ಓದಬಾರದು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಕೋಚಿಂಗ್ ಬೇಕಾಗುತ್ತದೆ.

● ಎಷ್ಟು ಸಮಯದಿಂದ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೀರಿ? ಸಿದ್ಧತೆಗೆ ಸಮಯ ಹೊಂದಾಣಿಕೆ ಹೇಗೆ ಮಾಡಿಕೊಂಡಿರಿ?

ಎಂಜಿನಿಯರಿಂಗ್ ಮುಗಿದ ಮೇಲೆ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಲು ಆರಂಭಿಸಿದೆ. ಎರಡು ಪ್ರಯತ್ನಗಳು ವಿಫಲವಾದ ಮೇಲೆ, ನಡುವೆ ಎಲ್‌ಎಲ್‌ಬಿ ಪದವಿ ಮುಗಿಸಿದೆ. 2020ರಿಂದ ಗಂಭೀರವಾಗಿ ಪರೀಕ್ಷೆಗೆ ಸಿದ್ಧತೆ ಶುರು ಮಾಡಿದೆ.

● ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ನಿಮ್ಮ ಸಲಹೆ?

ಶಾಲೆ ಅಥವಾ ಕಾಲೇಜು ದಿನಗಳಿಂದಲೇ ನಿತ್ಯ ದಿನಪತ್ರಿಕೆ ಓದಬೇಕು. 6ರಿಂದ 12ರವರೆಗಿನ ಸಿಬಿಎಸ್‌ಸಿ ಬೋರ್ಡ್‌ನ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ಕಡ್ಡಾಯ ಓದಲೇಬೇಕು. ಕೋಚಿಂಗ್ ಸೆಂಟರ್ ಸೇರುವುದಕ್ಕೂ ಮುನ್ನ ಯುಪಿಎಸ್‌ಸಿ ಪರೀಕ್ಷೆ ಪಾಸಾದವರ ಸಲಹೆ ಪಡೆಯಬೇಕು.

ಪ್ರಜಾವಾಣಿ ಉದ್ಯೋಗ ವಾರ್ತೆ

ಐಡಿಬಿಐ ಬ್ಯಾಂಕ್: 226 ಅಧಿಕಾರಿ ಹುದ್ದೆಗಳಿಗೆ ಅರ್ಜಿ ಆಹ್ವಾನ

ಭಾರತದಾದ್ಯಂತ ವಿಸ್ತೃತ ಶಾಖೆಗಳನ್ನು ಹೊಂದಿರುವ ಪ್ರಮುಖ ಖಾಸಗಿ ವಲಯದ ಐಡಿಬಿಐ ಬ್ಯಾಂಕ್ ತನ್ನ ಶಾಖೆಗಳು ಮತ್ತು ಕಚೇರಿಗಳಲ್ಲಿ ಖಾಲಿ ಇರುವ ವಿಶೇಷ ಅಧಿಕಾರಿ (ವಿವಿಧ ವೃಂದದ) ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ಸಂಖ್ಯೆ: 226

ವಿದ್ಯಾರ್ಹತೆ: ಹುದ್ದೆಗಳಿಗೆ ಸಂಬಂಧಿಸಿದಂತೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ/ ಬಿ.ಟೆಕ್ / ಬಿಇ ಪದವಿ ಪಾಸ್ ಮಾಡಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.. ಹೆಚ್ಚಿನ ಮಾಹಿತಿಗೆ ಈ ಕೆಳಗೆ ಅಧಿಸೂಚನೆಯ ಲಿಂಕ್ ನೀಡಿದೆ ಗಮನಿಸಬಹುದು.

ವೇತನ ಶ್ರೇಣಿ: ಇತರೆ ಭತ್ಯೆಗಳು ಸೇರಿದಂತೆ ಮಾಸಿಕ ₹ 36,700-₹64,000 ವೇತನ ಪಡೆಯಬಹುದು.

ವಯಸ್ಸು: ಕನಿಷ್ಠ 18 ವರ್ಷಗಳು, ಗರಿಷ್ಠ 40 ವರ್ಷಗಳು.

ವಯೋಮಿತಿ ಸಡಿಲಿಕೆ: ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳು.

ಅರ್ಜಿ ಶುಲ್ಕ: ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ₹ 200. ಇತರೆ ಅಭ್ಯರ್ಥಿಗಳಿಗೆ ₹ 1000 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ.


ನೇಮಕಾತಿ ಪ್ರಕ್ರಿಯೆ: ಲಿಖಿತ ಪರೀಕ್ಷೆ ಮೂಲಕ ನೇಮಕಾತಿ ನಡೆಯಲಿದೆ. ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಗಾಗಿ ಅಧಿಸೂಚನೆಯನ್ನು ನೋಡುವುದು.

ಅರ್ಜಿಸಲ್ಲಿಸುವ ವಿಧಾನ: ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಅಧಿಕೃತ ವೆಬ್‌ಸೈಟ್ https://ibpsonline.ibps.in/idbiscomay22/ ಗೆ ಲಾಗಿನ್ ಆಗಿ ಅರ್ಜಿಗಳನ್ನು ಸಲ್ಲಿಸಬಹುದು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು 2022ರ ಜುಲೈ 10 ಕೊನೆ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಅಧಿಸೂಚನೆ ಲಿಂಕ್ ನೋಡಿ: https://ibpsonline.ibps.in/idbiscomay22/uploads/loadpdf.php?file = k7m5p + f...

ವೆಬ್‌ಸೈಟ್: https://ibpsonline.ibps.in/idbiscomay22/



ಯುಪಿಎಸ್‌ಸಿ- ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ -2, ಕೆಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ -2 ಹಾಗೂ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಪ್ರಚಲಿತ ವಿದ್ಯಮಾನವೊಂದರ ಮಾಹಿತಿ ಇಲ್ಲಿದೆ.

ಗೋಲ್ಡ್ ಬಾಂಡ್ ಯೋಜನೆ

ಯು.ಟಿ. ಆಯಿಶ ಫರ್ಝಾನ

ಕಳೆದ ಜೂನ್ 16 ರಂದು ಕೇಂದ್ರ ಹಣಕಾಸು ಸಚಿವಾಲಯವು 2022-23 ನೇ ಸಾಲಿಗೆ ಸಾವರಿನ್ ಗೋಲ್ಡ್ ಬಾಂಡ್ಸ್ ಸ್ಕೀಮ್‌ನ (Sovereign Gold Bonds - SGBs) ಎರಡು ಭಾಗಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿರುವುದಾಗಿ ತಿಳಿಸಿದೆ. ಈ ಯೋಜನೆ ಪರಿಕಲ್ಪನೆ ಹಾಗೂ ಮತ್ತಿತರ ಮಾಹಿತಿ ಇಲ್ಲಿದೆ.

- ಸಾವರಿನ್ ಗೋಲ್ಡ್ ಬಾಂಡ್‌ಗಳು, ಚಿನ್ನದ ಹೆಸರಿನಲ್ಲಿ ಹೂಡುವ ಸರ್ಕಾರಿ ಭದ್ರತಾಪತ್ರಗಳಾಗಿವೆ.
- ಇದು ಭೌತಿಕ ಚಿನ್ನವನ್ನು ಕೂಡಿಟ್ಟುಕೊಳ್ಳುವ ಬದಲು ಬಾಂಡ್ ಪತ್ರಗಳಲ್ಲಿ ಚಿನ್ನ ಖರೀದಿಸುವ ಸಲುವಾಗಿ ಬಂದ ಹೊಸ ಯೋಜನೆಯಾಗಿದೆ. ಹೂಡಿಕೆದಾರರು ನಿಗದಿತ ಬೆಲೆಯನ್ನು ನಗದು ರೂಪದಲ್ಲಿ ಪಾವತಿಸಬೇಕು. ಮತ್ತು ಬಾಂಡ್‌ಗಳ ಆಯಾ ಸಮಯದ ಬೆಲೆಗೆ ತಕ್ಕಂತೆ ನಗದು ರೂಪದಲ್ಲಿ ತಿರುಗಿ ಪಡೆಯಲಾಗುತ್ತದೆ.
- ಈ ಬಾಂಡ್ ಅನ್ನು ಭಾರತ ಸರ್ಕಾರದ ಪರವಾಗಿ ರಿಸರ್ವ್ ಬ್ಯಾಂಕ್ ನೀಡುತ್ತದೆ.
- ಬಾಂಡ್‌ಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ಶೆಡ್ಯೂಲ್ಡ್ ಖಾಸಗಿ ಬ್ಯಾಂಕ್‌ಗಳು, ಶೆಡ್ಯೂಲ್ಡ್ ಫಾರಿನ್ ಬ್ಯಾಂಕ್ ಗಳು, ಗೊತ್ತುಪಡಿಸಿದ ಪೋಸ್ಟ್ ಆಫೀಸ್‌ಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ (SHCIL) ಮತ್ತು ಅಧಿಕೃತ ಸ್ಟಾಕ್ ಎಕ್ಸ್‌ಚೇಂಜ್‌ಗಳ ಕಚೇರಿಗಳು ತಮ್ಮ ಶಾಖೆಗಳ ಮೂಲಕ ನೇರವಾಗಿ ಅಥವಾ ಅವರ ಏಜೆಂಟ್‌ಗಳ ಮೂಲಕ ಬಿಡುಗಡೆ ಮಾಡಲಾಗುತ್ತದೆ.
- ಬಾಂಡ್‌ಗಳನ್ನು ಕನಿಷ್ಟ ಒಂದು ಗ್ರಾಂ ಚಿನ್ನ ಮತ್ತು ಅದರ ಗುಣಕಗಳಲ್ಲಿ ನೀಡಲಾಗುತ್ತದೆ. ಬಾಂಡ್‌ನಲ್ಲಿ ಕನಿಷ್ಠ ಒಂದು ಗ್ರಾಂ ಚಿನ್ನ ಹೂಡಿಕೆ ಮಾಡಬಹುದು. ಗರಿಷ್ಟ ಹೂಡಿಕೆಯ ಮಿತಿಯನ್ನು ವ್ಯಕ್ತಿಗಳಿಗೆ 4 ಕೆ.ಜಿ, ಹಿಂದೂ ಅವಿಭಜಿತ ಕುಟುಂಬಕ್ಕೆ (HUF) 4 ಕೆಜಿ ಮತ್ತು ಟ್ರಸ್ಟ್‌ಗಳು ಮತ್ತು ಅಂತಹುದೇ ಘಟಕಗಳಿಗೆ 20 ಕೆಜಿ ನಿಗದಿಪಡಿಸಲಾಗಿದೆ (ಇವು ಪ್ರತಿ ಹಣಕಾಸು ವರ್ಷಕ್ಕೆ ಕಾಲಕಾಲಕ್ಕೆ ಸರ್ಕಾರದಿಂದ ಸೂಚಿಸಲಾಗುವಂತೆ ಇರುತ್ತದೆ)
- ಜಂಟಿ ಹೂಡಿಕೆಯ ಸಂದರ್ಭದಲ್ಲಿ ಈ ಮಿತಿಯು ಮೊದಲ ಅರ್ಜಿದಾರರಿಗೆ ಅನ್ವಯಿಸುತ್ತದೆ. ಸರ್ಕಾರದಿಂದ ಆರಂಭಿಕ ವಿತರಣೆಯ ಸಮಯದಲ್ಲಿ ವಿವಿಧ ಭಾಗಗಳ ಅಡಿಯಲ್ಲಿ ಚಂದಾದಾರರಾದ ಬಾಂಡ್‌ಗಳು ಮತ್ತು ದ್ವಿತೀಯ ಮಾರುಕಟ್ಟೆ(ಷೇರು ಮಾರುಕಟ್ಟೆ)ಯಿಂದ ಖರೀದಿಸಿದ ಬಾಂಡ್‌ಗಳಿಗೆ ಕೂಡಾ ಈ ವಾರ್ಷಿಕ ಮಿತಿಯು ಅನ್ವಯಿಸುತ್ತದೆ.
- ಬಾಂಡ್ ಅನ್ನು ಯಾವುದೇ ಬ್ಯಾಂಕ್ ಅಥವಾ ಬ್ಯಾಂಕೇತರ ಹಣಕಾಸು ಸಂಸ್ಥೆಗಳಲ್ಲಿ ಅಡಮಾನವಿಟ್ಟಿದ್ದರೆ ಮೇಲೆ ನಮೂದಿಸಲಾದ ಗರಿಷ್ಟ ಮಿತಿಯನ್ನು ಒಳಗೊಂಡಿರುವುದಿಲ್ಲ.
- ಅರ್ಹತಾ ಮಾನದಂಡಗಳನ್ನು ಪೂರೈಸುವ ಸಂಬಂಧಿ/ಸ್ನೇಹಿತ/ಯಾರಾದರೂ ಬಾಂಡ್ ಅನ್ನು ಉಡುಗೊರೆಯಾಗಿ ನೀಡಬಹುದು ಅಥವಾ ವರ್ಗಾಯಿಸಬಹುದು.
- ಬಾಂಡ್‌ಗಳನ್ನು ಸರ್ಕಾರಿ ಸೆಕ್ಯುರಿಟಿಸ್ ಆಕ್ಟ್ 2006 ಮತ್ತು ಸರ್ಕಾರಿ ಸೆಕ್ಯುರಿಟಿಸ್ ರೆಗ್ಯುಲೇಷನ್ಸ್ 2007ರ ನಿಬಂಧನೆಗಳ ಅನುಸಾರವಾಗಿ ವಿತರಣಾ ಏಜೆಂಟ್‌ಗಳ ಬಳಿ ಲಭ್ಯವಿರುವ ವರ್ಗಾವಣೆಯ ಸಾಧನವನ್ನು ಬಳಸುವ ಮೂಲಕ ಈ ಬಾಂಡ್‌ಗಳ ಮೆಚ್ಯುರಿಟಿಗೆ ಮುಕ್ತಾಯಗೊಳ್ಳುವ ಮೊದಲೇ ವರ್ಗಾಯಿಸಬಹುದು.

ಹೂಡಿಕೆ ಮಾಡಲು ಅರ್ಹ ವ್ಯಕ್ತಿಗಳು

- ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ - 1999ರ ಅಡಿಯಲ್ಲಿ ವ್ಯಾಖ್ಯಾನಿಸಲಾದ ಭಾರತದಲ್ಲಿ ವಾಸಿಸುವ ವ್ಯಕ್ತಿಗಳು ಎಸ್‌ಬಿಜಿ ಯೋಜನೆಯಲ್ಲಿ ಹೂಡಿಕೆ ಮಾಡಲು ಅರ್ಹರಾಗಿರುತ್ತಾರೆ.
- ಅರ್ಹ ಹೂಡಿಕೆದಾರರು ವ್ಯಕ್ತಿಗಳು, ಹಿಂದೂ ಅವಿಭಕ್ತ ಕುಟುಂಬಗಳು, ಟ್ರಸ್ಟ್‌ಗಳು, ವಿವಿಗಳು ಮತ್ತು ದತ್ತಿ ಸಂಸ್ಥೆಗಳನ್ನು ಒಳಗೊಂಡಿರುತ್ತಾರೆ.

ಬಡ್ಡಿ ದರ

- ಬಾಂಡ್‌ಗಳು ಆರಂಭಿಕ ಹೂಡಿಕೆಯ ಮೊತ್ತದ ಮೇಲೆ ಪ್ರತಿ ವರ್ಷಕ್ಕೆ ಶೇ 2.50 (ನಿಶ್ಚಿತ ದರ) ದರದಲ್ಲಿ ಬಡ್ಡಿಯನ್ನು ನೀಡುತ್ತವೆ.
- ಬಡ್ಡಿಯನ್ನು ಹೂಡಿಕೆದಾರರ ಬ್ಯಾಂಕ್ ಖಾತೆಗೆ ಅರೆವಾರ್ಷಿಕವಾಗಿ ಜಮಾ ಮಾಡಲಾಗುತ್ತದೆ ಮತ್ತು ಕೊನೆಯ ಬಡ್ಡಿಯನ್ನು ಅಸಲಿನ ಜೊತೆಗೆ ಮುಕ್ತಾಯದ ಮೊತ್ತಕ್ಕೆ ಸೇರಿಸಿ ಪಾವತಿಸಲಾಗುತ್ತದೆ.

ಬಾಂಡ್ ನಗದೀಕರಣ

- ಬಾಂಡ್‌ನ ಅವಧಿ 8 ವರ್ಷಗಳು.
- ಆದರೆ ಆರಂಭಿಕ ಐದನೇ ವರ್ಷದ(ಕೂಪನ್‌ನ ಬಿಡುಗಡೆಯ ದಿನಾಂಕದಿಂದ) ನಂತರ ಬಾಂಡ್‌ನ ನಗದಿನ ಮರುಪಡೆಯುವಿಕೆಯನ್ನು ಅನುಮತಿಸಲಾಗಿದೆ.
- ಬಾಂಡ್ ಅನ್ನು ಡಿಮ್ಯಾಟ್ ರೂಪದಲ್ಲಿ ಹೂಡಿಕೆ ಮಾಡಿದ್ದರೆ ಷೇರು ವ್ಯಾಪಾರವನ್ನೂ ಮಾಡಬಹುದಾಗಿದೆ.
- ಇದನ್ನು ಯಾವುದೇ ಅರ್ಹ ಹೂಡಿಕೆದಾರರಿಗೆ ವರ್ಗಾಯಿಸಬಹುದು.

ಮೇಲಾಧಾರ ಪತ್ರಗಳಾಗಿ ಎಸ್‌ಜಿಬಿ ಸ್ಕೀಮ್

- ಈ ಭದ್ರತೆಗಳು ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕಿಂಗ್ ಅಲ್ಲದ ಹಣಕಾಸು ಕಂಪನಿಗಳಿಂದ (NBFC) ಸಾಲಗಳಿಗೆ ಮೇಲಾಧಾರವಾಗಿ ಬಳಸಲು ಅರ್ಹವಾಗಿವೆ.
- ಸಾಲದ ಮೌಲ್ಯ ಅನುಪಾತವು ಕಾಲಕಾಲಕ್ಕೆ ಆರ್‌ಬಿಐ ಸೂಚಿಸುವ ಸಾಮಾನ್ಯ ಚಿನ್ನದ ಸಾಲದಂತೆಯೇ ಅನ್ವಯಿಸುತ್ತದೆ.

ಬಾಂಡ್‌ಗಳ ಮೇಲೆ ಸಾಲ ನೀಡುವ ಅಧಿಕಾರವು ಬ್ಯಾಂಕ್ ಅಥವಾ ಹಣಕಾಸು ಏಜೆನ್ಸಿಯ ನಿರ್ಧಾರಕ್ಕೆ ಒಳಪಟ್ಟಿರುತ್ತದೆ ಆದರೆ ಅದನ್ನು ಹಕ್ಕಿನ ವಿಷಯ ಎಂಬಂತೆ ಪರಿಗಣಿಸಲಾಗುವುದಿಲ್ಲ.

ವಾಸ್ತುತಜ್ಞ ಚಂದ್ರಶೇಖರ ಗುರೂಜಿ ಹತ್ಯೆ ಪ್ರಕರಣ

₹5 ಕೋಟಿ ಆಸ್ತಿ ಮಾರಾಟಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಉಣಕಲ್‌ನ ದಿ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಮಂಗಳವಾರ ನಡೆದ ವಾಸ್ತುತಜ್ಞ ಚಂದ್ರಶೇಖರ ಗುರೂಜಿ ಅವರ ಬರ್ಬರ ಹತ್ಯೆಗೆ, ಆರೋಪಿ ಮಹಾಂತೇಶ ಶಿರೂರ ಮಾರಾಟ ಮಾಡಿದ್ದ ಗುರೂಜಿಗೆ ಸೇರಿದ್ದ ₹5 ಕೋಟಿ ಮೌಲ್ಯದ ಆಸ್ತಿಯೇ ಕಾರಣ ಎನ್ನುವ ಅಂಶ ಪೊಲೀಸ್ ತನಿಖೆಯಿಂದ ತಿಳಿದುಬಂದಿದೆ.

ಗೋಕುಲ ರಸ್ತೆ ಬಳಿ ಮಹಾಂತೇಶನ ಹೆಸರಲ್ಲಿ ಗುರೂಜಿ ಬೇನಾಮಿ ಆಸ್ತಿ ಮಾಡಿದ್ದರು. ಅದನ್ನು ₹5 ಕೋಟಿಗೆ ಮಹಾಂತೇಶ ಮಾರಾಟ ಮಾಡಿದ್ದ. ಆ ಹಣ ನೀಡುವಂತೆ ಗುರೂಜಿ ಒತ್ತಡ ಹಾಕುತ್ತಿದ್ದರು. ಇಬ್ಬರ ನಡುವೆ ಅನೇಕ ಸಲ ಜಗಳ ನಡೆದಿತ್ತು. ಇದೇ ಕಾರಣಕ್ಕೆ ಮಹಾಂತೇಶ, ತನ್ನ ಸಹಚರ ಮಂಜುನಾಥ ಮರೇವಾಡನೊಂದಿಗೆ ಹತ್ಯೆಗೆ ಸಂಚು ರೂಪಿಸಿದ್ದ.

ಸರಳ ವಾಸ್ತು ಸಂಸ್ಥೆಯಲ್ಲಿ ಕೆಲಸಕ್ಕಿದ್ದ ಇಬ್ಬರೂ, ಸಂಸ್ಥೆ ಹೆಸರಲ್ಲಿ ಹಣ ಪಡೆದು ವಂಚಿಸಿದ್ದರು ಎಂಬ ಕಾರಣಕ್ಕೆ ಗುರೂಜಿ 2016ರಲ್ಲಿ ಇಬ್ಬರನ್ನೂ ಕೆಲಸದಿಂದ ತೆಗೆದಿದ್ದರು. ಆಸ್ತಿ ಹಾಗೂ ಹಣಕಾಸಿನ ವಿಷಯದಲ್ಲಿ ಇಬ್ಬರ ನಡುವೆ ಏರ್ಪಟ್ಟ ಕಲಹವೇ ಹತ್ಯೆಗೆ ಕಾರಣವಾಗಿದೆ ಎಂದು ವಿಚಾರಣೆಯಲ್ಲಿ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮಹಾಂತೇಶ 2008ರಿಂದ ಮುಂಬೈನಲ್ಲಿ ಸರಳವಾಸ್ತು ಸಂಸ್ಥೆ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದ. ಗುರೂಜಿ ಆಪ್ತನಾಗಿಯೂ ವಿಶ್ವಾಸ ಗಳಿಸಿದ್ದರಿಂದ, ಮಹಾಂತೇಶ ಮತ್ತು ಅವನ ಪತ್ನಿ ವನಜಾಕ್ಷಿ ಹೆಸರಿನಲ್ಲಿ ಹುಬ್ಬಳ್ಳಿಯ ಕಲವೆಡೆ ಗುರೂಜಿ ಆಸ್ತಿ ಮಾಡಿದ್ದರು. ಅಲ್ಲದೆ, ತಮ್ಮ ಹೆಸರಲ್ಲಿ ಮತ್ತು ಅವರ ಆಪ್ತವಲಯದ ಕೆಲವರ ಹೆಸರಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಬೇನಾಮಿ ಆಸ್ತಿ ಮಾಡಿದ್ದಾರೆ ಎಂದು ಆರೋಪಿಗಳು ತಿಳಿಸಿದ್ದಾರೆ. ಎಸಿಪಿ ವಿನೋದ ಮುಕ್ತೇದಾರ ನೇತೃತ್ವದ ತಂಡ ಅವುಗಳ ಪತ್ತೆಗೆ ಮುಂದಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದೊಡ್ಡ ತಪ್ಪು ಮಾಡಿದ ಪತಿ'

ಹುಬ್ಬಳ್ಳಿ: 'ಚಂದ್ರಶೇಖರ ಗುರೂಜಿ ಒಳ್ಳೆಯವರು. ದೇವರಂತಹ ಮನುಷ್ಯ. ಎಲ್ಲರನ್ನೂ ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ನನ್ನ ಗಂಡ ಅವರ ಹತ್ಯೆ ಮಾಡಿ ದೊಡ್ಡ ತಪ್ಪು ಮಾಡಿದ್ದಾರೆ. ಇದರಿಂದ ನನ್ನ ಹಾಗೂ ಮಕ್ಕಳ ಜೀವನವೂ ಹಾಳಾಯಿತು. ಅವರು ಮಾಡಿದ ತಪ್ಪಿಗೆ, ಏನು ಶಿಕ್ಷೆ ಇದೆಯೋ ಅದನ್ನು ಅನುಭವಿಸಲಿ' ಎಂದು ಆರೋಪಿ ಮಹಾಂತೇಶ ಶಿರೂರ ಪತ್ನಿ ವನಜಾಕ್ಷಿ ಹೇಳಿದರು.

> **ಆರೋಪಿಗಳನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಆರು ದಿನ ಪೊಲೀಸ್ ವಶಕ್ಕೆ ಪಡೆದಿದ್ದೇವೆ. ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಯುತ್ತಿದೆ**
> **ಲಾಭೂರಾಮ್,** ಕಮಿಷನರ್, ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರೇಟ್

6 ದಿನ ಪೊಲೀಸ್ ವಶಕ್ಕೆ: ಹತ್ಯೆ ನಡೆದ ಸ್ಥಳವಾದ ಹೋಟೆಲ್ ಹಾಗೂ ಕೃತ್ಯಕ್ಕೆ ಬಳಸಿದ್ದ ಎರಡು ಚಾಕುಗಳನ್ನು ಆರೋಪಿಗಳು ಎಸೆದು ಹೋಗಿದ್ದ ಉಣಕಲ್‌ನ ನವೀನ್ ಹೋಟೆಲ್‌ನ ಪೆಟ್ರೋಲ್ ಬಂಕ್ ಬಳಿಗೆ ಬುಧವಾರ ಆರೋಪಿಗಳನ್ನು ಕರೆದೊಯ್ದು ಸ್ಥಳ ಮಹಜರು ಮಾಡಲಾಗಿದೆ. ಸಂಜೆ ಒಂದನೇ ಸೆಷನ್ಸ್ ಕೋರ್ಟ್‌ಗೆ ಆರೋಪಿಗಳನ್ನು ಹಾಜರುಪಡಿಸಿದ ಪೊಲೀಸರು, ಆರು ದಿನ ಪೊಲೀಸ್ ವಿಚಾರಣೆಗೆ ಪಡೆದುಕೊಂಡಿದ್ದಾರೆ. ಆರೋಪಿಗಳು ಗುರೂಜಿ ದೇಹದ ವಿವಿಧ ಭಾಗಗಳಿಗೆ ಒಟ್ಟು 53 ಬಾರಿ ಚಾಕುವಿನಿಂದ ಇರಿದಿದ್ದಾರೆ ಎಂದು ಮರಣೋತ್ತರ ಪರೀಕ್ಷೆಯಲ್ಲಿ ಗೊತ್ತಾಗಿದೆ.

ಎನ್‌ಕೌಂಟರ್ ಭೀತಿ: ಹತ್ಯೆ ಮಾಡಿ ಪರಾರಿಯಾಗಲು ಯತ್ನಿಸಿದ್ದ ಆರೋಪಿಗಳನ್ನು ಬೆಳಗಾವಿಯ ರಾಮದುರ್ಗದಲ್ಲಿ ಪೊಲೀಸರು ಬಂಧಿಸಿ ಕರೆದೊಯ್ಯುವಾಗ ಆರೋಪಿ ಮಹಾಂತೇಶ, 'ನಾವೇ ಪೊಲೀಸರಿಗೆ ಕಾಲ್ ಮಾಡಿ ಶರಣಾಗುವುದಾಗಿ ಹೇಳಿದ್ದೇವೆ. ನಾವೇ ಬರುತ್ತೇವೆ' ಎಂದು ಹೇಳಿರುವ ವಿಡಿಯೊ ವಾಟ್ಸ್‌ಆ್ಯಪ್ ಸೇರಿದಂತೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಂತ್ಯಕ್ರಿಯೆ: ಕುಟುಂಬದವರು ಹಾಗೂ ಸಂಬಂಧಿಕರ ಆಕ್ರಂದನದ ನಡುವೆ ವಾಸ್ತುತಜ್ಞ ಚಂದ್ರಶೇಖರ ಗುರೂಜಿ ಅಂತ್ಯಕ್ರಿಯೆ ನಗರದ ಸುಳ್ಳ ರಸ್ತೆಯಲ್ಲಿರುವ ಅವರ ಜಮೀನಿನಲ್ಲಿ ಬುಧವಾರ ನೆರವೇರಿತು. ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ನೂರಾರು ಅಭಿಮಾನಿಗಳು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ಅಂತಿಮ ವಿಧಿ ವಿಧಾನಗಳು ನಡೆದವು.

ಹೇಳಿಕೆ ಆಧರಿಸಿ 'ಪ್ರಭಾವಿ'ಗಳಿಗೆ ನೋಟಿಸ್ ನೀಡಲು ಸಿಐಡಿ ಸಿದ್ಧತೆ

ಪೌಲ್ ಫಾರ್ಮ್‌ಹೌಸ್ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಸತಿ ಸಮುಚ್ಚಯ ಹಾಗೂ ಫಾರ್ಮ್ ಹೌಸ್ ಮೇಲೆ ದಾಳಿ
- ನೇಮಕಾತಿ ಸಂಬಂಧ ಸರ್ಟಿಫಿಕೇಟ್‌ಗಳ ವಶ

ಬೆಂಗಳೂರು: ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿಯಾಗಿದ್ದ ಅಮ್ರಿತ್ ಪೌಲ್ ಅವರ ವಸತಿ ಸಮುಚ್ಚಯ ಹಾಗೂ ಫಾರ್ಮ್ ಹೌಸ್ ಮೇಲೆ ಬುಧವಾರ ಸಿಐಡಿ ತಂಡವು ದಾಳಿ ನಡೆಸಿ ಶೋಧಿಸಿತು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಫಾರ್ಮ್ ಹೌಸ್‌ನಲ್ಲಿ ಬೆಳಿಗ್ಗೆ ಒಂದು ತಂಡವು ಶೋಧ ನಡೆಸಿದರೆ, ಮತ್ತೊಂದು ತಂಡವು ಬೆಂಗಳೂರಿನ ಸಹಕಾರ ನಗರದ ವಸತಿ ಸಮುಚ್ಚಯದಲ್ಲಿ ತಪಾಸಣೆ ನಡೆಸಿತು.

ವಸತಿ ಸಮುಚ್ಚಯದಲ್ಲಿ ಮಹತ್ವದ ದಾಖಲೆಗಳು, ನೇಮಕಾತಿ ಸಂಬಂಧ ಸರ್ಟಿಫಿಕೇಟ್‌ಗಳು ತನಿಖಾ ತಂಡಕ್ಕೆ ಸಿಕ್ಕಿದೆ. ಫಾರ್ಮ್ ಹೌಸ್‌ನಲ್ಲಿ ಕಡಿಮೆ ಮೊತ್ತದ ನಗದು ದೊರೆತಿದ್ದು, ಅವುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮತ್ತೊಬ್ಬ ಆರೋಪಿ ಜಾಗೃತ್ ಮನೆಯಲ್ಲೂ ಶೋಧ ಕಾರ್ಯ ನಡೆಸಲಾಗಿದೆ. ಅಲ್ಲಿಯೂ ಮೊಬೈಲ್ ಹಾಗೂ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ.

ಅಮ್ರಿತ್ ಪೌಲ್ ಅವರನ್ನು ಸೋಮವಾರ ಬಂಧಿಸಿ ವಶಕ್ಕೆ ಪಡೆದಿದ್ದ ಸಿಐಡಿ ತಂಡವು ತನ್ನ ಕಚೇರಿಯಲ್ಲಿ ಮೂರನೇ ದಿನವಾದ ಬುಧವಾರ ಸಹ ತೀವ್ರ ವಿಚಾರಣೆಗೆ ಒಳಪಡಿಸಿತು. ಇತರೆ ಬಂಧಿತ ಆರೋಪಿಗಳು ನೀಡಿದ್ದ ಹೇಳಿಕೆ ಆಧರಿಸಿ ಪ್ರಶ್ನೆ ಹಾಕಲಾಗಿದೆ. ಕಮಿಷನ್ ವಿಚಾರ, ಹಣ ವರ್ಗಾವಣೆಯ ಬಗ್ಗೆ ಮಾಹಿತಿ ಕಲೆಹಾಕಿದೆ.

ಈ ಮಧ್ಯೆ 1ನೇ ಎಸಿಎಂಎಂ ನ್ಯಾಯಾಲಯವು ಅಮ್ರಿತ್ ಪೌಲ್‌ಗೆ ಮನೆಯ ಊಟ ನೀಡಲು ಆದೇಶಿಸಿದೆ.

ಪೌಲ್ ಅವರಿಗೆ ಆರೋಗ್ಯ ಸರಿಯಿಲ್ಲ. ಮನೆಯ ಊಟ ನೀಡಲು ಅವಕಾಶ ನೀಡುವಂತೆ ಅವರ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಮನವಿ ಪುರಸ್ಕರಿಸಿದ ನ್ಯಾಯಾಲಯವು ಬೆಳಿಗ್ಗೆಯ ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿಯ ಮನೆ ನೀಡಲು ಅವಕಾಶ ನೀಡಿದೆ.

ಪೌಲ್ ವಿಚಾರಣೆ ವೇಳೆ 'ಪ್ರಭಾವಿ'ಗಳ ಹೆಸರು ಬಹಿರಂಗ ಪಡಿಸಿದ್ದು, ಅವರಿಗೆ ನೋಟಿಸ್ ನೀಡಲು ಸಿದ್ಧತೆ ನಡೆಸಲಾಗುತ್ತಿದೆ ಎಂದೂ ಮೂಲಗಳು ಹೇಳಿವೆ.

'ಸಚಿವರು, ಪ್ರಭಾವಿಗಳ ಹೆಸರು ದಾಖಲಿಸಿಕೊಳ್ಳುತ್ತಿಲ್ಲ'

ಬೆಂಗಳೂರು: 'ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧನದಲ್ಲಿರುವ ಎಡಿಜಿಪಿ ಅಮ್ರಿತ್ ಪೌಲ್, ಈ ಹಗರಣದಲ್ಲಿ ಭಾಗಿಯಾಗಿರುವ ಸಚಿವರು, ಪ್ರಭಾವಿಗಳ ಹೆಸರು ಬಹಿರಂಗಪಡಿಸಲು ಸಿದ್ಧವಿದ್ದರೂ ತನಿಖಾಧಿಕಾರಿಗಳು ಅದನ್ನು ದಾಖಲಿಸಿಕೊಳ್ಳುತ್ತಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಈಗ ನಡೆಯುತ್ತಿರುವ ತನಿಖೆಯಲ್ಲಿ ಆಂತರಿಕವಾಗಿ ಏನೆಲ್ಲ ಆಗುತ್ತಿದೆ ಎಂಬುದು ಗೊತ್ತಿದೆ. ಆದರೆ, ಇಂಥ ತನಿಖೆಯಿಂದ ನ್ಯಾಯ ಸಿಗುವುದಿಲ್ಲ. ಹೈಕೋರ್ಟ್ ನ್ಯಾಯಮೂರ್ತಿಯ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು' ಎಂದರು.

ನ್ಯಾಯಾಲಯಕ್ಕೆ 1974 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ ಸಿಐಡಿ

'ಆರ್.ಡಿ. ಪಾಟೀಲ, ಮೇಳಕುಂದಿ ಅಕ್ರಮದ ಸೂತ್ರಧಾರರು'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅವರಿಗೆ ಸೇರಿದ ನಗರದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ ಅಫಜಲಪುರದ ಆರ್.ಡಿ. ಪಾಟೀಲ, ನೀರಾವರಿ ಇಲಾಖೆಯ ಎಂಜಿನಿಯರ್ ಆಗಿದ್ದ ಮಂಜುನಾಥ ಮೇಳಕುಂದಿ ಮತ್ತು ಶಾಲೆಯ ಪ್ರಾಂಶುಪಾಲ ಕಾಶಿನಾಥ ಚಿಲ್ ಪ್ರಮುಖ ಆರೋಪಿಗಳು' ಎಂದು ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿದ 1974 ಪುಟಗಳ ದೋಷಾರೋಪ ಪಟ್ಟಿಯಲ್ಲಿ ಪೂರಕ ದಾಖಲೆಗಳೊಂದಿಗೆ ತಿಳಿಸಿದ್ದಾರೆ.

'ಭೌತಿಕ ಮತ್ತು ಡಿಜಿಟಲ್ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಅಕ್ರಮವಾಗಿ ಪರೀಕ್ಷೆ ನಡೆಸುವುದನ್ನೇ ದಂದೆ ಆಗಿಸಿಕೊಂಡಿದ್ದ ಇಬ್ಬರೂ ಆರೋಪಿಗಳು ಇದಕ್ಕಾಗಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ಮೇಲ್ವಿಚಾರಕರು ಹಾಗೂ ಪೊಲೀಸ್ ಇಲಾಖೆಯಲ್ಲಿನ ಡಿವೈಎಸ್ಪಿ, ಸಿಪಿಐ ಹಂತದ ಅಧಿಕಾರಿಗಳ ನೆರವು ಪಡೆದಿದ್ದರು' ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಇಲ್ಲಿನ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿನ ಪರೀಕ್ಷಾ ಕೇಂದ್ರದಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ 34 ಆರೋಪಿಗಳ ವಿರುದ್ಧ ಸಿಐಡಿ ಅಧಿಕಾರಿಗಳು ದೋಷಾರೋಪ ಹೊರಿಸಿದ್ದಾರೆ. ಅದರಲ್ಲಿ ಆರ್.ಡಿ.ಪಾಟೀಲ, ಮಂಜುನಾಥ ಮೇಳಕುಂದಿ ತನ್ನ ಸಹಚರರನ್ನು ಬಳಸಿಕೊಂಡು ಬ್ಲೂಟೂತ್ ಸಾಧನ ಬಳಸಿ ಉತ್ತರ ಹೇಳಿಸಿದ್ದು ಮತ್ತು ಒಎಂಆರ್ ಉತ್ತರ ಪತ್ರಿಕೆಯನ್ನು ತಿದ್ದುಪಡಿ ಮಾಡುವ ಮೂಲಕ ಅಕ್ರಮ ಎಸಗಿದ ಬಗ್ಗೆ ವಿವರಗಳಿವೆ.

'ಅಕ್ರಮದ ಮಾಹಿತಿ ಇದ್ದ ಶಾಲೆಯ ಪ್ರಾಂಶುಪಾಲ ಕಾಶಿನಾಥ ಚಿಲ್ ಪರೀಕ್ಷೆಗೆ ಗೈರು ಆದ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಪ್ರಶ್ನೆಪತ್ರಿಕೆಗಳನ್ನು ಹೊರಗೆ ತಂದು ಆರ್.ಡಿ. ಪಾಟೀಲ, ಮೇಳಕುಂದಿಗೆ ತಲುಪಿಸಿ ಅಕ್ರಮಕ್ಕೆ ಸಾಥ್ ನೀಡಿದ್ದಾರೆ' ಎಂದು ಆರೋಪ ಹೊರಿಸಲಾಗಿದೆ.

'ಡಿವೈಎಸ್ಪಿಯಾಗಿದ್ದ ಮಲ್ಲಿಕಾರ್ಜುನ ಸಾಲಿ, ಕೆಎಸ್‌ಆರ್‌ಪಿ ಸಹಾಯಕ ಕಮಾಂಡೆಂಟ್ ಆಗಿದ್ದ ವೈಜನಾಥ ಕಲ್ಯಾಣಿ ರೇವೂರ, ಬೆರಳಚ್ಚು ವಿಭಾಗದ ಸಿಪಿಐ ಆನಂದ ಮೇತ್ರಿ ಹೇಗೆ ಅಕ್ರಮದಲ್ಲಿ ಶಾಮೀಲಾಗಿದ್ದರು' ಎಂಬ ಬಗ್ಗೆಯೂ ದಾಖಲೆಗಳನ್ನು ಸಲ್ಲಿಸಲಾಗಿದೆ.

ಒಬ್ಬನಿಗಷ್ಟೇ ಜಾಮೀನು: ಬಂಧಿತ 34 ಆರೋಪಿಗಳು ಜಾಮೀನಿಗಾಗಿ ಇಲ್ಲಿನ ಮೂರನೇ ಜೆಎಂಎಫ್ ನ್ಯಾಯಾಲಯ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಮತ್ತು ಹೈಕೋರ್ಟ್‌ನ ಕಲಬುರಗಿ ಪೀಠದಲ್ಲಿ ಅರ್ಜಿ ಸಲ್ಲಿಸಿದ್ದರು.

ಆದರೆ, ಪ್ರಕರಣ ಗಂಭೀರವಾಗಿರುವ ಕಾರಣ ಜಾಮೀನು ನೀಡಿದರೆ ತನಿಖೆಗೆ ಅಡ್ಡಿಯಾಗಬಹುದು ಎಂಬ ಕಾರಣಕ್ಕೆ 33 ಜನರ ಜಾಮೀನು ಅರ್ಜಿಗಳನ್ನು ನ್ಯಾಯಾಲಯ ತಿರಸ್ಕರಿಸಿತ್ತು. ಪ್ರಕರಣದ ಕಿಂಗ್‌ಪಿನ್, ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಮತ್ತು ಸಹಚರರಿಗೆ ಆಶ್ರಯ ನೀಡಿದ ಕಾರಣಕ್ಕೆ ಬಂಧಿತನಾಗಿದ್ದ ಸೊಲ್ಲಾಪುರದ ಸುರೇಶ ಕಾಟೆಗಾಂವ್‌ಗೆ ಮಾತ್ರ ಇತ್ತೀಚೆಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.


ಆರೆಸ್ಸೆಸ್ ಆಳ ಮತ್ತು ಅಗಲ: ದೇವನೂರರ ಕೃತಿಗೆ ಭಾರಿ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನೂರ ಮಹಾದೇವ ಬರೆದಿರುವ 'ಆರ್‌ಎಸ್‌ಎಸ್: ಆಳ ಮತ್ತು ಅಗಲ' ಕೃತಿಯ 9 ಸಾವಿರ ಪ್ರತಿಗಳು ಅದು ಬಿಡುಗಡೆಗೊಂಡ ಮೂರೇ ದಿನಗಳಲ್ಲಿ ಮಾರಾಟವಾಗಿದ್ದು, ಇನ್ನಷ್ಟು ಪ್ರತಿಗಳನ್ನು ಮುದ್ರಿಸುವ ಪ್ರಕ್ರಿಯೆ ಭರದಿಂದ ಸಾಗಿದೆ.


ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ ಹೆಡಗೇವಾರ್, ಸರಸಂಘಚಾಲಕರಾಗಿದ್ದ ಗೋಳ್ವಲ್ಕರ್, ವಿನಾಯಕ ದಾಮೋದರ ಸಾವರ್ಕರ್ ಅವರೆಲ್ಲ ಸಂವಿಧಾನದ ಮೌಲ್ಯಗಳನ್ನು ಮೀರಿ ಹೇಗೆ ಸಿದ್ಧಾಂತ ಕಟ್ಟಿದ್ದಾರೆ ಎನ್ನುವುದನ್ನು ಸೋದಾಹರಣೆಗಳೊಂದಿಗೆ ದೇವನೂರರು ವಿವರಿಸಿದ್ದಾರೆ. ಇತಿಹಾಸದ ಸಂಗತಿಗಳನ್ನು ಹೇಗೆಲ್ಲ ಬದಲಿಸಲಾಗಿದೆ ಎನ್ನುವುದನ್ನು ಅವರು ತಮ್ಮ ಅಧ್ಯಯನದ ಮಾಹಿತಿಯೊಂದಿಗೆ ಕಟ್ಟಿಕೊಟ್ಟಿದ್ದಾರೆ. 72 ಪುಟಗಳ ಕೃತಿ ಪ್ರಕಟಣೆಯ ಹಕ್ಕುಸ್ವಾಮ್ಯವನ್ನು ಮುಕ್ತವಾಗಿಡಲಾಗಿದೆ.

ಮೊದಲಿಗೆ ಅಭಿರುಚಿ ಪ್ರಕಾಶನ, ಗೌರಿ ಮಿಡಿಯಾ ಟ್ರಸ್ಟ್, ಚಿಕ್ಕನಾಯಕನಹಳ್ಳಿಯ ನಡೆ–ನುಡಿ, ತಿಪಟೂರಿನ ಜನಸ್ಪಂದನ ಟ್ರಸ್ಟ್, ಮಾನವ ಬಂಧುತ್ವ ವೇದಿಕೆ ಹಾಗೂ ಭಾರತೀಯ ಪರಿವರ್ತನ ಸಂಘ– ಇವುಗಳಿಗೆ ಒಟ್ಟು 9000 ಪ್ರತಿಗಳನ್ನು ಮುದ್ರಿಸುವ ಅವಕಾಶ ನೀಡಲಾಗಿತ್ತು. ಗೌರಿ ಮೀಡಿಯಾ ಟ್ರಸ್ಟ್ ಎರಡೇ ದಿನಗಳಲ್ಲಿ 2000 ಪ್ರತಿಗಳನ್ನು ಮಾರಾಟ ಮಾಡಿದ್ದು, ಇನ್ನೂ 3000 ಪ್ರತಿಗಳನ್ನು ಮುದ್ರಿಸುವ ಹಾದಿಯಲ್ಲಿದೆ.



ಆರ್‌ಎಸ್‌ಎಸ್: ಆಳ ಮತ್ತು ಅಗಲ ಮುಖಪುಟ

> **ಆರ್‌ಎಸ್‌ಎಸ್‌ನ ಆಳ–ಅಗಲಗಳನ್ನು ಪರಿಚಯಿಸುವ ಈ ಪುಸ್ತಿಕೆಯ ಒಂದೊಂದು ಅಕ್ಷರವೂ ಪ್ರತಿಯೊಬ್ಬ ಮನುಷ್ಯನ ಎದೆಯೊಳಗೆ ಬೀಳಬೇಕು, ಅದು ವ್ಯರ್ಥವಾಗಲಾರದು. ಎಲ್ಲರೂ ಓದಿ**
> **ಸಿದ್ದರಾಮಯ್ಯ**
> ವಿರೋಧ ಪಕ್ಷದ ನಾಯಕ



> **ಪ್ರತಿ ತಾಲ್ಲೂಕಿನಲ್ಲೂ ಒಂದೋ ಎರಡೋ ಸಾವಿರ ಪ್ರತಿಗಳನ್ನು ಮುದ್ರಿಸಿ ಮಾರಾಟ ಮಾಡಬಾರದೇಕೆ? ತಿಪಟೂರು, ಚಿಕ್ಕನಾಯಕನಹಳ್ಳಿಯವರು ಅದನ್ನು ಮಾಡಿದ್ದಾರೆ**
> **ದೇವನೂರ ಮಹಾದೇವ,** ಸಾಹಿತಿ

'ಆಕೃತಿ ಪುಸ್ತಕ ಇದುವರೆಗೆ ದೇವನೂರರ ಕೃತಿಯ 800 ಪ್ರತಿಗಳನ್ನು ಮಾರಾಟ ಮಾಡಿದೆ. ಇನ್ನೂ 400–500ಕ್ಕೆ ಆರ್ಡರ್ ಇದೆ. ನಿರಂತರವಾಗಿ ಪುಸ್ತಕ ಕೊಳ್ಳುವವರಲ್ಲದೆ ಆಪ್ತೇಷ್ಟರಿಗೆ ಹಂಚಲೆಂದೇ ಕೆಲವರು ಕೊಳ್ಳುತ್ತಿದ್ದಾರೆ. ದೇವನೂರರು ಕೃತಿಯ ಮುದ್ರಣವನ್ನು ರಾಜ್ಯದ ವಿವಿಧೆಡೆಗೆ ತಲುಪಿಸುವಂತೆ ಯೋಜಿಸಿರುವುದು ಆಸಕ್ತಿಕರ' ಎಂದು ಆಕೃತಿ ಪುಸ್ತಕದ ಗುರುಪ್ರಸಾದ್ ಡಿ.ಎನ್. ಅವರು ಹೇಳಿದರು.

'ದೇವನೂರರ ಸಮಕಾಲೀನ ವಸ್ತುವಿಷಯಗಳ ಪುಸ್ತಕಕ್ಕೆ ಬೇಡಿಕೆ ಬಂದಿರುವುದು ಇದೇ ಮೊದಲೇನಲ್ಲ. 2020ರ ಮಾರ್ಚ್‌ನಲ್ಲಿ ಸಿಎಎ–ಎನ್‌ಆರ್‌ಸಿ ಕುರಿತು 'ಈಗ ಭಾರತ ಮಾತನಾಡುತ್ತಿದೆ' ಎಂಬ ಪುಸ್ತಕವನ್ನು ಅವರು ಬರೆದಿದ್ದರು. ಮಾರ್ಚ್ 6ರಂದು ಪ್ರಕಟವಾಗಿದ್ದ ₹ 50 ಬೆಲೆಯ ಆ ಪುಸ್ತಕವನ್ನು ಮಾರ್ಚ್ 9ರಂದೇ ಮರುಮುದ್ರಣ ಮಾಡಲಾಗಿತ್ತು. ಒಂದು ವಾರದೊಳಗೆ ಆರು ಸಾವಿರ ಪ್ರತಿಗಳು ಮಾರಾಟವಾಗಿದ್ದವು. ಇದುವರೆಗೆ ಏನಿಲ್ಲವೆಂದರೂ ಆ ಪುಸ್ತಕದ 15 ಸಾವಿರ ಪ್ರತಿಗಳು ಮಾರಾಟವಾಗಿರಬಹುದು. 'ಆರ್‌ಎಸ್‌ಎಸ್: ಆಳ ಮತ್ತು ಅಗಲ' ಕೂಡ ಸಕಾಲಿಕ ವಸ್ತುವನ್ನು ಒಳಗೊಂಡಿರುವುದರಿಂದ ಇಷ್ಟು ಬೇಡಿಕೆ ಇದೆ' ಎನ್ನುತ್ತಾರೆ ಅಭಿರುಚಿ ಪ್ರಕಾಶನದ ಗಣೇಶ್.

ಇದುವರೆಗೆ ತಮ್ಮ ಸಂಸ್ಥೆಗೆ ದೇವನೂರರ ಹೊಸ ಕೃತಿಯ 350 ಪ್ರತಿಗಳು ಮಾತ್ರ ಸಿಕ್ಕಿದೆ. ಇನ್ನೂ ಸಾವಿರ ಪ್ರತಿಗಳಿಗೆ ಬೇಡಿಕೆ ಇದೆ ಎಂದು ನವ ಕರ್ನಾಟಕ ಪ್ರಕಾಶನದ ರಮೇಶ ಉಡುಪ ಅವರು ಹೇಳಿದರು.

ಡೋಲೊ– 650 ತಯಾರಕರ ಮೇಲೆ ಐ.ಟಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೋಲೊ–650 ಮಾತ್ರೆಗಳ ತಯಾರಕರಾಗಿರುವ ಮೈಕ್ರೋ ಲ್ಯಾಬ್ಸ್ ಕಂಪನಿಯ ಕಚೇರಿಗಳ ಮೇಲೆ ಬುಧವಾರ ದಾಳಿಮಾಡಿರುವ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ತೆರಿಗೆ ವಂಚನೆ ಆರೋಪಕ್ಕೆ ಸಂಬಂಧಿಸಿದಂತೆ ಶೋಧ ನಡೆಸಿದ್ದಾರೆ.

ನಗರದ ಮಾಧವನಗರದಲ್ಲಿರುವ ಮೈಕ್ರೋ ಲ್ಯಾಬ್ಸ್ ಕಂಪನಿಯ ಪ್ರಧಾನ ಕಚೇರಿ, ಕಂಪನಿಯ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ದಿಲೀಪ್ ಸುರಾನ, ನಿರ್ದೇಶಕ ಆನಂದ್ ಸುರಾನ ಮನೆಗಳ ಮೇಲೆ ದಾಳಿ ನಡೆದಿದೆ. ದೆಹಲಿ, ಸಿಕ್ಕಿಂ, ಪಂಜಾಬ್, ತಮಿಳುನಾಡು, ಗೋವಾ ರಾಜ್ಯಗಳಲ್ಲೂ ದಾಳಿ ನಡೆದಿದ್ದು, ಕಂಪನಿಗೆ ಸೇರಿದ 40 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಸಾಂಕ್ರಾಮಿಕದಿಂದಾಗಿ ಡೋಲೊ–650 ಮಾತ್ರೆಗೆ ತೀವ್ರ ಬೇಡಿಕೆ ಸೃಷ್ಟಿಯಾಗಿತ್ತು. 2020–21ರಲ್ಲಿ 350 ಕೋಟಿ ಮಾತ್ರೆಗಳನ್ನು ಮಾರಾಟ ಮಾಡಿರುವುದಾಗಿ ಪ್ರಕಟಿಸಿದ್ದ ಕಂಪನಿ, ₹ 400 ಕೋಟಿ ಆದಾಯ ಲಭಿಸಿರುವುದಾಗಿ ಹೇಳಿತ್ತು. ನಂತರವೂ ಡೋಲೊ–650 ಮಾತ್ರೆಗಳಿಗೆ ಹೆಚ್ಚು ಬೇಡಿಕೆ ಇತ್ತು. ವಹಿವಾಟು ಹೆಚ್ಚಿರುವ ಅವಧಿಯಲ್ಲಿ ತೆರಿಗೆ ವಂಚನೆ ನಡೆಸಿರುವ ಅನುಮಾನದ ಮೇಲೆ ಶೋಧ ನಡೆಸಲಾಗಿದೆ.

ಆದಾಯ ತೆರಿಗೆ ಇಲಾಖೆಯ 200ಕ್ಕೂ ಹೆಚ್ಚು ಅಧಿಕಾರಿಗಳು 40 ತಂಡಗಳಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ: ಭ್ರಷ್ಟಾಚಾರ ನಿಗ್ರಹ ದಳ ಲೆಕ್ಕಾಚಾರ ಶುರು

ಜಮೀರ್ ಬಳಿ ₹87 ಕೋಟಿ ಅಕ್ರಮ ಆಸ್ತಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಶಾಸಕ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್ ಅಧಿಕೃತ ಆದಾಯಕ್ಕೆ ಹೋಲಿಸಿದರೆ ₹ 87 ಕೋಟಿ ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂದು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ, ದಾಖಲಿಸಿರುವ ಎಫ್ಐಆರ್‌ನಲ್ಲಿ ಆರೋಪಿಸಲಾಗಿದೆ.

ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ವರದಿ ಆಧಾರದಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಜಮೀರ್ ವಿರುದ್ಧ ಎಫ್ಐಆರ್ ದಾಖಲಿಸಿದ್ದು, ಮಂಗಳವಾರ ಐದು ಸ್ಥಳಗಳಲ್ಲಿ ಶೋಧ ನಡೆಸಲಾಗಿತ್ತು. 2016ರಿಂದ ಈವರೆಗೆ ಶಾಸಕರ ಕುಟುಂಬದ ಸಂಪಾದನೆ, ವೆಚ್ಚ ಮತ್ತು ಈಗ ಹೊಂದಿರುವ ಆಸ್ತಿಯ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

'ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಬಳಿ ಇರುವ ಬೃಹತ್ ಬಂಗಲೆ, ಸದಾಶಿವನಗರದ ಅತಿಥಿಗೃಹ, ಸಿಲ್ವರ್ ಓಕ್ ಅಪಾರ್ಟ್‌ಮೆಂಟ್‌ನಲ್ಲಿರುವ ಫ್ಲ್ಯಾಟ್ ಸೇರಿದಂತೆ ನಾಲ್ಕು ಸ್ಥಿರಾಸ್ತಿಗಳು ಮಾತ್ರ ಶೋಧ ಕಾರ್ಯಾಚರಣೆ ವೇಳೆ ಪತ್ತೆಯಾಗಿವೆ. ಅವುಗಳ ಮೌಲ್ಯಮಾಪನ ಮಾಡಬೇಕಿದೆ. ಅಧಿಕೃತ ಆದಾಯಕ್ಕೆ ಹೋಲಿಸಿದರೆ ಜಮೀರ್ ಬಳಿ ಶೇಕಡ 2031ರಷ್ಟು ಅಕ್ರಮ ಆಸ್ತಿ ಇರುವ ಮಾಹಿತಿ ಪ್ರಾಥಮಿಕ ತನಿಖೆಯಲ್ಲಿ ಲಭ್ಯವಾಗಿದೆ' ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಜಮೀರ್ ಅಹಮ್ಮದ್ ಒಡೆತನದ ನ್ಯಾಷನಲ್ ಟ್ರಾವೆಲ್ಸ್ 16 ವರ್ಷಗಳಿಂದ ಈಚೆಗೆ ನಡೆಸಿರುವ ವಹಿವಾಟಿನ ಬಗ್ಗೆಯೂ ತನಿಖಾ ತಂಡ ಮಾಹಿತಿ ಸಂಗ್ರಹಿಸುತ್ತಿದೆ. ಶೋಧ ಕಾರ್ಯಾಚರಣೆ ವೇಳೆ ಲಭ್ಯವಾಗಿರುವ ದಾಖಲೆಗಳು, ಸಂಗ್ರಹಿಸಿದ ಮಾಹಿತಿ ಕುರಿತು ತನಿಖಾ ತಂಡವು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಬುಧವಾರ ಪ್ರಾಥಮಿಕ ವರದಿ ಸಲ್ಲಿಸಿದೆ.

ದಾಖಲೆ ಸಲ್ಲಿಸಲು ಸೂಚನೆ: 'ತಮ್ಮ ಬಳಿ ಇರುವ ಎಲ್ಲ ಆಸ್ತಿಗಳನ್ನೂ ಅಧಿಕೃತವಾಗಿ ಘೋಷಿಸಿಕೊಂಡಿದ್ದು, ಸಂಪೂರ್ಣ ಆದಾಯಕ್ಕೆ ತೆರಿಗೆ ಪಾವತಿಸಲಾಗಿದೆ ಎಂದು ಜಮೀರ್ ತಿಳಿಸಿದ್ದಾರೆ. ಈ ಕುರಿತು ಅವರ ಬಳಿ ಇರುವ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ದಾಖಲೆ ಪರಿಶೀಲನೆ ಬಳಿಕ ತನಿಖೆ ಮುಂದುವರಿಯಲಿದೆ' ಎಂದು ಎಸಿಬಿ ಮೂಲಗಳು ಹೇಳಿವೆ.

ಇನ್ನೂ ಆಸ್ತಿ ವಿವರ ಸಲ್ಲಿಸದ 163 ಶಾಸಕರು

ಬೆಂಗಳೂರು: ಹನ್ನೊಂದು ಸಚಿವರೂ ಸೇರಿದಂತೆ 163 ಶಾಸಕರು ಲೋಕಾಯುಕ್ತರಿಗೆ ಕಳೆದ ಆರ್ಥಿಕ ವರ್ಷದ ಆಸ್ತಿ ಮತ್ತು ಬಾಧ್ಯತೆಯ ವಿವರಗಳ ಪ್ರಮಾಣಪತ್ರವನ್ನು ಈವರೆಗೂ ಸಲ್ಲಿಸಿಲ್ಲ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಪ್ರಕಾರ, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಎಲ್ಲ ಸದಸ್ಯರು ಜೂನ್ 30ರೊಳಗೆ ತಮ್ಮ ಆಸ್ತಿ ಹಾಗೂ ಬಾಧ್ಯತೆಯ ವಿವರ ಸಲ್ಲಿಸುವುದು ಕಡ್ಡಾಯ. ವಿಧಾನಸಭೆಯ 127 ಸದಸ್ಯರು ಮತ್ತು ವಿಧಾನ ಪರಿಷತ್‌ನ 52 ಸದಸ್ಯರು ಜೂನ್ 30ರವರೆಗೂ ಈ ಕುರಿತ ಪ್ರಮಾಣಪತ್ರವನ್ನು ಲೋಕಾಯುಕ್ತರಿಗೆ ಸಲ್ಲಿಸಿರಲಿಲ್ಲ.

ಗಡುವು ಮುಗಿದ ಬಳಿಕ 16 ಮಂದಿ ಪ್ರಮಾಣಪತ್ರ ಸಲ್ಲಿಸಿದ್ದಾರೆ. ವಿಧಾನಸಭೆಯ 114 ಸದಸ್ಯರು ಮತ್ತು ವಿಧಾನ ಪರಿಷತ್‌ನ 49 ಸದಸ್ಯರು ಲೋಕಾಯುಕ್ತಕ್ಕೆ ಇನ್ನೂ ವಿವರ ಒದಗಿಸಿಲ್ಲ.

'ನೈಜ ಹೋರಾಟಗಾರರ ವೇದಿಕೆ'ಯ ಎಚ್.ಎಂ. ವೆಂಕಟೇಶ್ ಅವರಿಗೆ ಲೋಕಾಯುಕ್ತವು ಮಾಹಿತಿ ಹಕ್ಕು ಕಾಯ್ದೆಯಡಿ ನೀಡಿರುವ ಮಾಹಿತಿಯಲ್ಲಿ ಈ ವಿವರಗಳನ್ನು ಬಹಿರಂಗಪಡಿಸಿದೆ. ವಿಧಾನ ಪರಿಷತ್ ಸದಸ್ಯರಾದ ಬಿ.ಜಿ. ಪಾಟೀಲ, ಎನ್. ರವಿಕುಮಾರ್ ಮತ್ತು ಶರಣಗೌಡ ಪಾಟೀಲ ಬಯ್ಯಾಪುರ ಗಡುವು ಮುಗಿದ ಮರುದಿನ (ಜುಲೈ 1) ಪ್ರಮಾಣಪತ್ರ ಸಲ್ಲಿಸಿದ್ದಾರೆ. ಸಚಿವ ಬಿ.ಸಿ. ನಾಗೇಶ್ ಸೇರಿದಂತೆ ವಿಧಾನಸಭೆಯ 13 ಸದಸ್ಯರು ಜುಲೈ 1ರಿಂದ 5ರೊಳಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂಬ ಮಾಹಿತಿ ಅದರಲ್ಲಿದೆ. ಸಚಿವರಾದ ಆರಗ ಜ್ಞಾನೇಂದ್ರ, ಜೆ.ಸಿ. ಮಾಧುಸ್ವಾಮಿ, ಹಾಲಪ್ಪ ಆಚಾರ್, ಬಿ.ಸಿ. ಪಾಟೀಲ, ಬಿ. ಶ್ರೀರಾಮುಲು, ಮುನಿರತ್ನ, ಕೆ. ಗೋಪಾಲಯ್ಯ, ಎಸ್. ಅಂಗಾರ, ಕೆ.ಸಿ. ನಾರಾಯಣ ಗೌಡ, ಎಸ್.ಟಿ. ಸೋಮಶೇಖರ್, ಎಂ.ಟಿ.ಬಿ. ನಾಗರಾಜ್ ಈವರೆಗೂ ಆಸ್ತಿ ಮತ್ತು ಬಾಧ್ಯತೆಯ ವಿವರಗಳುಳ್ಳ ಪ್ರಮಾಣಪತ್ರ ಸಲ್ಲಿಸಿಲ್ಲ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕೂಡ ಈವರೆಗೂ ಆಸ್ತಿ ವಿವರಗಳ ಮಾಹಿತಿಯನ್ನು ಲೋಕಾಯುಕ್ತಕ್ಕೆ ನೀಡಿಲ್ಲ.

'ರಾಜ್ಯದಲ್ಲಿ ಲೋಕಾಯುಕ್ತ ಕಾಯ್ದೆಯನ್ನು ರೂಪಿಸಿ, ಜಾರಿಗೆ ತಂದ ಚುನಾಯಿತ ಪ್ರತಿನಿಧಿಗಳೇ ಅದನ್ನು ಉಲ್ಲಂಘಿಸುತ್ತಿದ್ದಾರೆ. ವಿಧಾನಸೌಧದಲ್ಲಿ ಕುಳಿತು ಕಾನೂನು ಪಾಲಿಸುವಂತೆ ನಾಗರಿಕರಿಗೆ ಹೇಳುವ ನೈತಿಕತೆಯನ್ನು ಕಳೆದುಕೊಂಡಿದ್ದಾರೆ' ಎಂದು ವೆಂಕಟೇಶ್ ಪ್ರತಿಕ್ರಿಯಿಸಿದ್ದಾರೆ.

3,668 ಆಸ್ತಿಗಳ ನಗದೀಕರಣಕ್ಕೆ ರಾಜ್ಯ ಪ್ರಸ್ತಾವ

ಸರ್ಕಾರಿ ಜಮೀನು ಖಾಸಗಿಯವರಿಗೆ ಗುತ್ತಿಗೆ: 4 ವರ್ಷದಲ್ಲಿ 6 ಲಕ್ಷ ಕೋಟಿ ಸಂಪನ್ಮೂಲ ಸಂಗ್ರಹಕ್ಕೆ ರಾಜ್ಯದ ಒಲವು

• ಭರತ್ ಜೋಶಿ

ಬೆಂಗಳೂರು: ಕೇಂದ್ರ ಸರ್ಕಾರದ ರಾಷ್ಟ್ರೀಯ ನಗದೀಕರಣ ಯೋಜನೆ (ಎನ್ಎಂಪಿ) ಭಾಗವಾಗಿ ಸುಮಾರು 3,668ಕ್ಕೂ ಹೆಚ್ಚು ಸರ್ಕಾರಿ ಜಮೀನುಗಳು ಮತ್ತು ಇತರ ಆಸ್ತಿಗಳನ್ನು 'ನಗದೀಕರಣ' ಮಾಡಿ, ಸಂಪನ್ಮೂಲ ಸಂಗ್ರಹಿಸುವತ್ತ ರಾಜ್ಯ ಸರ್ಕಾರ ಮುಂದಡಿ ಇಟ್ಟಿದೆ.

ಕೃಷಿ ಹಾಗೂ ಪ್ರವಾಸೋದ್ಯಮ ಇಲಾಖೆಗಳು, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್ಐಎಲ್) ಮತ್ತು ಇತರ ಇಲಾಖೆಗಳು ಹೊಂದಿರುವ ಆಸ್ತಿಗಳನ್ನು ನಗದೀಕರಣ ವ್ಯಾಪ್ತಿಗೆ ತರುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಮೂಲಗಳು ತಿಳಿಸಿವೆ.

ಕಳೆದ ವರ್ಷ ಎನ್ಎಂಪಿ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಈ ಯೋಜನೆ ಅಡಿಯಲ್ಲಿ ಸರ್ಕಾರದ ಆಸ್ತಿಗಳನ್ನು ಖಾಸಗಿ ವಲಯಕ್ಕೆ ಗುತ್ತಿಗೆ ನೀಡುವ ಮೂಲಕ ನಾಲ್ಕು ವರ್ಷಗಳ ಅವಧಿಯಲ್ಲಿ ₹6 ಲಕ್ಷ ಕೋಟಿ ಸಂಪನ್ಮೂಲ ಸಂಗ್ರಹಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಈ ಮೊತ್ತವನ್ನು ಪ್ರಸ್ತುತ ಕೈಗೊಂಡಿರುವ ವಿವಿಧ ಯೋಜನೆಗಳಿಗೆ ಬಳಸಲು ಉದ್ದೇಶಿಸಲಾಗಿದೆ. ಅದೇ ಹಾದಿಯನ್ನು ರಾಜ್ಯದಲ್ಲೂ ಅಧಿಕಾರ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರ ಅನುಸರಿಸಲು ಮುಂದಾಗಿದೆ.

'ನಗದೀಕರಣ' ಯೋಜನೆ ವ್ಯಾಪ್ತಿಗೆ ತರಬಹುದಾದ ಜಮೀನುಗಳು, ಕಟ್ಟಡಗಳು ಹಾಗೂ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಕೈಗೊಂಡಿರುವ ಯೋಜನೆಗಳ ವಿವರಗಳನ್ನು ಸಲ್ಲಿಸುವಂತೆ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯು (ಐಡಿಡಿ) ಪ್ರಶ್ನಾವಳಿಗಳ ಸಹಿತ ಸುತ್ತೋಲೆಯೊಂದನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ ಕಳುಹಿಸಿದೆ.

12 ಇಲಾಖೆಗಳು ಈವರೆಗೆ ಅಂತಹ 3,668 ಜಮೀನುಗಳ ವಿವರ ಸಲ್ಲಿಸಿವೆ. ಏಳು ಕಡೆಗಳಲ್ಲಿ ಜಮೀನುಗಳನ್ನು ಹೊಂದಿರುವ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (ಕೆಪಿಪಿಇಸಿ) ನಗದೀಕರಣದ ಪ್ರಸ್ತಾವ ಮುಂದಿಟ್ಟಿದೆ.

ನೀತಿ ಆಯೋಗದ ಮಾರ್ಗದರ್ಶನ

ನೀತಿ ಆಯೋಗದ ಅಧಿಕಾರಿಗಳು, ಇತ್ತೀಚೆಗೆ ನಡೆದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ 'ಆಸ್ತಿ ನಗದೀಕರಣ' ಕುರಿತು ಮಾರ್ಗದರ್ಶನ ನೀಡಿದ್ದಾರೆ. ರಾಜ್ಯ ಹೆದ್ದಾರಿಗಳು, ನಗರ ಬಸ್ ನಿಲ್ದಾಣಗಳು, ಕ್ರೀಡಾ ಸಂಕೀರ್ಣಗಳು, ಸಣ್ಣ ಬಂದರುಗಳು, ವಿಮಾನ ನಿಲ್ದಾಣಗಳು ಸೇರಿದಂತೆ ಕರ್ನಾಟಕದಲ್ಲಿ ಪ್ರಮುಖ ಆಸ್ತಿಗಳನ್ನು ನಗದೀಕರಣ ಯೋಜನೆ ವ್ಯಾಪ್ತಿಗೆ ಒಳಪಡಿಸಲು ಗುರುತಿಸುವಂತೆ ಸೂಚಿಸಿದ್ದರು.

ಆಸ್ತಿಗಳ ನಗದೀಕರಣದ ಸಂದರ್ಭದಲ್ಲಿ ಈ ಕೆಳಗಿನ ಮಾದರಿಯನ್ನು ಅನುಸರಿಸುವಂತೆ ಸೂಚಿಸಿದ್ದರು.

- ಕಾರ್ಯಾಚರಣೆ, ನಿರ್ವಹಣೆ, ವರ್ಗಾವಣೆ (ಒಎಂಟಿ)
- ಟೋಲ್ ಕಾರ್ಯಾಚರಣೆ ವರ್ಗಾವಣೆ (ಟಿಒಟಿ)
- ಕಾರ್ಯಾಚರಣೆ, ನಿರ್ವಹಣೆ ಮತ್ತು ಅಭಿವೃದ್ಧಿ (ಒಎಂಡಿ)
- ಪುನರ್ವಸತಿ ಕಾರ್ಯಾಚರಣೆ, ನಿರ್ವಹಣೆ ಮತ್ತು ವರ್ಗಾವಣೆ (ಆರ್‌ಒಎಂಟಿ)

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್ಎಸ್ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿದೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1 ಸಾವಿರಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು 'Deccan Herald-Prajavani Relief Trust', Canara Bank, Cantonment Branch, A/c no. 0404101200385, IFSC code: CNRB0000404, MICR Code: 560015009 ಇಲ್ಲಿಗೆ ಕಳುಹಿಸಬೇಕು.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. https://bit.ly/3xFpoz4

ಸೂಚನೆ: ದಾನಿಗಳು ಲಕೋಟೆ ಮೇಲೆ **ಶೈಕ್ಷಣಿಕ ನೆರವಿಗೆ ಕೊಡುಗೆ** ಎಂದು ನಮೂದಿಸಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022 ರ ಸಾಲಿನ ಎಸ್ಎಸ್ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಮೇಕೆದಾಟು: ಸಭೆ ಮತ್ತೆ ಮುಂದೂಡಿಕೆ

ನವದೆಹಲಿ: ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯುಎಂಎ) ಸಭೆಯನ್ನು ಮತ್ತೆ ಮುಂದೂಡಲಾಗಿದೆ.

ಸಭೆ ಬುಧವಾರಕ್ಕೆ ನಿಗದಿಯಾಗಿತ್ತು. ಮೇಕೆದಾಟು ಬಳಿ ಸಮತೋಲನ ಜಲಾಶಯ ನಿರ್ಮಿಸುವ ಉದ್ದೇಶ ಹೊಂದಿರುವ ವಿಸ್ತೃತ ಯೋಜನಾ ವರದಿಯ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಬೇಕಿತ್ತು. ಡಿಪಿಆರ್‌ಗೆ ಅನುಮೋದನೆ ಸಿಗುವ ನಿರೀಕ್ಷೆಯಲ್ಲಿ ಕರ್ನಾಟಕ ಸರ್ಕಾರದ ಅಧಿಕಾರಿಗಳು ಇದ್ದರು.

ಸಚಿವ ಸ್ಥಾನ ತೊರೆದ ನಖ್ವಿ, ಆರ್‌ಸಿಪಿ ಸಿಂಗ್

ನವದೆಹಲಿ (ಪಿಟಿಐ): ಕೇಂದ್ರ ಸಚಿವರಾದ ಮುಕ್ತಾರ್ ಅಬ್ಬಾಸ್ ನಖ್ವಿ ಮತ್ತು ಆರ್‌ಸಿಪಿ ಸಿಂಗ್ ಅವರು ತಮ್ಮ ಸ್ಥಾನಕ್ಕೆ ಬುಧವಾರ ರಾಜೀನಾಮೆ ನೀಡಿದ್ದು, ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಇಬ್ಬರ ರಾಜೀನಾಮೆಯನ್ನೂ ಅಂಗೀಕರಿಸಿದ್ದಾರೆ.

ನಖ್ವಿ ನಿಭಾಯಿಸುತ್ತಿದ್ದ ಅಲ್ಪಸಂಖ್ಯಾತ ವ್ಯವಹಾರಗಳ ಖಾತೆಯನ್ನು ಸ್ಮೃತಿ ಇರಾನಿ ಹಾಗೂ ಸಿಂಗ್ ಅವರು ನಿಭಾಯಿಸುತ್ತಿದ್ದ ಉಕ್ಕು ಖಾತೆಯನ್ನು ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

'ನಖ್ವಿ ಹಾಗೂ ಸಿಂಗ್ ಅವರ ರಾಜ್ಯಸಭಾ ಸದಸ್ಯತ್ವದ ಅವಧಿಯು ಗುರುವಾರ ಮುಕ್ತಾಯವಾಗಲಿದೆ. ಹೀಗಾಗಿ ಇಬ್ಬರೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬುಧವಾರ ರಾಜೀನಾಮೆ ಪತ್ರ ಸಲ್ಲಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಸಿಂಗ್ ಅವರು ತಮ್ಮ ಜನ್ಮದಿನದಂದೇ ಸ್ಥಾನ ತೊರೆದಿದ್ದಾರೆ. ಬುಧವಾರ ಬೆಳಿಗ್ಗೆ ಅವರಿಗೆ ಮೋದಿ ಜನ್ಮದಿನದ ಶುಭಾಶಯ ಕೋರಿದ್ದರು.

ನಖ್ವಿ ರಾಜ್ಯಸಭೆಯ ಉಪನಾಯಕರೂ ಆಗಿದ್ದರು. ಜೆಡಿಯು ಪಕ್ಷದ ಕೋಟಾದಡಿ ಸಿಂಗ್‌ಗೆ ಸಚಿವ ಸ್ಥಾನ ಲಭಿಸಿತ್ತು.

ಬಿಜೆಪಿಯಲ್ಲಿ ಮುಸ್ಲಿಂ ಸಂಸದರಿಲ್ಲ: ನಖ್ವಿ ಅವರ ರಾಜ್ಯಸಭಾ ಸದಸ್ಯತ್ವದ ಅವಧಿ ಕೊನೆಯಾಗುತ್ತಿರುವುದರಿಂದ ಕೇಂದ್ರ ಸಂಪುಟದಲ್ಲಿ ಸದ್ಯ ಮುಸ್ಲಿಂ ಸಮುದಾಯದ ಸಚಿವರು ಇಲ್ಲದಂತಾಗಿದೆ. ಬಿಜೆಪಿಯಲ್ಲೂ ಮುಸ್ಲಿಂ ಸಮುದಾಯದ ಸಂಸದರು ಇಲ್ಲದಾಗಿದೆ.

ಇದಕ್ಕೂ ಮುನ್ನ ಎಂ.ಜೆ.ಅಕ್ಬರ್ ಹಾಗೂ ಸೈಯದ್ ಜಾಫರ್ ಇಸ್ಲಾಂ ಅವರ ರಾಜ್ಯಸಭಾ ಸದಸ್ಯತ್ವದ ಅವಧಿ ಮುಕ್ತಾಯವಾಗಿತ್ತು. ಇವರನ್ನು ಮತ್ತೊಂದು ಅವಧಿಗೆ ಸದಸ್ಯರನ್ನಾಗಿ ಮುಂದುವರಿಸಲು ಬಿಜೆಪಿ ನಿರಾಸಕ್ತಿ ತೋರಿತ್ತು.

ಬಿಜೆಪಿಯು ಮುಸ್ಲಿಂ ಸಮುದಾಯದವರಿಗೆ ಸೂಕ್ತ ಪ್ರಾತಿನಿಧ್ಯ ನೀಡುತ್ತಿಲ್ಲ ಎಂದು ವಿರೋಧ ಪಕ್ಷಗಳು ಟೀಕಿಸಿವೆ.

ಬಿಜೆಪಿಯು ನಖ್ವಿ ಅವರನ್ನು ಉಪರಾಷ್ಟ್ರಪತಿ ಚುನಾವಣೆಗೆ ಪಕ್ಷದ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲಿದೆ ಅಥವಾ ಪಕ್ಷದಲ್ಲಿ ಅವರಿಗೆ ಆಯಾ ಕಟ್ಟಿನ ಹುದ್ದೆ ನೀಡಲಿದೆ ಎಂದು ಹೇಳಲಾಗಿದೆ.

ಸಚಿವ ಚೆರಿಯನ್ ರಾಜೀನಾಮೆ



ಸಜಿ ಚೆರಿಯನ್

ತಿರುವನಂತಪುರ (ಪಿಟಿಐ): ಸಂವಿಧಾನದ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದಕ್ಕೆ ಪ್ರತಿಪಕ್ಷಗಳು ಸೇರಿದಂತೆ ವಿವಿಧ ವಲಯಗಳಿಂದ ತೀವ್ರ ಟೀಕೆಗೊಳಗಾಗಿದ್ದ ಕೇರಳದ ಮೀನುಗಾರಿಕೆ, ಯುವಜನ ಮತ್ತು ಸಂಸ್ಕೃತಿ ಸಚಿವ ಸಜಿ ಚೆರಿಯನ್ ಬುಧವಾರ ರಾಜೀನಾಮೆ ಘೋಷಿಸಿದ್ದಾರೆ.

ಮುಖ್ಯಮಂತ್ರಿಗಳ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿಪಿಎಂ ಹಿರಿಯ ನಾಯಕರೂ ಆಗಿರುವ ಚೆರಿಯನ್, 'ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದೇನೆ' ಎಂದು ತಿಳಿಸಿದ್ದಾರೆ.

ವಿರೋಧಪಕ್ಷಗಳು ಚೆರಿಯನ್ ರಾಜೀನಾಮೆಗೆ ಒತ್ತಡ ಹೇರಿದ್ದವು. 'ರಾಜೀನಾಮೆ ಸಲ್ಲಿಸುವುದು ನನ್ನ ಸ್ವತಂತ್ರ ನಿರ್ಧಾರವಾಗಿದೆ' ಎಂದು ಚೆರಿಯನ್ ಸ್ಪಷ್ಟಪಡಿಸಿದ್ದಾರೆ.

ವಿಜಯನ್ ನೇತೃತ್ವದ ಎರಡನೇ ಎಲ್‌ಡಿಎಫ್ ಸರ್ಕಾರದಲ್ಲಿ ರಾಜೀನಾಮೆ ನೀಡಿದ ಮೊದಲ ಸಚಿವ ಚೆರಿಯನ್ ಆಗಿದ್ದಾರೆ.

'ಸಂವಿಧಾನವನ್ನು ಅವಮಾನಿಸುವ ಯಾವುದೇ ಉದ್ದೇಶ ನನಗಿರಲಿಲ್ಲ. ಅದರ ಬಗ್ಗೆ ನನಗೆ ಅತ್ಯಂತ ಗೌರವವಿದೆ. ನನ್ನ ಹೇಳಿಕೆಯನ್ನು ಸುದ್ದಿ ವಾಹಿನಿಗಳಲ್ಲಿ ತಪ್ಪಾಗಿ ಪ್ರಸಾರ ಮಾಡಲಾಯಿತು. ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸುವ ಹುನ್ನಾರ ಇದರಲ್ಲಿದೆ ಎಂದು ನಾನು ನಂಬಿದ್ದೇನೆ. ಸಂವಿಧಾನದ ಸಾರ್ವಭೌಮತ್ವವನ್ನು ಕಾಪಾಡುವಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಹಲವು ಬಾರಿ ವಿಫಲವಾಗಿವೆ' ಎಂದು ಚೆರಿಯನ್ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದ್ದಾರೆ.

ಪತ್ತನಂತಿಟ್ಟ ಜಿಲ್ಲೆಯ ಮಲ್ಲಪಳ್ಳಿ ಎಂಬಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಚೆರಿಯನ್, 'ಅದ್ಭುತವಾಗಿ ರಚಿಸಲಾದ ಸಂವಿಧಾನವನ್ನು ಭಾರತ ಹೊಂದಿದೆ ಎಂದು ನಾವು ಹೇಳುತ್ತೇವೆ. ಆದರೆ, ನನ್ನ ಪ್ರಕಾರ, ಅದ್ಭುತವಾದ ಈ ಸಂವಿಧಾನವು ದೇಶದ ಬಹು ಜನರನ್ನು ಲೂಟಿ ಮಾಡಲು ನೆರವಾಗುವಂತಿದೆ' ಎಂದು ಹೇಳಿದ್ದರು.

ಅಫ್ಗಾನಿಸ್ತಾನದ ಆಧ್ಯಾತ್ಮಿಕ ಗುರು ಹತ್ಯೆ: ಶಂಕಿತನ ಬಂಧನ

ಮುಂಬೈ (ಪಿಟಿಐ): ಅಫ್ಗಾನಿಸ್ತಾನದ ಆಧ್ಯಾತ್ಮಿಕ ಗುರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಸಿಕ್ ಪೊಲೀಸರು ಶಂಕಿತ ಆರೋಪಿಯನ್ನು ಬಂಧಿಸಿದ್ದಾರೆ.

ಯೆಯೋಲಾ ಪಟ್ಟಣದಲ್ಲಿ ಮಂಗಳವಾರ ಖ್ವಾಜಾ ಅಹ್ಮದ್ ಜರೀಫ್ ಚಿಸ್ತಿಯನ್ನು ನಾಲ್ವರು ಅಪರಿಚಿತರು ಗುಂಡಿಕ್ಕಿ ಹತ್ಯೆ ಮಾಡಿದ್ದರು.

ಪ್ರಾಥಮಿಕ ಮಾಹಿತಿ ಪ್ರಕಾರ, 'ಆಸ್ತಿ ವಿವಾದದಲ್ಲಿ ಅಥವಾ ಹಣಕಾಸು ವಿವಾದಕ್ಕೆ ಕೊಲೆ ನಡೆದಿದೆ. ಚಿಸ್ತಿ ಅವರು 'ಸೂಫಿ ಬಾಬ' ಎಂದೇ ಹೆಸರುವಾಸಿಯಾಗಿದ್ದಾರೆ. ಎರಡು ವರ್ಷಗಳ ಹಿಂದೆ ಪಾಕಿಸ್ತಾನದಿಂದ ಭಾರತಕ್ಕೆ ಬಂದಿದ್ದರು, ಕೇಂದ್ರ ಸರ್ಕಾರ ಅವರಿಗೆ ನಿರಾಶ್ರಿತ ಪಾಸ್ ನೀಡಿತ್ತು. ಎಲ್ಲ ಆಯಾಮಗಳಿಂದಲೂ ಪ್ರಕರಣದ ತನಿಖೆ ಮಾಡಲಾಗುತ್ತಿದೆ' ಎಂದು ನಾಸಿಕ್ ಗ್ರಾಮಾಂತರ ಪೊಲೀಸರು ತಿಳಿಸಿದ್ದಾರೆ.

'ಪ್ರಕರಣದಲ್ಲಿ ಮೂವರು ಪ್ರಮುಖ ಆರೋಪಿಗಳಿದ್ದು, ಮತ್ತೊಬ್ಬ ಪಾತ್ರದ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

ಜ. 28ರಿಂದ ಫೆ. 26ರ ವರೆಗೆ ದೆಹಲಿ ಶಾಪಿಂಗ್ ಉತ್ಸವ

ನವದೆಹಲಿ (ಪಿಟಿಐ): 'ಮುಂದಿನ ವರ್ಷ ಜನವರಿ 28 ರಿಂದ ಫೆಬ್ರುವರಿ 26 ರವರೆಗೆ ದೆಹಲಿಯಲ್ಲಿ ಶಾಪಿಂಗ್ ಉತ್ಸವವನ್ನು ಆಯೋಜಿಸಲಿದ್ದು, ಇದು ದೇಶದ ಅತಿದೊಡ್ಡ ಕಾರ್ಯಕ್ರಮವಾಗಲಿದೆ' ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬುಧವಾರ ತಿಳಿಸಿದ್ದಾರೆ.

'ಉತ್ಸವದ ದೆಹಲಿಯ ಸಂಸ್ಕೃತಿ, ಸ್ಥಳೀಯ ಆಹಾರ ಸುತ್ತ ಕೇಂದ್ರೀಕೃತವಾಗಿರಲಿದ್ದು, ದೇಶ ಹಾಗೂ ವಿದೇಶದಿಂದ ಅತಿಥಿಗಳು ಬರಲಿದ್ದಾರೆ. ಹಾಗೆಯೇ ಸಾವಿರಾರು ಉದ್ಯೋಗಗಳನ್ನು ಸೃಷ್ಟಿ ಮಾಡುವುದು ಉತ್ಸವದ ಪ್ರಮುಖ ಅಂಶ. ಉತ್ಸವದ ಸಮಯದಲ್ಲಿ ದೆಹಲಿಗೆ ಭೇಟಿ ನೀಡಲು ಬಯಸುವವರಿಗೆ ವಿಶೇಷ ಪ್ಯಾಕೇಜ್‌ಗಳನ್ನು ಒದಗಿಸಲು ಸರ್ಕಾರವು ಹೋಟೆಲ್‌ಗಳು ಮತ್ತು ವಿಮಾನಯಾನ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸುತ್ತಿದೆ. ಅಲ್ಲದೆ ಪ್ರದರ್ಶನದ ವಸ್ತುಗಳ ಮೇಲೆ ಭಾರಿ ರಿಯಾಯಿತಿಗಳು ಇರುತ್ತವೆ' ಎಂದು ಅವರು ಹೇಳಿದರು.

ಈ ವರ್ಷದ ರೋಜ್‌ಗಾರ್ ಬಜೆಟ್ ಅಡಿಯಲ್ಲಿ ಕೇಜ್ರಿವಾಲ್ ಸರ್ಕಾರವು ₹250 ಕೋಟಿ ವೆಚ್ಚದಲ್ಲಿ ದೆಹಲಿ ಶಾಪಿಂಗ್ ಉತ್ಸವ ನಡೆಸುವುದಾಗಿ ಹೇಳಿತ್ತು.

ಸ್ವಪ್ನಾ ವಜಾಗೊಳಿಸಿದ ಎನ್‌ಜಿಒ

ಪಾಲಕ್ಕಾಡ್ (ಪಿಟಿಐ): ಚಿನ್ನ ಕಳ್ಳಸಾಗಣೆ ಪ್ರಕರಣದ ಪ್ರಮುಖ ಆರೋಪಿ ಸ್ವಪ್ನಾ ಸುರೇಶ್ ಅವರನ್ನು ಆರ್‌ಎಸ್‌ಎಸ್ ಸಂಪರ್ಕ ಹೊಂದಿರುವ ಸ್ವಯಂ ಸೇವಾ ಸಂಸ್ಥೆ ನೌಕರಿಯಿಂದ ವಜಾ ಮಾಡಲಾಗಿದೆ.

ಅವರಿಗೆ ಉದ್ಯೋಗ ನೀಡಿರುವುದಕ್ಕೆ ಕೇರಳ ಸರ್ಕಾರ ಕಿರುಕುಳ ನೀಡುತ್ತಿದೆ ಎಂದು ಸಂಸ್ಥೆ ಆರೋಪಿಸಿದೆ.



❦ ಸುಭಾಷಿತ ❦

ಹಿಂಸಾಚಾರದ ಮೂಲಕ ನೀವು ಒಂದು ಸಮಸ್ಯೆಯನ್ನು ಪರಿಹರಿಸಬಹುದು, ಆದರೆ ಆ ಮೂಲಕ ಇನ್ನೊಂದು ಸಮಸ್ಯೆಗೆ ಬೀಜಗಳನ್ನು ಬಿತ್ತಿರುತ್ತೀರಿ. – **ದಲೈಲಾಮಾ**

ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನಿರ್ಧಾರ ಮುಂದೂಡಿದ್ದು ಸಮಂಜಸವಲ್ಲ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅತ್ಯುನ್ನತ ಸಂಸ್ಥೆಯಾಗಿರುವ ಜಿಎಸ್‌ಟಿ ಮಂಡಳಿಯ ಸಭೆಯು ಕಳೆದ ವಾರ ನಡೆದಿದೆ. ಮಂಡಳಿಯ ಸಭೆಯಲ್ಲಿ ಕೆಲವು ಪ್ರಮುಖ ವಿಚಾರಗಳು ಚರ್ಚೆಗೆ ಬಂದಿದ್ದವು. ಜಿಎಸ್‌ಟಿ ವ್ಯವಸ್ಥೆಯ ಜಾರಿಯಿಂದ ರಾಜ್ಯಗಳಿಗೆ ಆಗಬಹುದಾದ ನಷ್ಟಕ್ಕೆ ಪರಿಹಾರ ನೀಡುವುದನ್ನು ಇನ್ನೂ ಕೆಲವು ವರ್ಷ ಮುಂದುವರಿಸಬೇಕೇ ಎಂಬುದು ಬಹಳ ಪ್ರಮುಖವಾದ ಒಂದು ವಿಚಾರ. ಅಲ್ಲದೆ, ಜಿಎಸ್‌ಟಿ ವಿನಾಯಿತಿ ಪಟ್ಟಿಯಿಂದ ಹೊರಗೆ ಇರುವ ಕೆಲವು ಸೇವೆಗಳು ಹಾಗೂ ಸರಕುಗಳನ್ನು ತೆರಿಗೆ ವ್ಯಾಪ್ತಿಗೆ ತರುವುದು ಇನ್ನೊಂದು ಪ್ರಮುಖ ವಿಚಾರ. ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದು ಐದು ವರ್ಷಗಳು ತುಂಬಿರುವ ಕಾರಣ ಈ ಸಭೆಯು ಬಹಳ ಪ್ರಮುಖವಾಗಿತ್ತು. ಸ್ವತಂತ್ರ ಭಾರತದ ಅತಿದೊಡ್ಡ ತೆರಿಗೆ ಸುಧಾರಣೆ ಎಂದು ಕರೆಸಿಕೊಂಡಿರುವ ಜಿಎಸ್‌ಟಿ, ಜಾರಿಯಾದ ದಿನದಿಂದಲೂ ಟೀಕೆಗಳಿಗೆ ಗುರಿಯಾಗಿದೆ. ಇದನ್ನು ತೀರಾ ಅವಸರದಲ್ಲಿ ಜಾರಿಗೆ ತರಲಾಗಿದೆ ಎಂಬ ಟೀಕೆ ಇದೆ. ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವ ಉದ್ದೇಶ ಹೊಂದಿರುವ ಇದು, ವಾಸ್ತವದಲ್ಲಿ ವ್ಯವಸ್ಥೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ ಎಂಬ ಮಾತುಗಳನ್ನು ಉದ್ಯಮ ವಲಯದ ಕೆಲವರು ಮತ್ತು ಕೆಲವು ಆರ್ಥಿಕ ತಜ್ಞರು ಹಲವು ಬಾರಿ ಹೇಳಿದ್ದಾರೆ. ವ್ಯವಸ್ಥೆಯನ್ನು ಸರಳಗೊಳಿಸುವ ಹಾಗೂ ನಿಯಮಗಳ ಪಾಲನೆ ಸುಲಲಿತ ಆಗುವ ದಿಸೆಯಲ್ಲಿ ಇನ್ನಷ್ಟು ಕೆಲಸಗಳು ಆಗಬೇಕಿವೆ ಎಂಬುದರಲ್ಲಿ ಅನುಮಾನ ಇಲ್ಲ.



ಕೆಲವು ಅತ್ಯಗತ್ಯ ವಸ್ತುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದರ ಅಗತ್ಯ ನಿಜಕ್ಕೂ ಇತ್ತೇ ಎಂಬ ಬಗ್ಗೆ ಜಿಎಸ್‌ಟಿ ಮಂಡಳಿಯು ಪುನಃ ಅವಲೋಕನ ನಡೆಸಬೇಕಾಗಿದೆ

ರಾಜ್ಯಗಳಿಗೆ ಆಗಬಹುದಾದ ವರಮಾನ ನಷ್ಟವನ್ನು ಭರ್ತಿ ಮಾಡಿಕೊಡುವ ವ್ಯವಸ್ಥೆಯು ಇನ್ನೂ ಕೆಲವು ವರ್ಷಗಳವರೆಗೆ ಮುಂದುವರಿಯಬೇಕೇ ಎಂಬ ವಿಚಾರವಾಗಿ ಮಂಡಳಿಯು ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ. ಆಗಸ್ಟ್‌ನಲ್ಲಿ ನಡೆಯಲಿರುವ ಮಂಡಳಿ ಸಭೆಯಲ್ಲಿ ಈ ಬಗ್ಗೆ ಮತ್ತೆ ಚರ್ಚೆ ನಡೆದು ಒಂದು ತೀರ್ಮಾನ ಸಾಧ್ಯವಾಗಬಹುದು ಎಂಬ ನಿರೀಕ್ಷೆ ಇದೆ. ರಾಜ್ಯಗಳಿಗೆ ಪರಿಹಾರ ಕೊಡುವ ವ್ಯವಸ್ಥೆಯು ಜೂನ್ 30ಕ್ಕೆ ಕೊನೆಗೊಂಡಿದೆ. ಈ ದಿನಕ್ಕೆ ಮೊದಲೇ ಅದರ ಮುಂದುವರಿಕೆ ಬಗ್ಗೆ ಸ್ಪಷ್ಟ ತೀರ್ಮಾನವನ್ನು ಮಂಡಳಿಯು ಕೈಗೊಳ್ಳಬೇಕಿತ್ತು. ಯಾವುದೇ ತೀರ್ಮಾನ ಕೈಗೊಳ್ಳದೇ ಇರುವುದು, ಮುಂದೆ ರಾಜ್ಯಗಳಿಗೆ ಜಿಎಸ್‌ಟಿ ನಷ್ಟ ಪರಿಹಾರ ಇರುವುದಿಲ್ಲ ಎಂಬ ಅರ್ಥವನ್ನೂ ಹೊರಡಿಸಬಹುದು. ಪರಿಹಾರ ಕೊಡುವ ವ್ಯವಸ್ಥೆಯನ್ನು ಮುಂದುವರಿಸುವುದು ಬೇಡ ಎನ್ನಲು ಕೇಂದ್ರ ಸರ್ಕಾರಕ್ಕೆ ಹಲವು ಕಾರಣಗಳು ಇವೆ. ಐದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಪರಿಹಾರ ಕೊಡುವ ಉಲ್ಲೇಖ ಜಿಎಸ್‌ಟಿ ಕಾನೂನಿನಲ್ಲಿಯೇ ಇಲ್ಲ ಎಂದು ಕೇಂದ್ರ ವಾದಿಸಬಹುದು. ಆದರೆ, ಕೋವಿಡ್ ಸಾಂಕ್ರಾಮಿಕದಿಂದಾಗಿ ವರಮಾನ ಸಂಗ್ರಹಿಸುವ ತಮ್ಮ ಸಾಮರ್ಥ್ಯಕ್ಕೆ ಪೆಟ್ಟು ಬಿದ್ದಿದೆ, ಹಾಗಾಗಿ ಪರಿಹಾರ ವ್ಯವಸ್ಥೆ ಮುಂದುವರಿಯಬೇಕು ಎಂದು ರಾಜ್ಯಗಳು ಹೇಳುತ್ತಿರುವುದರಲ್ಲಿಯೂ ಸತ್ಯವಿದೆ. ಪರಿಹಾರ ಮುಂದುವರಿಸುವ ಬಗ್ಗೆ ಮಂಡಳಿಯು ಸ್ಪಷ್ಟ ತೀರ್ಮಾನವನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕು. ಇಲ್ಲವಾದರೆ, ರಾಜ್ಯಗಳಿಗೆ ಹಣಕಾಸಿನ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳುವುದಕ್ಕೆ ಅಡ್ಡಿ ಆಗುತ್ತದೆ.

ಇದುವರೆಗೆ ತೆರಿಗೆ ವ್ಯಾಪ್ತಿಯಲ್ಲಿ ಇಲ್ಲದಿದ್ದ ಕೆಲವು ಉತ್ಪನ್ನಗಳಿಗೆ ತೆರಿಗೆ ವಿಧಿಸಲು ಮಂಡಳಿಯು ಶಿಫಾರಸು ಮಾಡಿದೆ. ಈ ಶಿಫಾರಸು ಜಾರಿಗೆ ಬಂದ ನಂತರದಲ್ಲಿ ಪ್ಯಾಕ್ ಮಾಡಲಾಗಿರುವ, ಲೇಬಲ್ ಇರುವ ಮಾಂಸ, ಮೊಸರು, ಹಪ್ಪಳ, ಮಜ್ಜಿಗೆ, ಆಹಾರ ಧಾನ್ಯಗಳು, ಗೋಧಿ ಹಿಟ್ಟು ಮುಂತಾದವು ತೆರಿಗೆ ವ್ಯಾಪ್ತಿಗೆ ಬರಲಿವೆ. ಪ್ಯಾಕ್ ಮಾಡದೆ ಇರುವ ಆಹಾರ ವಸ್ತುಗಳಿಗೆ ವಿನಾಯಿತಿ ಮುಂದುವರಿಯಲಿದೆ. ಹಾಲಿನ ಉತ್ಪನ್ನಗಳು ಸೇರಿದಂತೆ ಹತ್ತುಹಲವು ಆಹಾರ ವಸ್ತುಗಳನ್ನು ತೆರಿಗೆ ವ್ಯಾಪ್ತಿಗೆ ತರುವುದರಿಂದ ವರಮಾನ ಸಂಗ್ರಹವು ಹೆಚ್ಚಳ ಕಾಣಬಹುದು. ಆದರೆ, ಅದರಿಂದಾಗಿ ಮನೆಬಳಕೆ ವಸ್ತುಗಳ ಹಣದುಬ್ಬರ ಪ್ರಮಾಣ ಜಾಸ್ತಿ ಆಗುವ ಸಾಧ್ಯತೆಯೂ ಇದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಈಗಾಗಲೇ ಮಿತಿ ಮೀರಿ ಬೆಳೆದಿದೆ. ಹಣದುಬ್ಬರ ನಿಯಂತ್ರಣಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ಹೆಚ್ಚಳದಂತಹ ಕ್ರಮಗಳನ್ನು ಕೈಗೊಳ್ಳುತ್ತಿದೆ. ವಾಸ್ತವದಲ್ಲಿ, ಜಿಎಸ್‌ಟಿ ವ್ಯವಸ್ಥೆಯ ಮೂಲಕ ಸಂಗ್ರಹ ಆಗುತ್ತಿರುವ ವರಮಾನದ ಮೊತ್ತವು ಈಚಿನ ತಿಂಗಳುಗಳಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಇದೆ. ಇಂತಹ ಸಂದರ್ಭದಲ್ಲಿ ಕೆಲವು ಅತ್ಯಗತ್ಯ ವಸ್ತುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದರ ಅಗತ್ಯ ನಿಜಕ್ಕೂ ಇತ್ತೇ ಎಂಬ ಬಗ್ಗೆ ಮಂಡಳಿಯು ಪುನಃ ಅವಲೋಕನ ನಡೆಸುವ ಅಗತ್ಯವಿದೆ. ತೆರಿಗೆ ವಿನಾಯಿತಿ ಇರುವ ವಸ್ತುಗಳ ಸಂಖ್ಯೆಯನ್ನು ಇನ್ನಷ್ಟು ಕಡಿಮೆ ಮಾಡುವ ಸೂಚನೆಯನ್ನು ಕೇಂದ್ರ ನೀಡಿದೆ. ತಕ್ಷಣಕ್ಕೆ ಇದರ ಅಗತ್ಯವಿದೆಯೇ ಎಂಬುದನ್ನೂ ಮಂಡಳಿಯು ಪರಾಮರ್ಶಿಸಬೇಕು.

ದಿನದ ಟ್ವೀಟ್

ಎಲ್ಲಿ ಅಡಗಿತು ದನಿ?



ಅಡುಗೆ ಅನಿಲ, ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳವನ್ನು ಆಡಳಿತಾರೂಢ ಪಕ್ಷ ಯಾವುದೆಂಬುದನ್ನು ಲೆಕ್ಕಿಸದೆ ಜನಸಾಮಾನ್ಯರು ತೀವ್ರವಾಗಿ ಟೀಕಿಸುತ್ತಿದ್ದ ಆ ದಿನಗಳನ್ನು ನಾನು ಕಳೆದುಕೊಂಡಿದ್ದೇನೆ. ಇತ್ತೀಚಿನ ದರ ಏರಿಕೆಯೊಂದಿಗೆ ಗೃಹೋಪಯೋಗಿ ಅಡುಗೆ ಅನಿಲ ಸಿಲಿಂಡರ್‌ನ ಬೆಲೆ ಪ್ರಸ್ತುತ ₹ 1,053 ಆಗಿದೆ. ದೇಶಕ್ಕೆ ನಿಜಕ್ಕೂ ಅಚ್ಛೇ ದಿನ. #LPGPrice

ರಾಮಚಂದ್ರ ಎಂ. ನಾಗರಿಕ

ಕಿಡಿನುಡಿ



ದುರುದ್ದೇಶಪೂರಿತ, ಉತ್ಪಾದಿತ ವಿವಾದ ನನಗೆ ಹೊಸದಲ್ಲ. ಆದರೂ ಪ್ರತೀ ಹಿಂದೂವಿಗೆ ತಿಳಿದಿರುವಂತೆ, ದೇಶದಾದ್ಯಂತ ನಮ್ಮ ಆರಾಧನಾ ವಿಧಾನಗಳು ಭಿನ್ನವಾಗಿವೆ ಎಂಬುದನ್ನು ಹೇಳಿದ್ದಕ್ಕಾಗಿ ಮಹುವಾ ಮೊಹಿತ್ರಾ ಅವರ ಮೇಲೆ ನಡೆದಿರುವ ದಾಳಿಯಿಂದ ಆಘಾತವಾಗಿದೆ. ಯಾವುದನ್ನು ಭಕ್ತರು ಭೋಗವೆಂದು ಭಾವಿಸಿ ಅರ್ಪಿಸುವರೋ ಅದು ದೇವಿಗಿಂತಲೂ ಅರ್ಪಿಸಿದವರ ಬಗೆಗೆ ನಮಗೆ ಹೆಚ್ಚಿನದನ್ನು ತಿಳಿಸುತ್ತದೆ.

ಶಶಿ ತರೂರ್, ಕಾಂಗ್ರೆಸ್ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 7-7-1997

• ತೆರೆಯದ ಕೆಇಬಿ ಉಗ್ರಾಣ ಕತ್ತಲೆಯಲ್ಲಿ ನಿವಾಸಿಗಳು

ರಾಯಚೂರು, ಜುಲೈ 6 – ಕರ್ನಾಟಕ ವಿದ್ಯುತ್ ಮಂಡಲಿಯ (ಕೆಇಬಿ) ರಾಯಚೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಅನೇಕ ಪ್ರದೇಶಗಳಲ್ಲಿ ಕೆಟ್ಟರುವ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಸರಿಪಡಿಸಲು ಕಳೆದ 40 ದಿನಗಳಿಂದ ಮುಚ್ಚಿರುವ ವಿಭಾಗೀಯ ಉಗ್ರಾಣವು ಅಡ್ಡಿಯಾಗಿದ್ದು, ಅಸಂಖ್ಯಾತ ಜನ ಕತ್ತಲೆಯಲ್ಲಿ ಕಾಲ ಕಳೆಯುವಂತಾಗಿದೆ.

17 ವರ್ಷಕ್ಕಿಂತ ಹೆಚ್ಚು ಕಾಲ ಇಲ್ಲಿನ ವಿಭಾಗೀಯ ಉಗ್ರಾಣದಲ್ಲಿದ್ದ ತಮಗೆ ಜೂನಿಯರ್ ಎಂಜಿನಿಯರ್ ಹುದ್ದೆ ನೀಡಿ ಗಂಗಾವತಿ ವಿಭಾಗಕ್ಕೆ ವರ್ಗ ಮಾಡಿದ ಕೆಇಬಿ ಆದೇಶಕ್ಕೆ ತಡೆಯಾಜ್ಞೆ ತಂದಿರುವ ಉಗ್ರಾಣಿಕ ನರಸಪ್ಪ ಇದುವರೆಗೆ ಬೇರೆಯವರಿಗೆ ಅಧಿಕಾರ (ಚಾರ್ಜ್) ವಹಿಸಿಕೊಟ್ಟಿಲ್ಲ. ಆದರೆ ವರ್ಗಾವಣೆ ಆದೇಶದೊಂದಿಗೆ ಅವರನ್ನು ರಿಲೀವ್ ಮಾಡಿರುವುದರಿಂದ ಉಗ್ರಾಣದ ಚಟುವಟಿಕೆ ಸಂಪೂರ್ಣ ಸ್ಥಗಿತಗೊಂಡಿದೆ.

• ಜನತಾದಳ ಅಧ್ಯಕ್ಷರಾಗಿ ಶರದ್ ಯಾದವ್ ಆಯ್ಕೆ

ನವದೆಹಲಿ, ಜುಲೈ 6 (ಯುಎನ್‌ಐ) ತೀವ್ರ ವಿವಾದಕ್ಕೆ ಗುರಿಯಾಗಿ ಕೊನೆಗೆ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನಡೆದ ಜನತಾದಳದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ, ಶರದ್ ಯಾದವ್ ಅವರು 691 ಮತಗಳನ್ನು ಪಡೆಯುವ ಮೂಲಕ ಭಾರಿ ಬಹುಮತದೊಂದಿಗೆ ತಮ್ಮ ಪ್ರತಿಸ್ಪರ್ಧಿ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರನ್ನು ಸೋಲಿಸಿ ಇಂದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು 758 ಮತಗಳಲ್ಲಿ ಲಾಲೂ ಪ್ರಸಾದ್ ಯಾದವ್ ಅವರಿಗೆ 58 ಮತಗಳು ಮಾತ್ರ ದೊರೆತಿವೆ.

50 ವರ್ಷಗಳ ಹಿಂದೆ

ಶುಕ್ರವಾರ, 7-7-1972

• ಉದ್ಯೋಗದಿಂದ ವಾರ್ಷಿಕ 12,000 ರೂ. ಆದಾಯದವರು ಜಮೀನು ಹೊಂದಲು ಅಸಾಧ್ಯ

ಬೆಂಗಳೂರು, ಜುಲೈ 6 – ಸರ್ಕಾರ ನಿರ್ಧರಿಸಿರುವಂತೆ ಬೇರೆ ಕಾಯಂ ಉದ್ಯೋಗದಿಂದ 12,000 ರೂ. ಗಿಂತ ಹೆಚ್ಚು ವಾರ್ಷಿಕ ವರಮಾನ ಬರುವವರು ವ್ಯವಸಾಯ ಜಮೀನನ್ನು ಹೊಂದಲು ಸಾಧ್ಯವಾಗದು.

ಇಂದು ನಡೆದ ಮಂತ್ರಿಮಂಡಲದ ಸಭೆ ಈ ವಿಧಿಯನ್ನು ಭೂ ಸುಧಾರಣೆಗಳ ವಿಧೇಯಕದಲ್ಲಿ ಅಳವಡಿಸಲು ತೀರ್ಮಾನಿಸಿತು.

ಭೂ ಸುಧಾರಣೆಗಳ ಬಗ್ಗೆ ಕಾಂಗ್ರೆಸ್ ರಚಿಸಿದ್ದ ಸಮಿತಿಯ ಶಿಫಾರಸು ಇದು. ಇದನ್ನು ಮಂತ್ರಿಮಂಡಲ ಅಂಗೀಕರಿಸಿದೆ.

ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಪ್ರತಿಪಾದಿಸಿರುವ 'ಒಂದು ಉದ್ಯೋಗ, ಒಂದು ವೃತ್ತಿ'ಯ ತತ್ವವೂ ಈ ನಿರ್ಧಾರದಲ್ಲಿ ಅಡಗಿದೆ.

ಸ್ವಂತ ವ್ಯವಸಾಯ ಮಾಡುವವರು ಜಮೀನಿನ 10 ಮೈಲಿ ಫಾಸಲೆಯೊಳಗೆ ವಾಸ ಮಾಡಬೇಕು.

ಭಾಷೆಯನ್ನು ಪರಿಣಾಮಕಾರಿಯಾಗಿ ಕಲಿಸುವ ವಿಧಾನಗಳ ಬಗೆಗೆ ನಡೆಯಲಿ ವ್ಯಾಪಕ ಚರ್ಚೆ

ಭಾಷಾ ಕೌಶಲ: ಹಿಂದುಳಿದಿರುವುದೇಕೆ?



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

'ಸರಳತೆಯಿಂದ ಕ್ಲಿಷ್ಟತೆಯೆಡೆಗೆ' ಎನ್ನುವುದು ಶಿಕ್ಷಣ ಶಾಸ್ತ್ರದ ಮೂಲ ತತ್ವ. ಇದನ್ನು ಆಧರಿಸಿದ ಗಾಂಧೀಜಿಯ ಮೂಲ ಶಿಕ್ಷಣದ ಪರಿಕಲ್ಪನೆಯು 'ಓದು-ಬರಹ-ಲೆಕ್ಕ' ಇವುಗಳನ್ನು ಶಿಕ್ಷಣದ ಮೂಲಭೂತ ಅವಶ್ಯಕತೆಯಾಗಿ ಪರಿಗಣಿಸುತ್ತದೆ. ಆನಂತರ ವೃತ್ತಿಶಿಕ್ಷಣಕ್ಕೆ, ಭೂಗೋಳ, ಸಮಾಜ ವಿಜ್ಞಾನ, ಮೂಲ ವಿಜ್ಞಾನಗಳ ಪ್ರಾಥಮಿಕ ಪಾಠಗಳಿಗೆ ಆದ್ಯತೆಯನ್ನು ಕೊಡುತ್ತದೆ.

ವರ್ತಮಾನದ ಶೈಕ್ಷಣಿಕ ಚರ್ಚೆಗಳು ಏನನ್ನು ಕಲಿಸಬೇಕು ಎಂಬುದರ ಕುರಿತಾಗಿ ಇವೆಯೇ ವಿನಾ ಕಲಿಕಾ ಪ್ರಕ್ರಿಯೆ ಹೇಗೆ ನಡೆಯಬೇಕು ಎಂಬುದರ ಕುರಿತಾಗಿ ಇಲ್ಲ. ಏನನ್ನು ಕಲಿಸಬೇಕು ಎನ್ನುವ ಚರ್ಚೆಯು ವಿವಿಧ ಹಿತಾಸಕ್ತಿಯ ತಂಡಗಳ ಆಶಯವನ್ನು ಪಠ್ಯದಲ್ಲಿ ಸೇರ್ಪಡೆಗೊಳಿಸಲು ಒತ್ತಾಯಿಸುತ್ತದೆ. ಆದರೆ ಮಗುವಿನ ದೈಹಿಕ ವಯಸ್ಸು, ಮಾನಸಿಕ ವಯಸ್ಸು, ಬೌದ್ಧಿಕ ಮತ್ತು ಭಾವನಾತ್ಮಕ ಸ್ಥಿತಿ ಹಾಗೂ ಆ ಸ್ಥಿತಿಯಲ್ಲಿ ಯಾವ ವಿದ್ಯಾರ್ಥಿಗಳನ್ನು ಯಾವ ವಿಧಾನದಲ್ಲಿ ಕಲಿಕೆಗೆ ಒಳಗು ಮಾಡಿಕೊಳ್ಳಬೇಕು ಎಂಬ ಯಾವ ಅಂಶವನ್ನೂ ವರ್ತಮಾನದ ಚರ್ಚೆಗಳು ಪರಿಗಣಿಸುತ್ತಿಲ್ಲ.

ಪಠ್ಯ, ಕಲಿಕೆಗೆ ಸಂಬಂಧಿಸಿದಂತೆ ಈಗ ಚರ್ಚೆಗೆ ಒಳಗಾಗುತ್ತಿರುವ ಎಲ್ಲ ವಿಷಯಗಳೂ ಮಗುವಿಗೆ ಬೇಕಾದವುಗಳೇ. ಆದರೆ ಚರ್ಚೆಗಳಲ್ಲಿ 'ಸರಳತೆಯಿಂದ ಕ್ಲಿಷ್ಟತೆಯೆಡೆಗೆ' ಪರಿಕಲ್ಪನೆಯ ಸುಳಿವೇ ಇಲ್ಲ. ಸರಳತೆಯ ಪ್ರಶ್ನೆಯೇ ಇಲ್ಲ. ಕ್ಲಿಷ್ಟ ಪರಿಕಲ್ಪನೆಗಳೇ ತುಂಬಿವೆ. ಯಾವ ಹಂತದಲ್ಲಿ ಯಾವ ಬೌದ್ಧಿಕ ಮಟ್ಟದ ವಿದ್ಯಾರ್ಥಿಗಳು ಅದನ್ನು ಕಲಿಯಬಲ್ಲರು ಎಂಬ ಬಗ್ಗೆ ಚರ್ಚೆಯ ಅಗತ್ಯವಿದೆ. ಪ್ರತಿಯೊಂದು ಮಗುವೂ 'ಅನನ್ಯ'ವಾಗಿರುತ್ತದೆ ಎಂಬ ನೆಲೆಯಲ್ಲಿ ಇದನ್ನು ಅರ್ಥ ಮಾಡಿಕೊಳ್ಳಬೇಕು.

ಇಂತಹ ನೆಲೆಯಲ್ಲಿ ಎಲ್ಲ ಮಕ್ಕಳಿಗೂ ಸಾಮಾನ್ಯವಾಗಿರುವ ಮೂಲಭೂತ ಕೌಶಲಗಳು ಓದು-ಬರಹ– ಸರಳ ಲೆಕ್ಕ. ಈ ಮೂರು ಅಂಶಗಳಲ್ಲಿ ಮಕ್ಕಳು ಪರಿಣತರಾದರೆ ಉಳಿದ ವಿಷಯಗಳ ಕಲಿಕೆಯಲ್ಲಿ ಕೊಂಚ ಏರುಪೇರಾದರೂ ಮಕ್ಕಳೇ ಬೇಕಾದಾಗ ಓದಿಕೊಳ್ಳಬಲ್ಲರು, ಬರೆದುಕೊಳ್ಳಬಲ್ಲರು, ತಾರ್ಕಿಕವಾಗಿ ಚಿಂತಿಸಿ ತೀರ್ಮಾನ ತೆಗೆದುಕೊಳ್ಳಬಲ್ಲರು. ಏಕೆಂದರೆ ಲೆಕ್ಕವು ಬರೀ ಲೆಕ್ಕಾಚಾರವನ್ನಷ್ಟೇ ಅಲ್ಲ, ತಾರ್ಕಿಕ ಚಿಂತನೆಯನ್ನೂ ಅಭಿವೃದ್ಧಿಪಡಿಸುತ್ತದೆ. ಈ ಮೂರಕ್ಕೂ ಮೂಲಭೂತ ಅವಶ್ಯಕತೆ ಭಾಷೆಯಾಗಿದೆ. ಭಾಷೆ; ಅದು ಕನ್ನಡವಾದರೂ ಇರಲಿ, ಇಂಗ್ಲಿಷಾದರೂ ಇರಲಿ. ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿಗಳ ಗುಣಮಟ್ಟ ಹೇಗಿದೆ? ಭಾಷಾ ಬಳಕೆ ಸರಿ ಇಲ್ಲದಿದ್ದರೂ ಪೂರ್ಣ ಅಂಕಗಳನ್ನು ಪಡೆಯಬಹುದಾದ ಸ್ಥಿತಿ ಮತ್ತು ಗಣಿತ, ವಿಜ್ಞಾನ, ಸಮಾಜ ವಿಜ್ಞಾನಗಳೇ ಚರ್ಚೆಯ ಪ್ರಧಾನ ಸಂಗತಿಗಳೂ ಭವಿಷ್ಯದ ಅಡಿಗಲ್ಲೂ ಆಗಿವೆಯೆಂಬ ಸಾಮಾನ್ಯ ಧೋರಣೆಯ ಸಂದರ್ಭದಲ್ಲಿ, ಒಬ್ಬ ಅಧ್ಯಾಪಕನಾಗಿ, ಭಾಷಾ ಕಲಿಕೆಯ ಸ್ಥಿತಿ ಆಶಾದಾಯಕವಾಗಿಲ್ಲ ಎಂಬುದು ಅನುಭವದಿಂದ ನಾನು ಗ್ರಹಿಸಿರುವ ಸಂಗತಿಯಾಗಿದೆ.

ಪ್ರಸ್ತುತ ಭಾಷಾ ಕಲಿಕೆಯಲ್ಲಿ ಇಂಗ್ಲಿಷ್‌ಗೆ ಮಹತ್ವವಿದೆ. ಹಾಗಿರುವಾಗ ಒಂದು ಭಾಷೆಯನ್ನು ಕಲಿಸುವ ವಿಧಾನ ಹೇಗಿರಬೇಕು ಎನ್ನುವುದು ಮುಖ್ಯವಾಗಿದೆ. ಸಮರ್ಪಕ ಭಾಷಾ ಕಲಿಕೆಯು ಐದು ಹಂತಗಳಲ್ಲಿ ನಡೆಯಬೇಕು. ಮೊದಲು ತಾನು ಕಲಿಯುವ ಭಾಷೆಯ ಪದಗಳು ಮಗುವಿನ ಕಿವಿಗೆ ಕೇಳಿಸುತ್ತಾ ಇರಬೇಕು. ಈ ಹಂತದಲ್ಲಿ, ಮಗುವಿನಲ್ಲಿ ಆಲಿಸುವ ಸಾಮರ್ಥ್ಯ ಇದೆಯೇ ಎಂದು ಪರಿಶೀಲಿಸಿ, ಆಲಿಸುವ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಆಗಮಾತ್ರ ಕೇಳಿಸಿದ ಪದಗಳು ಕಲಿಕೆಯ ಪರಿಣಾಮವನ್ನು ಉಂಟು ಮಾಡುತ್ತವೆ.

ಎರಡನೆಯ ಹಂತದಲ್ಲಿ, ಮಗು ತಾನು ಆಲಿಸಿದ ಪದಗಳನ್ನು ಪುನರುಚ್ಚರಿಸಬೇಕು. ಆಗ ಉಚ್ಚಾರ ದೋಷಗಳು ಕಂಡುಬಂದರೆ, ತಿದ್ದಿ ಸರಿಪಡಿಸಬೇಕು. ಉಚ್ಚಾರ ದೋಷ ಸರಿಹೋಗದೇ ಇದ್ದರೆ ಭಾಷೆಯನ್ನು ಮಾತನಾಡಲು ಆತ್ಮ ವಿಶ್ವಾಸದ ಕೊರತೆ ಉಂಟಾಗಿ ಮಗು ಸಂವಹನದಲ್ಲಿ ಹಿಂದುಳಿಯುತ್ತದೆ. ಮೂರನೆಯ ಹಂತದಲ್ಲಿ, ಪುನರುಚ್ಚರಿಸಿದ ಪದಗಳ ಅರ್ಥವನ್ನು ಮಗು ಗ್ರಹಿಸಬೇಕು. ಅನುಕರಣೆಯಿಂದ ಪದಗಳನ್ನು ಉಚ್ಚರಿಸುವುದನ್ನು ಕಲಿತ ಮೇಲೆ ಪದಗಳನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಎಳವೆಯಲ್ಲಿ ಮಕ್ಕಳು 'ಅಮ್ಮ' 'ಅಪ್ಪ' ಎನ್ನುತ್ತಾರೆ. ಆದರೆ 'ಅಮ್ಮ' 'ಅಪ್ಪ' ಎನ್ನುವ ಪರಿಕಲ್ಪನೆ ಅರ್ಥವಾಗುವುದು ಹಲವು ವರ್ಷಗಳ ನಂತರವಾಗಿರುತ್ತದೆ. ಅದೇ ರೀತಿ, 'ಸಂಕಷ್ಟ' ಎಂಬ ಪದವನ್ನು ಉಚ್ಚರಿಸಿದ ತಕ್ಷಣ ಆ ಪದದ ಅರ್ಥ ಆಗುವುದಿಲ್ಲ. ಹಲವಾರು ಉದಾಹರಣೆಗಳ ಮೂಲಕ ಆ ಪದದ ಅರ್ಥವನ್ನು ಮಗುವಿನಲ್ಲಿ ಮೂಡಿಸಬೇಕಾಗುತ್ತದೆ.

ನಾಲ್ಕನೆಯ ಹಂತದಲ್ಲಿ, ಪದವನ್ನು ಗುರುತಿಸಿ ಓದಲು ಕಲಿಯಬೇಕು. ಐದನೆಯದಾದ ಕೊನೆಯ ಹಂತದಲ್ಲಿ, ಬರೆಯಲು ಕಲಿಯಬೇಕು.

ನಮ್ಮಲ್ಲಿ ಸಾಮಾನ್ಯವಾಗಿ ಕನ್ನಡವನ್ನು ಕಲಿಸಿದ ವಿಧಾನದಲ್ಲಿಯೇ ಇಂಗ್ಲಿಷನ್ನು ಕಲಿಸಲಾಗುತ್ತದೆ. 'ಕನ್ನಡ'ವಾದಾಗ ಪರಿಸರದ ಭಾಷೆ. ಕನ್ನಡದ ಬಹಳಷ್ಟು ಪದಗಳ ಮೊದಲ ನಾಲ್ಕು ಹಂತಗಳು ಶಾಲೆಗೆ ಬರುವ ಮೊದಲೇ ಆಗಿರುತ್ತವೆ ಎಂಬ ನಂಬಿಕೆಯಲ್ಲಿ, ಬರವಣಿಗೆಯಿಂದಲೇ ಕನ್ನಡ ಕಲಿಕೆಯನ್ನು ಆರಂಭಿಸಲಾಗುತ್ತದೆ. ಅದೇ ಪದ್ಧತಿಯನ್ನು ಇಂಗ್ಲಿಷ್‌ಗೆ ಅನುಸರಿಸಿದಾಗ ಮೊದಲ ನಾಲ್ಕು ಹಂತಗಳು ಪೂರೈಸಲ್ಪಟ್ಟಿರದೆ ಮಗು ಕಲಿಕಾ ಸಂಕಷ್ಟವನ್ನು ಎದುರಿಸುತ್ತದೆ. ಒಂದು ಸಣ್ಣ ಉದಾಹರಣೆ ಕೊಡುವುದಾದರೆ, 'CUT' ಅನ್ನು 'ಕಟ್' ಎಂದು ಕಲಿಸುತ್ತೇವೆ. ಆಗ PUT ಏನಾಗಬೇಕು? 'ಪಟ್' ಆಗಬೇಕು. ಅದನ್ನು 'ಪುಟ್' ಎಂದು ಕಲಿಸುತ್ತೇವೆ. PUT ಪುಟ್ ಆದರೆ CUT ಏನಾಗಬೇಕು? 'ಕುಟ್' ಆಗಬೇಕು.



ಕನ್ನಡ ಕಲಿಕಾ ವಿಧಾನವನ್ನು ಇಂಗ್ಲಿಷ್ ಕಲಿಕೆಗೆ ವರ್ಗಾಯಿಸಿಕೊಂಡಾಗ ಎಳೆಯ ಮಗುವಿನಲ್ಲಿ ಈ ಬಗೆಯ ಗೊಂದಲಗಳು ಹುಟ್ಟಿಕೊಳ್ಳುತ್ತವೆ. ಶೈಕ್ಷಣಿಕ ಮನೋವಿಜ್ಞಾನವು ಇದನ್ನು 'ಋಣಾತ್ಮಕ ಕಲಿಕಾ ವರ್ಗಾವಣೆ' ಎಂದು ಗುರುತಿಸುತ್ತದೆ. ಕನ್ನಡ ಭಾಷಾ ಕಲಿಕೆಯ ಸ್ವಭಾವವೂ ಇಂಗ್ಲಿಷ್‌ನ ಭಾಷಾ ಸ್ವಭಾವವೂ ಬೇರೆ ಬೇರೆ ಎಂಬ ಅರಿವು ಮಗುವಿನಲ್ಲಿ ಹುಟ್ಟಿ ಕಲಿತಾಗ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ.

'ಉಚ್ಚಾರ ದೋಷ ಪರವಾಗಿಲ್ಲ' ಎನ್ನುವುದು ಒಂದು ವಾದವೇ ವಿನಾ ವ್ಯವಸ್ಥೆ ಅಲ್ಲ. ಉಚ್ಚಾರವನ್ನು ಸರಿಯಾಗಿ ಕಲಿತ ನಂತರ ಉಚ್ಚಾರ ದೋಷವು ಸಮಸ್ಯೆ ಅಲ್ಲ ಎಂದು ವಾದಿಸುವುದಕ್ಕೆ ಅರ್ಥವಿದೆ. ಸರಿಯಾದ ಉಚ್ಚಾರವೇ ಗೊತ್ತಿಲ್ಲದೆ ಹಾಗೆ ಹೇಳುವುದು ಮಕ್ಕಳನ್ನು ಪ್ರಯೋಗಕ್ಕೆ ಒಳಪಡಿಸಿದಂತೆ. ಉಚ್ಚಾರ ದೋಷವು ಸಮಸ್ಯೆ ಅಲ್ಲ ಎನ್ನುವುದು ಅರ್ಥಪಲ್ಲಟ ಆಗದೇ ಇರುವಾಗ ಮಾತ್ರ ಸರಿಯಾಗುತ್ತದೆ. ಉದಾಹರಣೆಗೆ, 'ಹದಗೊಳಿಸು' ಎನ್ನುವುದನ್ನು 'ಅದಗೊಳಿಸು' ಎಂದರೆ ದೊಡ್ಡ ಸಮಸ್ಯೆಯಾಗುವುದಿಲ್ಲ. ಏಕೆಂದರೆ ಅಲ್ಲಿ ಅರ್ಥಪಲ್ಲಟ ಆಗುವುದಿಲ್ಲ. ಆದರೆ, 'ಆದರ' ಎನ್ನುವ ಪದವನ್ನು 'ಹಾ' ಅಕ್ಷರದಿಂದ ಪ್ರಾರಂಭಿಸಿದರೆ ಅರ್ಥಪಲ್ಲಟವಾಗುತ್ತದೆ. ಆಗ ಉಚ್ಚಾರ ದೋಷವು ಸಮಸ್ಯೆಯೇ ಆಗುತ್ತದೆ.


ಇನ್ನು ಕೆಲವು ಪದಗಳು ಭಿನ್ನ ಭಾಷಾ ಸನ್ನಿವೇಶದಲ್ಲಿ ಅರ್ಥಪಲ್ಲಟವನ್ನು ಕಾಣುತ್ತವೆ. ಉದಾಹರಣೆಗೆ, 'ಬೇಳೆ'ಯನ್ನು 'ಬೇಲೆ' ಎಂದರೆ ಕನ್ನಡ ಭಾಷಾ ಸನ್ನಿವೇಶದಲ್ಲಿ ಸಮಸ್ಯೆ ಅಲ್ಲ. ಆದರೆ ತುಳು ಭಾಷಾ ಸನ್ನಿವೇಶಕ್ಕೆ ಬಂದಾಗ 'ಬೇಲೆ' ಎನ್ನುವುದು, 'ಕೆಲಸ' ಎಂಬ ಅರ್ಥವನ್ನು ತಳೆದು ಅರ್ಥಪಲ್ಲಟವಾಗುತ್ತದೆ. ಆಗ ಉಚ್ಚಾರ ದೋಷ ಸಮಸ್ಯೆಯೇ ಆಗುತ್ತದೆ. ಮಾತನಾಡುವಾಗ 'ಅದಗೊಳಿಸು' ಮತ್ತು 'ಹದಗೊಳಿಸು'ಗಳ ನಡುವೆ ವ್ಯತ್ಯಾಸ ಗೊತ್ತಾಗುವುದಿಲ್ಲ. ಆದರೆ ಮಾತನಾಡಿದ ಹಾಗೆಯೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 'ಅದಗೊಳಿಸು' ಎಂದು ಬರೆದಾಗ ಅದು ಅಭ್ಯರ್ಥಿಯ ಅಸಾಮರ್ಥ್ಯಕ್ಕೆ ಸಾಕ್ಷಿಯಾಗುತ್ತದೆ. ಆದ್ದರಿಂದ ಹಿತಾಸಕ್ತಿಯ ತಂಡಗಳ ಬೇಡಿಕೆ ಏನೇ ಇದ್ದರೂ ಮಕ್ಕಳಿಗೆ ಕಲಿಸುವಾಗ ಗ್ರಾಂಥಿಕ ಕನ್ನಡವನ್ನು ಸಾರ್ವತ್ರಿಕ ಸ್ವೀಕೃತ ಪದ್ಧತಿಯಾಗಿ ಕಲಿಸಬೇಕಾಗುತ್ತದೆ.

ವರ್ತಮಾನದ ಭಾಷಾ ಕಲಿಕೆಯಲ್ಲಿ 'ಕಾಪಿ' ಬರೆಯುವುದು ಕೇವಲ ಸಾಂಕೇತಿಕವಾಗಿದೆ. 'ಕಾಪಿ' ಸರಿಯಾಗಿ ಬರೆಯದೇ ಇದ್ದರೆ ಅಕ್ಷರಗಳನ್ನು ಸುಂದರವಾಗಿ ಬರೆಯುವ ಕೌಶಲ ಬರುವುದಿಲ್ಲ. ಭವಿಷ್ಯದಲ್ಲಿ ಎಲ್ಲವೂ ಟೈಪಿಂಗ್ ಮೂಲಕ ನಡೆಯುವುದರಿಂದ ಅಕ್ಷರ ಬರವಣಿಗೆ ಚೆನ್ನಾಗಿರಬೇಕಾಗಿಲ್ಲ ಎನ್ನುವುದು ಒಂದು ವಾದ. ಹಸ್ತಾಕ್ಷರವನ್ನು ಚೆನ್ನಾಗಿ ಇಡದಿದ್ದರೆ ಒಂದು ಭಾಷಾ ಕೌಶಲವೇ ಹೊರಟುಹೋಗುತ್ತದೆ ಎನ್ನುವುದು ಇನ್ನೊಂದು ವಾದ. ಇದರ ಬಗ್ಗೆ ಚರ್ಚೆ ನಡೆದು ಒಂದು ತೀರ್ಮಾನಕ್ಕೆ ಬರುವ ಅಗತ್ಯವಿದೆ.

ಲೆಕ್ಕದ ಕಲಿಕೆಗೂ ಭಾಷಾ ಕೌಶಲದ ಅಗತ್ಯವಿದೆ. ಲೆಕ್ಕ ಕಲಿಕೆಯ ಪರಿಣಾಮಕಾರಿ ಪದ್ಧತಿಗಳ ಬಗ್ಗೆ ವ್ಯಾಪಕವಾದ ಚರ್ಚೆಗಳ ಅಗತ್ಯವಿದೆ.

ಪರಿಪೂರ್ಣ ಸರಿಗಳು ಎಂದೂ ಇರುವುದಿಲ್ಲ. ಆದರೆ ಪ್ರತಿಯೊಂದನ್ನೂ ವಿವಾದಕ್ಕೆ ಒಳಪಡಿಸಿ ಶಿಕ್ಷಣವನ್ನೇ ಗೊಂದಲದ ಗೂಡಾಗಿಸಿದರೆ ಕಳೆದುಕೊಳ್ಳುವವರು ಭವಿಷ್ಯದ ಪೌರರಾದ ಮಕ್ಕಳಾಗಿರುತ್ತಾರೆ ಎಂಬ ಅರಿವಿರಬೇಕು.

ಚುರುಮುರಿ



ಹೆಸರಿನಲ್ಲೇನಿದೆ?

• ಆನಂದ

'ಶ್ರೀ ಬಸವೇಶ್ವರ ಯುವ ಆಟೊ ಚಾಲಕರ ಗೆಳೆಯರ ಬಳಗ' ಎಂಬ ಬೋರ್ಡ್ ನೋಡಿದೇರಿ ಇವತ್ತು ಬಸ್‌ಸ್ಟ್ಯಾಂಡ್ ಬಳಿ' ಎಂದಳು ಹೆಂಡತಿ.

'ವಾಟ್ ಈಸ್ ಇನ್ ಎ ನೇಮ್?' ಎಂದೆ ನಾನು ಥೇಟ್ ಷೇಕ್ಸ್‌ಪಿಯರ್‌ನಂತೆ.

'ಇನ್ನೊಂದು ಸಲ ಹೇಳ್ತೀನಿ ಗಮನವಿಟ್ಟು ಕೇಳಿ' ಎಂದು 'ಶ್ರೀ ಬಸವೇಶ್ವರ ಯುವ ಆಟೊ ಚಾಲಕರ ಗೆಳೆಯರ ಬಳಗ' ಎಂದು ಉಚ್ಚರಿಸಿದಳು.

ನನಗೆ ಗೊಂದಲವಾಗತೊಡಗಿತು. ಅದನ್ನು ಬರೆದು ತೋರಿಸಿದಳು.

'ಶ್ರೀ ಬಸವೇಶ್ವರ' ಅಷ್ಟೇ ಅರ್ಥವಾಗಿದ್ದು ನನಗೆ' ಎಂದೆ.

'ನನ್ನದೂ ಅದೇ ಸಮಸ್ಯೆ. ಯುವ ಆಟೊ ಚಾಲಕರು ಎಂದರೆ ಯುವ ಆಟೊನೇ ಅಥವಾ ಯುವ ಚಾಲಕರೆ? ಅಥವಾ ಯುವ ಗೆಳೆಯರೆ?'

'ಹೌದು 'ಚಾಲಕರ ಗೆಳೆಯರ ಬಳಗ' ಅಂತಿದೆ'.

'ಸೊ, ಈಗ ನಾವು 'ಶ್ರೀ ಬಸವೇಶ್ವರ ಯುವ ಆಟೊ ಚಾಲಕರ ಗೆಳೆಯರ ಬಳಗ' ಅಂದರೆ ಯಾರನ್ನ ಎಂದು ತಿಳಿದುಕೊಳ್ಳುವುದು? ಅದು ಯುವ ಆಟೊ ಎಂದರೆ ಹೊಸ ಆಟೊ ಆಗಿರಬಹುದು. ಅಂದರೆ ಹೊಸ ಆಟೊ ಕೊಂಡ ಚಾಲಕರ ಬಳಗವೇ ಇದು? ಅಥವಾ ಯುವ ಚಾಲಕರ ಬಳಗವೇ? ಆದರೆ ಚಾಲಕರ ಗೆಳೆಯರ ಬಳಗ ಅಂತಿದೆಯಲ್ಲ? ಯುವ ಗೆಳೆಯರು, ಬರೀ ಗೆಳೆಯರು ಅಲ್ಲ'.

'ಕರೆಕ್ಟ್, ದೇವನೊಬ್ಬ ನಾಮ ಹಲವು ಎಂದಂತೆ ಬೋರ್ಡ್ ಒಂದು, ಅರ್ಥಗಳು ಬೇರೆ ಬೇರೆ'.

'ನನಗೆ ಈಗ ಇನ್ನೊಂದು ಸಂದೇಹ. ಈ ಆಟೊ ಚಾಲಕರು- ಯುವಕರೋ ವಯಸ್ಸಾದವರೋ ಅದನ್ನು ಪಕ್ಕಕ್ಕಿಡಿ- ಅವರ ಗೆಳೆಯರು ಸೇರಿ ಏಕೆ ಈ ಬಳಗ ಮಾಡಿಕೊಂಡರು? ಹೌದು, ಆಟೊ ಚಾಲಕರಿಗೆ ನೆರವಾಗಲೆಂದೇ?'

'ನೆರವು ಬೇಕಾಗಿರುವುದು ಪ್ರಯಾಣಿಕರಿಗೆ, ಕರೆದರೆ ಬರೋಲ್ಲ ಅಂತಾರೆ, ಮೀಟರ್ ಮೇಲೆ ಟ್ವೆಂಟಿ ರುಪೀಸ್ ಕೊಡಿ ಅಂತಾರೆ ಚಾಲಕರು'.

'ಹಾಗಿದ್ದರೆ ಪ್ರಯಾಣಿಕರ ನೆರವಿಗೆ ಬರಲು ಈ ಬಳಗ ರಚಿಸಿರಬಹುದೇ?'

'ಆದರೆ ಈ ಗೆಳೆಯರು ಎಲ್ಲಿ ಸಿಗುತ್ತಾರೆ?'

ಸಂಗತ

ಪೊಲೀಸ್ ವ್ಯವಸ್ಥೆ: ಸುಧಾರಣೆಗೆ ಸಕಾಲ

ಪೊಲೀಸ್ ವ್ಯವಸ್ಥೆ ಬಗ್ಗೆ ಜನರಿಗೆ ಇರುವ ನಂಬಿಕೆಯನ್ನೇ ಅಲ್ಲಾಡಿಸುವಂತಹ ಬೆಳವಣಿಗೆಗಳು ನಡೆಯುತ್ತಿರುವುದು ದುರದೃಷ್ಟಕರ

• ಸಿ.ರುದ್ರಪ್ಪ

'ಖಾಕಿ ಸಮವಸ್ತ್ರದಲ್ಲಿರುವ ಕ್ರಿಮಿನಲ್‌ಗಳನ್ನು ಸಹಿಸುವುದಿಲ್ಲ'. ಇದು, ಬೆಂಗಳೂರು ಪೊಲೀಸ್ ಕಮಿಷನರ್ ಆಗಿದ್ದ ಕಮಲ್ ಪಂತ್ ಅವರು ಕಳೆದ ವರ್ಷ ನೀಡಿದ್ದ ಹೇಳಿಕೆ. ಕೆಲವು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ದುರ್ವರ್ತನೆಗೆ ರೋಸಿಹೋಗಿ ಅವರು ಈ ಮಾತು ಆಡಿದ್ದರು. ಆಗ ಡಕಾಯಿತಿ, ಸುಲಿಗೆ, ಬೆದರಿಕೆ, ನಕಲಿ ದಾಳಿ, ಡ್ರಗ್ಸ್ ದಂಧೆಕೋರರೊಂದಿಗೆ ಶಾಮೀಲು, ಅಕ್ರಮ ಬಂಧನ ಸೇರಿದಂತೆ ವಿವಿಧ ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾದ ಆರೋಪದ ಮೇಲೆ 20ಕ್ಕೂ ಹೆಚ್ಚು ಪೊಲೀಸರು ಅಮಾನತಿಗೆ ಒಳಗಾಗಿದ್ದರು. ಕೆಲವರನ್ನು ಎತ್ತಂಗಡಿ ಮಾಡಲಾಗಿತ್ತು.

ಕೋವಿಡ್‌ನಂತಹ ದುರಿತ ಕಾಲವನ್ನೂ ಕೆಲವು ಅಧಿಕಾರಿಗಳು ದುರುಪಯೋಗ ಮಾಡಿಕೊಂಡಿದ್ದರು. ಲಾಕ್‌ಡೌನ್ ವೇಳೆ ಸಿಗರೇಟ್ ವಹಿವಾಟಿಗೆ ಅವಕಾಶ ನೀಡಲು ಡೀಲರ್ ಒಬ್ಬರಿಂದ ₹ 30 ಲಕ್ಷ ಸುಲಿಗೆ ಮಾಡಿದ್ದ ಆರೋಪದ ಮೇಲೆ ಸಿಸಿಬಿ ಎಸಿಪಿ ಮತ್ತು ಇಬ್ಬರು ಇನ್‌ಸ್ಪೆಕ್ಟರ್‌ಗಳನ್ನು ಅಮಾನತು ಮಾಡಲಾಗಿತ್ತು. ದುಬಾರಿ ಬೆಲೆಯ ಮದ್ಯದ ಬಾಟಲಿಗಳನ್ನು ಸಾಗಿಸುತ್ತಿದ್ದವರಿಂದ ₹ 50 ಲಕ್ಷ ಲಂಚ ಪಡೆದ ಆರೋಪದ ಮೇಲೆ ಎಲೆಕ್ಟ್ರಾನಿಕ್ ಸಿಟಿ ಎಸಿಪಿ ಮತ್ತು ಇನ್ನಿಬ್ಬರು ಅಧಿಕಾರಿಗಳನ್ನು ಅಮಾನತು ಮಾಡಲಾಗಿತ್ತು.

ಅಕ್ರಮಗಳಲ್ಲಿ ಪೊಲೀಸರೇ ಶಾಮೀಲಾಗಿದ್ದರೂ ಅವುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಪ್ರಕರಣಗಳು ಬಯಲಿಗೆ ಬರುವುದೇ ಇಲ್ಲ. ಪೊಲೀಸ್ ವ್ಯವಸ್ಥೆ ಬಗ್ಗೆ ಜನರಿಗೆ ಇರುವ ನಂಬಿಕೆಯನ್ನೇ ಅಲ್ಲಾಡಿಸುವಂತಹ ಬೆಳವಣಿಗೆಗಳು ನಡೆಯುತ್ತಿವೆ. ಸಬ್‌ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಅಕ್ರಮವು ದೇಶದಾದ್ಯಂತ ದೊಡ್ಡ ಸದ್ದು ಮಾಡುತ್ತಿದೆ.

ನಮ್ಮ ರಾಜ್ಯದ ನೇಮಕಾತಿ ವ್ಯವಸ್ಥೆ ಇಡೀ ದೇಶದಲ್ಲಿಯೇ ಮನ್ನಣೆ ಪಡೆದಿತ್ತು. ಇದೀಗ ಇಂತಹ ಬೆಳವಣಿಗೆ ನಡೆದಿರುವುದು ಅತ್ಯಂತ ದುರದೃಷ್ಟಕರ. ಪಿಎಸ್‌ಐ ನೇಮಕಾತಿ ಹಗರಣದಲ್ಲಿ, ಆಯ್ಕೆ ಸಮಿತಿ ಮುಖ್ಯಸ್ಥರಾಗಿದ್ದ ಎಡಿಜಿಪಿಯೂ ಸೇರಿದಂತೆ 20 ಅಧಿಕಾರಿಗಳನ್ನು ಬಂಧಿಸಲಾಗಿದೆ. ಪೊಲೀಸ್ ಪ್ರಧಾನ ಕಚೇರಿಯಲ್ಲಿಯೇ ಇಂತಹ ದೊಡ್ಡ ಕ್ರಿಮಿನಲ್ ಹುನ್ನಾರ ನಡೆದಿದ್ದರೂ ಹಿರಿಯ ಅಧಿಕಾರಿಗಳಿಗೆ ಅಥವಾ ಇಲಾಖಾ ಮುಖ್ಯಸ್ಥರಿಗೆ ಅದರ ಸುಳಿವು ಸಿಗಲಿಲ್ಲ ಎಂಬುದು ತೀವ್ರ ಆಘಾತಕಾರಿ. ಎಸ್‌ಐ ಹುದ್ದೆಗೆ ₹ 40 ಲಕ್ಷದಿಂದ ₹ 1 ಕೋಟಿವರೆಗೆ ಕೊಟ್ಟು ಬಂದವರು ತಮ್ಮ ಆಸ್ತಿಪಾಸ್ತಿ ಮತ್ತು ಪ್ರಾಣವನ್ನು ರಕ್ಷಣೆ ಮಾಡುತ್ತಾರೆಂಬ ನಂಬಿಕೆ ಜನರಲ್ಲಿ ಉಳಿಯುವುದಾದರೂ ಹೇಗೆ?

'ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಕಲೆಕ್ಷನ್ ಕೇಂದ್ರವಾಗಿದೆ' ಎಂದು ಹೈಕೋರ್ಟ್ ಛೀಮಾರಿ ಹಾಕಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಇಡೀ ಪೊಲೀಸ್ ಇಲಾಖೆಯೇ ಇಂತಹ ಛೀಮಾರಿ ಹಾಕಿಸಿಕೊಳ್ಳುವ ದುಃಸ್ಥಿತಿ ಒದಗಬಹುದು. 'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲಲುಬಾರದು...' ಎಂಬ ವಚನದ ಸಾಲುಗಳು ನೆನಪಿಗೆ ಬರುತ್ತವೆ. ಹಾಗಾದರೆ ಮುಂದೇನು ಎಂಬ ಪ್ರಶ್ನೆ ಸಹಜ.

ದೌರ್ಜನ್ಯ, ಭ್ರಷ್ಟಾಚಾರ, ಅತಿರೇಕದ ವರ್ತನೆಯ ಆರೋಪಗಳು ಪೊಲೀಸರ ಮೇಲೆ ಕೇಳಿಬಂದಾಗ ಕೆಲವರು ಒಂದು ವಾದವನ್ನು ಮಂಡಿಸುತ್ತಾರೆ: 'ಪೊಲೀಸರು ಕೂಡಾ ಸಮಾಜದ ಅವಿಭಾಜ್ಯ ಅಂಗ. ಆದ್ದರಿಂದ ಅವರೂ ಸಮಾಜದಲ್ಲಿರುವ ಕೊಳೆಯನ್ನು ಅಂಟಿಸಿಕೊಂಡಿರುತ್ತಾರೆ'. ಆದರೆ ಇದು ಜನರ ದಿಕ್ಕು ತಪ್ಪಿಸುವ ವಾದ. ಏಕೆಂದರೆ ಪೊಲೀಸ್ ಅಧಿಕಾರಿಗಳು ಸಮಾಜದ ಪ್ರತಿಷ್ಠಿತ ವರ್ಗ. ಅವರು ಸಮಾಜದ ಕೆನೆಪದರ. ಒಬ್ಬ ಪೊಲೀಸ್ ಅಧಿಕಾರಿಯನ್ನು ರೂಪಿಸಲು ಸರ್ಕಾರವು ಅಪಾರ ಸಂಪನ್ಮೂಲವನ್ನೂ ಅಧಿಕಾರವನ್ನೂ ಕ್ರೋಡೀಕರಿಸಿ ಆತನ ಮೇಲೆ ವಿನಿಯೋಗಿಸುತ್ತದೆ. ಪೊಲೀಸ್ ಅಧಿಕಾರಿಗಳಿಗೆ ಉನ್ನತ ತರಬೇತಿಯನ್ನು ನೀಡಲಾಗುತ್ತದೆ. ನೀತಿ ಪಾಠಗಳನ್ನು ಎಲ್ಲಾ ಪೊಲೀಸ್ ಅಕಾಡೆಮಿಗಳಲ್ಲೂ ಬೋಧಿಸಲಾಗುತ್ತದೆ.



ಯುಪಿಎಸ್‌ಸಿ ಪರೀಕ್ಷೆಯಲ್ಲಿ ನೈತಿಕ ಗುಣಮಟ್ಟದ ಬಗ್ಗೆ ಪ್ರಶ್ನೆಗಳಿರುತ್ತವೆ. ಜನಸಾಮಾನ್ಯರು ಕೂಡಾ ಪೊಲೀಸ್ ಅಧಿಕಾರಿಗಳನ್ನು ಅಸಾಮಾನ್ಯ ಮತ್ತು ಮಾದರಿ ವ್ಯಕ್ತಿಗಳನ್ನಾಗಿ ಕಲ್ಪಿಸಿಕೊಳ್ಳುತ್ತಾರೆ. ಆದ್ದರಿಂದ ಪೊಲೀಸ್ ಅಧಿಕಾರಿಗಳು ಕೊಳೆಯನ್ನು ಅಂಟಿಸಿಕೊಳ್ಳಬಾರದು. ಒಬ್ಬ ಸಾಮಾನ್ಯ ವ್ಯಕ್ತಿ ಅಪರಾಧ ಕೃತ್ಯಗಳನ್ನು ಎಸಗಿದರೆ ಅದರಿಂದ ಮತ್ತೊಬ್ಬ ವ್ಯಕ್ತಿಗೆ ಅಥವಾ ಒಂದು ಕುಟುಂಬಕ್ಕೆ ಸೀಮಿತವಾಗಿ ಹಾನಿ–ನಷ್ಟ ಆಗಬಹುದು. ಆದರೆ ಒಬ್ಬ ಪೊಲೀಸ್ ಅಧಿಕಾರಿ ಅಪರಾಧ ಕೃತ್ಯಗಳಲ್ಲಿ ತೊಡಗಿದರೆ ಇಡೀ ವ್ಯವಸ್ಥೆಗೆ ಹಾನಿಯಾಗುತ್ತದೆ. ಕಾನೂನು– ಸುವ್ಯವಸ್ಥೆಯ ಮೇಲೆ ಗಂಭೀರವಾದ ಪರಿಣಾಮ ಉಂಟಾಗುತ್ತದೆ. ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಹಂದರವೇ ಕುಸಿತಕ್ಕೆ ಒಳಗಾಗಬೇಕಾಗುತ್ತದೆ.

ಕ್ರಿಮಿನಲ್ ಪ್ರವೃತ್ತಿ ಬೆಳೆಸಿಕೊಳ್ಳುತ್ತಿರುವ ಅಧಿಕಾರಿಗಳನ್ನು ಆರಂಭದ ಹಂತದಲ್ಲಿಯೇ ಪತ್ತೆ ಹಚ್ಚಿ ಸರಿದಾರಿಗೆ ತರುವ ಪ್ರಯತ್ನಗಳು ಏಕೆ ನಡೆಯುತ್ತಿಲ್ಲ? ಪೊಲೀಸರ ಮೇಲೆ ಜನರು ಸಂಪೂರ್ಣವಾಗಿ ನಂಬಿಕೆ ಕಳೆದುಕೊಳ್ಳುವ ಮೊದಲು, ಆ ಇಲಾಖೆಯಲ್ಲಿ ಇರಬಹುದಾದ ನೀತಿವಂತ ಅಧಿಕಾರಿಗಳು ಆತ್ಮಾವಲೋಕನದ ಮೂಲಕ ಪೊಲೀಸ್ ವ್ಯವಸ್ಥೆ ಸುಧಾರಣೆಗೆ ಮುಂದಾಗಲು ಇದು ಸಕಾಲ. ಈ ದಿಸೆಯಲ್ಲಿ ಸರ್ಕಾರ ಕೂಡ ಗಂಭೀರವಾಗಿ ಚಿಂತಿಸಬೇಕಾಗಿದೆ.

ವಾಚಕರ ವಾಣಿ

ಪರಿಷ್ಕೃತ ಪಠ್ಯ ಶೀಘ್ರ ತಲುಪಲಿ

ಶಾಲೆಗಳು ಪ್ರಾರಂಭವಾಗಿ ಎರಡು ತಿಂಗಳಾಗುತ್ತಾ ಬಂದಿದೆ. ಮೊದಲನೇ ಕಿರುಪರೀಕ್ಷೆಗಳು ನಡೆಯುತ್ತಿವೆ. ಆದರೆ ಆರು ಮತ್ತು ಏಳನೇ ತರಗತಿಯ ಕನ್ನಡ ಮತ್ತು ಸಮಾಜ ವಿಜ್ಞಾನ ಭಾಗ-1 ಪಠ್ಯಪುಸ್ತಕಗಳು ಕೆಲವೆಡೆ ಇನ್ನೂ ಮಕ್ಕಳ ಕೈಸೇರಿಲ್ಲ. ಹೀಗಾದರೆ ಪಾಠ ಮಾಡುವುದು ಹೇಗೆ? ಮಕ್ಕಳು ಪರೀಕ್ಷೆಗೆ ಸಿದ್ಧರಾಗುವುದು ಯಾವಾಗ? ಪಠ್ಯಪುಸ್ತಕ ಪರಿಷ್ಕರಣೆ ಎಂಬ ಗೊಂದಲ ಮಕ್ಕಳ ಓದಿಗೆ ಮುಳುವಾಗಿ ಪರಿಣಮಿಸಿರುವುದು ದುರದೃಷ್ಟಕರ.

ಪಠ್ಯಪುಸ್ತಕಗಳನ್ನು ರಾಜ್ಯದ ಎಲ್ಲ ಶಾಲೆಗಳಿಗೂ ತಲುಪಿಸಲು ತಡವಾಗುತ್ತದೆ ಎನ್ನುವುದಾದರೆ, ಪಾಠ ಬೋಧನೆಗೆ ಅನುಕೂಲವಾಗುವಂತೆ ಪರಿಷ್ಕೃತ ಪಠ್ಯದ ನಕಲು ಪ್ರತಿಯಾದರೂ ತಲುಪುವಂತೆ ಮಾಡಬೇಕಿತ್ತು. ಹಾಗೆ ಮಾಡದಿರುವುದು ಶಿಕ್ಷಕರು ಹಾಗೂ ಮಕ್ಕಳಲ್ಲಿ ಗೊಂದಲವನ್ನು ಉಂಟುಮಾಡಿದೆ. ಈ ದಿಸೆಯಲ್ಲಿ ಸರ್ಕಾರ ಕೂಡಲೇ ಸ್ಪಂದಿಸಬೇಕು. ಮಕ್ಕಳ ಕೈಗೆ ಪುಸ್ತಕ ಸಿಗುವಂತೆ ಮಾಡಬೇಕು.

ಸುವರ್ಣ ಸಿ.ಡಿ., ತರೀಕೆರೆ

ನೇಮಕಾತಿಯಲ್ಲಿ ಭ್ರಷ್ಟಾಚಾರ: ಸಮಾಜಘಾತುಕ ಕೃತ್ಯ

ಪಿಎಸ್‌ಐ ಪರೀಕ್ಷೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕಾಗಿದೆ. ಯಾರು ಎಷ್ಟೇ ಪ್ರಭಾವಿಗಳಾಗಿದ್ದರೂ ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಇನ್ನು ಮುಂದೆ ನಡೆಯುವ ನೇಮಕಾತಿಗಳನ್ನು ಅತ್ಯಂತ ಪಾರದರ್ಶಕವಾಗಿ ನಡೆಸಲು ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕು. ಅಕ್ರಮದ ಎಲ್ಲ ಮಾರ್ಗಗಳನ್ನೂ ಮುಚ್ಚಬೇಕು. ಪ್ರತಿಭಾವಂತರಿಗೆ ಅನ್ಯಾಯ ಆಗದ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸಲು ಮುಂದಾಗಬೇಕು. ನೇಮಕಾತಿಯಲ್ಲಿ ನಡೆಸುವ ಭ್ರಷ್ಟಾಚಾರವು ಸಮಾಜಘಾತುಕ ಕೆಲಸ. ಅದರ ಪರಿಣಾಮಗಳು ಘೋರವಾಗಿರುತ್ತವೆ. ಇಂತಹ ಕೃತ್ಯಗಳಲ್ಲಿ ತೊಡಗಿದವರಿಗೆ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು. ಪ್ರತಿಭಾವಂತರು ಉದ್ಯೋಗ ಪಡೆಯಲು ಈ ರೀತಿಯ ಅಕ್ರಮಗಳು ತೊಡಕಾಗಬಾರದು.

ವಿನಯ್ ನಾಗರಾಜ್, ಬಲಶೆಟ್ಟಿಹಾಳ

ಬೇಕು ಪ್ರೋತ್ಸಾಹದಾಯಕ ಯೋಜನೆ

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಸೈಕಲ್, ಶೂ, ಸಾಕ್ಸ್ ವಿತರಣೆಯಾಗಿಲ್ಲ ಎಂಬ ಸುದ್ದಿ ತಿಳಿದು ಬೇಜಾರಾಯಿತು. ಆರ್ಥಿಕ ಹೊರೆಯ ಕಾರಣ ಮುಂದೊಡ್ಡಿ ಸರ್ಕಾರ ಇವುಗಳನ್ನು ಕೊಡದೇ ಇರುವುದು ಒಪ್ಪತಕ್ಕ ವಿಷಯವಲ್ಲ. ಗ್ರಾಮೀಣ ಭಾಗದಲ್ಲಿ ಓದುತ್ತಿರುವ, ದೂರದಿಂದ ಶಾಲೆಗೆ ಬರುವ ಮಕ್ಕಳಿಗೆ ಸೈಕಲ್ ನೀಡುವುದರಲ್ಲಿ ತಪ್ಪಿಲ್ಲ.

ಈ ಮೊದಲು ಸೈಕಲ್‌ಗಳನ್ನು ಎಲ್ಲಾ ಮಕ್ಕಳಿಗೂ ಕೊಡುತ್ತಿದ್ದರಿಂದ ಆರ್ಥಿಕ ಹೊರೆ ಆಗಿರಬಹುದು. ಶಾಲೆಯ ಆಸುಪಾಸಿನ ಮಕ್ಕಳಿಗೆಲ್ಲ ಸೈಕಲ್ ಕೊಡುವ ಬದಲು, ನಿಜವಾಗಿ ಅಗತ್ಯವುಳ್ಳ ಮಕ್ಕಳಿಗೆ ಕೊಡುವುದು ಒಳಿತು. ಕನಿಷ್ಠ ಮೂರು ಕಿಲೊಮೀಟರ್‌ಗಿಂತ ದೂರದಿಂದ ಬರುವ ಮಕ್ಕಳನ್ನು ಪರಿಗಣಿಸಬಹುದು. ಸರ್ಕಾರಿ ಶಾಲೆಗಳಿಗೆ ಬಸ್ ಸೇವೆ ಒದಗಿಸುವ ಮಾತು ಇತ್ತೀಚೆಗೆ ಕೇಳಿಬರುತ್ತಿದೆ. ಏನೇ ಆಗಲಿ, ಪ್ರೋತ್ಸಾಹದಾಯಕ ಯೋಜನೆಗಳ ಮೂಲಕ ಬಡ ಮಕ್ಕಳಿಗೆ ಅನುಕೂಲ ಮಾಡಿಕೊಡುವುದು ಸರ್ಕಾರದ ಕರ್ತವ್ಯವೇ ಆಗಿರುತ್ತದೆ.

ಸರೋಜಿನಿ ನಾಯಕ್, ಆಶೀಹಾಳ ತಾಂಡಾ, ಮುದಗಲ್

ಭೀಕರ ದೃಶ್ಯದ ಪ್ರಸಾರ ಸಲ್ಲ

ವಾಸ್ತುತಜ್ಞ ಚಂದ್ರಶೇಖರ ಗುರೂಜಿ ಅವರನ್ನು ಭೀಕರವಾಗಿ ಹತ್ಯೆ ಮಾಡಿರುವುದು ಅತ್ಯಂತ ಹೇಯವಾದ ಕೃತ್ಯ. ನಮಸ್ಕಾರ ಮಾಡುವ ಕೈಗಳೇ ಕೊಲೆ ಮಾಡುವ ಅಸ್ತ್ರಗಳಾಗುವುದು ವಿಷಾದನೀಯ. ಗುರೂಜಿ ಅವರನ್ನು ಯುವಕರು ಕೊಲ್ಲುವ ದೃಶ್ಯವನ್ನು ಟಿ.ವಿ. ಮಾಧ್ಯಮದಲ್ಲಿ ನೋಡಿದರೆ, ನಮ್ಮ ಎದುರೇ ಚುಚ್ಚಿ ಚುಚ್ಚಿ ಕೊಲ್ಲುತ್ತಿರುವಂತೆ ಭಾಸವಾಗುತ್ತದೆ. ಟಿ.ವಿ. ಚಾನೆಲ್‌ಗಳು ಇಂತಹ ದೃಶ್ಯಗಳನ್ನು ಪದೇಪದೇ ತೋರಿಸದೇ ಇರುವುದು ಒಳ್ಳೆಯದು.

ನಂಜನಹಳ್ಳಿ ನಾರಾಯಣ, ಬೆಂಗಳೂರು

ಪೊಲೀಸರ ನಡೆ, ನುಡಿ ಶುದ್ಧವಾಗಿರಲಿ

ಸಾರ್ವಜನಿಕ ಸ್ಥಳಗಳಲ್ಲಿ ರಕ್ಷಣೆಯ ಹೊಣೆ ಹೊತ್ತ ಪೊಲೀಸರು ನಾಗರಿಕರೊಂದಿಗೆ ಬಳಸುವ ಭಾಷೆ ತುಂಬಾ ಕೀಳುಮಟ್ಟದ್ದಾಗಿರುತ್ತದೆ. ಅದನ್ನು ಕೇಳಿದಾಗ ನಾಗರಿಕರೊಂದಿಗೆ ಇವರೇಕೆ ಹೀಗೆ ಅನಾಗರಿಕರಂತೆ ವರ್ತಿಸುತ್ತಿದ್ದಾರೆ ಎನಿಸುತ್ತದೆ. ಇಂತಹ ಕೆಳಮಟ್ಟದ ಪದಗಳನ್ನು ಸಾಮಾನ್ಯ ಜನ ಕೇಳಿಸಿಕೊಂಡಾಗ, ರಕ್ಷಣೆಯ ಹೊಣೆ ಹೊತ್ತವರ ಬಗ್ಗೆ ಗೌರವ, ವಿಶ್ವಾಸ ಕುಂದುತ್ತದೆ. ನಾಗರಿಕರೊಂದಿಗೆ ಸೌಜನ್ಯಯುತವಾಗಿ ನಡೆದುಕೊಳ್ಳುವುದರ ಬಗೆಗೆ ಪೊಲೀಸರಿಗೆ ತರಬೇತಿಯ ಅಗತ್ಯ ಇದೆ. ಅವರೂ ತಮ್ಮಂತೆಯೇ ಮನುಷ್ಯರು ಎಂಬುದನ್ನು ಮರೆತು ಅವರು ವರ್ತಿಸಬಾರದು. ಪ್ರತಿಯೊಬ್ಬರಿಗೂ ವ್ಯಕ್ತಿ ಗೌರವ, ಸ್ವಾಭಿಮಾನ ಎಂಬುದಿರುತ್ತದೆ. ಮುಗ್ಧರ ಬಗೆಗೆ ಕಿಂಚಿತ್ತಾದರೂ ಕರುಣೆ ಹೊಂದಿರಬೇಕು. ಕಾನೂನು, ನಿಯಮಗಳನ್ನು ಜನರಿಗೆ ತಾಳ್ಮೆಯಿಂದ ತಿಳಿಸಿಹೇಳುವಂತಹ ಸೌಜನ್ಯ ರೂಢಿಸಿಕೊಳ್ಳಬೇಕು.

ಮಂಜುನಾಥ್ ಜೆ., ಚಿತ್ರದುರ್ಗ

ಭರವಸೆ ಮೂಡಿಸಿದ ಸಿಐಡಿ

ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ಬಂಧಿಸಲಾಗಿದೆ. ಈ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳು ಯಾರಿಗೂ ಮಣಿಯದೆ ತನಿಖಾ ತಂಡವನ್ನು ಮುನ್ನಡೆಸಿದ್ದು, ಅಭಿನಂದನೆಗೆ ಅರ್ಹರಾಗಿದ್ದಾರೆ. ಆದರೂ ಈ ಕರ್ಮಕಾಂಡದ ತನಿಖೆಯಲ್ಲಿ ಅವರು ಸಾಗಬೇಕಿರುವ ದಾರಿ ಬಹಳಷ್ಟಿದೆ. ಕೆಳ, ಹಿರಿಯ ಹಂತದ ಅಧಿಕಾರಿಗಳ ಜತೆಗೆ ಸರ್ಕಾರದ ಮಟ್ಟದಲ್ಲಿ ಅತ್ಯಂತ ಪ್ರಭಾವಿ ಸ್ಥಾನಗಳಲ್ಲಿರುವ ಕಿಂಗ್‌ಪಿನ್‌ಗಳ ಹೆಸರು ಕೇಳಿಬಂದಿದ್ದು, ಸಿಐಡಿ ತಂಡ ಅವರನ್ನೆಲ್ಲ ಪತ್ತೆ ಹಚ್ಚಬೇಕಿದೆ. ಸಮಗ್ರವಾದ ತನಿಖೆ ನಡೆದರೆ ದೊಡ್ಡ ದೊಡ್ಡ ಕುಳಗಳೂ ಸಿಕ್ಕಿಬೀಳಬಹುದು. ಅಲ್ಲದೆ, ಮುಂದಿನ ನೇಮಕಾತಿ ಪ್ರಕ್ರಿಯೆಗಳಲ್ಲಿ ಭ್ರಷ್ಟಾಚಾರದ ಬಾಗಿಲುಗಳು ಮುಚ್ಚಿಕೊಳ್ಳಬಹುದು.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮನೆ ಮನೆಗೆ ನಲ್ಲಿ ಕುಂಠಿತ ಪ್ರಗತಿ

ಪ್ರಜಾವಾಣಿ ವಾರ್ತೆ

ದೇಶದ ಗ್ರಾಮೀಣ ಪ್ರದೇಶದ ಎಲ್ಲಾ ಕುಟುಂಬಗಳು/ಮನೆಗಳಿಗೆ ಶುದ್ಧ ಕುಡಿಯುವ ನೀರಿನ ಸಂಪರ್ಕವಿರುವ ನಲ್ಲಿ ಅಳವಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು 2019ರ ಆಗಸ್ಟ್‌ನಲ್ಲಿ ರಾಷ್ಟ್ರೀಯ ಜಲಜೀವನ್ ಮಿಷನ್ ಅಭಿಯಾನವನ್ನು ಆರಂಭಿಸಿತ್ತು. 2024ರ ಆಗಸ್ಟ್ ವೇಳೆಗೆ ಈ ಗುರಿಯನ್ನು ಮುಟ್ಟುವ ಗಡುವು ಹಾಕಿಕೊಳ್ಳಲಾಗಿತ್ತು. ಯೋಜನೆ ಆರಂಭವಾದಾಗ 16 ಕೋಟಿ ಮನೆಗಳಿಗೆ ಹೊಸದಾಗಿ ನಲ್ಲಿ ನೀರಿನ ಸಂಪರ್ಕ ಕೊಡಬೇಕಿತ್ತು. 35 ತಿಂಗಳಲ್ಲಿ ಹೊಸದಾಗಿ 6.54 ಕೋಟಿ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲಾಗಿದೆ. ಉಳಿದ 25 ತಿಂಗಳಲ್ಲಿ ಇನ್ನೂ 9.44 ಕೋಟಿ ಮನೆಗಳಿಗೆ ಹೊಸದಾಗಿ ನಲ್ಲಿ ನೀರಿನ ಸಂಪರ್ಕ ನೀಡಬೇಕಿದೆ.

2019ರಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ಗ್ರಾಮಗಳು ಕುಡಿಯುವ ನೀರಿನ ಕೊಳವೆ ಸಂಪರ್ಕ ಹೊಂದಿದ್ದವು. ಆ ಗ್ರಾಮಗಳ ಎಲ್ಲಾ ಕುಟುಂಬಗಳಿಗೆ 2021ರ ಡಿಸೆಂಬರ್ ಅಂತ್ಯಕ್ಕೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಆ ಗಡುವನ್ನು 2022ರ ಮಾರ್ಚ್ ಅಂತ್ಯಕ್ಕೆ ವಿಸ್ತರಿಸಲಾಗಿತ್ತು. ವಿಸ್ತರಿಸಲಾದ ಗಡುವಿನೊಳಗೂ ಈ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ. ಹೀಗಾಗಿ 2024ರ ಗಡುವಿನ ಒಳಗೆ ದೇಶದ ಗ್ರಾಮೀಣ ಭಾಗದ ಎಲ್ಲಾ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸುವ ಗುರಿ ತಲುಪುವುದು ದೊಡ್ಡ ಸವಾಲಾಗಲಿದೆ ಎಂದು ವಿಶ್ಲೇಷಿಸಲಾಗಿದೆ.



19.21 ಕೋಟಿ ದೇಶದ ಗ್ರಾಮೀಣ ಭಾಗದ ಕುಟುಂಬ/ಮನೆಗಳ ಸಂಖ್ಯೆ

3.23 ಕೋಟಿ 2019ರ ಆಗಸ್ಟ್ 15ರಲ್ಲಿ ಗ್ರಾಮೀಣ ಭಾಗದಲ್ಲಿ ನಲ್ಲಿ ನೀರಿನ ಸಂಪರ್ಕ ಹೊಂದಿದ್ದ ಕುಟುಂಬ/ಮನೆಗಳ ಸಂಖ್ಯೆ


9.77 ಕೋಟಿ 2022ರ ಜುಲೈ 5ರ ಅಂತ್ಯಕ್ಕೆ ಗ್ರಾಮೀಣ ಭಾಗದಲ್ಲಿ ನಲ್ಲಿ ನೀರಿನ ಸಂಪರ್ಕ ಹೊಂದಿದ್ದ ಕುಟುಂಬ/ಮನೆಗಳ ಸಂಖ್ಯೆ

9.44 ಕೋಟಿ ಇನ್ನೂ ನಲ್ಲಿ ನೀರಿನ ಸಂಪರ್ಕ ಪಡೆಯಬೇಕಿರುವ ಗ್ರಾಮೀಣ ಭಾಗದ ಕುಟುಂಬ/ಮನೆಗಳ ಸಂಖ್ಯೆ

50.86% ನಲ್ಲಿ ಸಂಪರ್ಕ ಪಡೆದ ಗ್ರಾಮೀಣ ಪ್ರದೇಶದ ಕುಟುಂಬಗಳ ಪ್ರಮಾಣ

ಯೋಜನೆಯ ಪ್ರಗತಿ

- ದೇಶದ ಮೂರು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳು ಮಾತ್ರ ಶೇ 100ರಷ್ಟು ಗುರಿಯನ್ನು ಸಾಧಿಸಿವೆ. ಗೋವಾ, ಹರಿಯಾಣ ಮತ್ತು ತೆಲಂಗಾಣದಲ್ಲಿ ಗ್ರಾಮೀಣ ಪ್ರದೇಶದ ಎಲ್ಲಾ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲಾಗಿದೆ
- 13 ರಾಜ್ಯಗಳಲ್ಲಿ ಯೋಜನೆಯ ಪ್ರಗತಿ ಶೇ 50ರ ಗಡಿಯನ್ನೂ ಮುಟ್ಟಿಲ್ಲ. ಇವುಗಳಲ್ಲಿ ಮೂರು ರಾಜ್ಯಗಳಲ್ಲಿ ಯೋಜನೆಯನ್ನು ಶೇ 25ರಷ್ಟೂ ಅನುಷ್ಠಾನಕ್ಕೆ ತರಲು ಸಾಧ್ಯವಾಗಿಲ್ಲ. ಉತ್ತರ ಪ್ರದೇಶ (ಶೇ 14.43), ಜಾರ್ಖಂಡ್ (ಶೇ 21.21) ಮತ್ತು ಛತ್ತೀಸಗಡ (ಶೇ 24.05)ರಷ್ಟು ಮಾತ್ರ ಪ್ರಗತಿ ಸಾಧಿಸಿವೆ. ಯೋಜನೆ ಅನುಷ್ಠಾನದಲ್ಲಿ ಈ ರಾಜ್ಯಗಳು ತೀರಾ ಹಿಂದೆ ಉಳಿದಿವೆ
- ನಾಲ್ಕು ರಾಜ್ಯಗಳು ಶೇ 90ಕ್ಕಿಂತ ಹೆಚ್ಚು ಪ್ರಗತಿ ಸಾಧಿಸಿವೆ. ಪಂಜಾಬ್ (ಶೇ 99.75), ಗುಜರಾತ್ (ಶೇ 96.50), ಹಿಮಾಚಲ ಪ್ರದೇಶ (ಶೇ 96.50) ಮತ್ತು ಬಿಹಾರ (ಶೇ 92.78) ಯೋಜನೆಯ ಅನುಷ್ಠಾನದಲ್ಲಿ ಉತ್ತಮ ಪ್ರಗತಿ ಸಾಧಿಸಿವೆ



ಸಾಧಿಸಬೇಕಾದದ್ದು ಬಹಳಷ್ಟಿದೆ

ದೇಶದ ಒಟ್ಟು ಜಿಲ್ಲೆಗಳಲ್ಲಿ, ಗ್ರಾಮೀಣ ಭಾಗದ ಎಲ್ಲಾ ಮನೆಗಳಿಗೂ ನಲ್ಲಿ ನೀರಿನ ಸಂಪರ್ಕ ಹೊಂದಿರುವ ಜಿಲ್ಲೆಗಳ ಪ್ರಮಾಣ ಶೇ 14.30ರಷ್ಟು ಮಾತ್ರ. 755ರಲ್ಲಿ 108 ಜಿಲ್ಲೆಗಳು, ಶೇ 100ರಷ್ಟು ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ನೀಡಿರುವುದಾಗಿ ಘೋಷಿಸಿಕೊಂಡಿವೆ. ಇವುಗಳಲ್ಲಿ ಸರ್ಕಾರದಿಂದ ಪ್ರಮಾಣ ಪತ್ರ ಪಡೆದಿರುವ ಜಿಲ್ಲೆಯ ಸಂಖ್ಯೆ ಒಂದು ಮಾತ್ರ. ಇನ್ನೂ 647 ಜಿಲ್ಲೆಗಳು ಈ ಗುರಿಯನ್ನು ಸಾಧಿಸಬೇಕಿದೆ ಮತ್ತು ಇನ್ನೂ 754 ಜಿಲ್ಲೆಗಳಿಗೆ ಇಂತಹ ಪ್ರಮಾಣ ಪತ್ರ ದೊರೆಯಬೇಕಿದೆ.

ದೇಶದ ಗ್ರಾಮೀಣ ಪ್ರದೇಶ, ಗುಡ್ಡಗಾಡು ಪ್ರದೇಶ ಮತ್ತು ದಟ್ಟಾರಣ್ಯಗಳಲ್ಲಿ ಇರುವ 6.62 ಲಕ್ಷ ಗ್ರಾಮಗಳನ್ನು ಈ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. 2022ರ ಜುಲೈ 5ರ ಅಂತ್ಯದ ವೇಳೆಗೆ 1.50 ಲಕ್ಷ ಗ್ರಾಮಗಳಲ್ಲಿ ಮಾತ್ರ ಶೇ 100ರಷ್ಟು ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲಾಗಿದೆ. ಇನ್ನೂ 5.12 ಲಕ್ಷ ಗ್ರಾಮಗಳ ಎಲ್ಲಾ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸುವ ಕೆಲಸ ಆಗಬೇಕಿದೆ.


755 ಒಟ್ಟು ಜಿಲ್ಲೆಗಳು
108 ಶೇ 100ರಷ್ಟು ಮನೆಗಳಿಗೆ ನಲ್ಲಿ ಸಂಪರ್ಕ ಪಡೆದ ಜಿಲ್ಲೆಗಳು

7,226 ಒಟ್ಟು ತಾಲ್ಲೂಕುಗಳು
1,229 ಶೇ 100ರಷ್ಟು ಮನೆಗಳಿಗೆ ನಲ್ಲಿ ಸಂಪರ್ಕ ಪಡೆದ ತಾಲ್ಲೂಕುಗಳು

2.55 ಲಕ್ಷ ಒಟ್ಟು ಗ್ರಾಮ ಪಂಚಾಯಿತಿಗಳು
72,203 ಶೇ 100ರಷ್ಟು ಮನೆಗಳಿಗೆ ನಲ್ಲಿ ಸಂಪರ್ಕ ಪಡೆದ ಗ್ರಾಮ ಪಂಚಾಯಿತಿಗಳು

6.62 ಲಕ್ಷ ಒಟ್ಟು ಗ್ರಾಮಗಳು
1.50 ಲಕ್ಷ ಶೇ 100ರಷ್ಟು ಮನೆಗಳಿಗೆ ನಲ್ಲಿ ಸಂಪರ್ಕ ಪಡೆದ ಗ್ರಾಮಗಳು

ಕರ್ನಾಟಕ: ಅರ್ಧದಷ್ಟು ಮನೆಗಳಲ್ಲಿ ನಲ್ಲಿ ಸಂಪರ್ಕ ಇಲ್ಲ!



ರಾಜ್ಯದ ಒಟ್ಟು ಮನೆಗಳ ಪೈಕಿ ಶೇ 48.6ರಷ್ಟು ಮನೆಗಳು ಇನ್ನಷ್ಟೇ ನಲ್ಲಿ ಸಂಪರ್ಕಕ್ಕೆ ಒಳಪಡಬೇಕಿವೆ ಎಂದು ಜಲಜೀವನ್ ಮಿಷನ್ ಯೋಜನೆಯ ದತ್ತಾಂಶಗಳು ಹೇಳುತ್ತವೆ. 2022ರ ಜುಲೈ ಹೊತ್ತಿಗೆ 51.93 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ವಿಸ್ತರಣೆಯಾಗಿದೆ. ಯೋಜನೆ ಪೂರ್ಣಗೊಳ್ಳಲು ಬಾಕಿಯಿರುವ ಎರಡು ವರ್ಷಗಳಲ್ಲಿ ಸರಿಸುಮಾರು ಅರ್ಧದಷ್ಟು ಮನೆಗಳಿಗೆ ನಲ್ಲಿ ನೀರು ಪೂರೈಸುವ ಸವಾಲು ಸರ್ಕಾರದ ಮೇಲಿದೆ.

ಕರ್ನಾಟಕದ ಸ್ಥಿತಿಗತಿ

1.01 ಕೋಟಿ ಒಟ್ಟು ಕುಟುಂಬಗಳು

24.51 ಲಕ್ಷ 2019ರಲ್ಲಿ ನಲ್ಲಿ ಸಂಪರ್ಕ ಹೊಂದಿದ್ದ ಕುಟುಂಬಗಳ ಸಂಖ್ಯೆ

51.93 ಲಕ್ಷ 2022ರ ಜುಲೈವರೆಗೆ ನಲ್ಲಿ ಸಂಪರ್ಕ ಪಡೆದಿರುವ ಮನೆಗಳ ಸಂಖ್ಯೆ

49.24 ಲಕ್ಷ ನಲ್ಲಿ ಸಂಪರ್ಕಕ್ಕೆ ಒಳಪಡಬೇಕಿರುವ ಕುಟುಂಬಗಳ ಸಂಖ್ಯೆ

- ಕರ್ನಾಟಕದಲ್ಲಿ ಈವರೆಗೆ ಶೇ 51.33ರಷ್ಟು ಮನೆಗಳಿಗೆ ನಲ್ಲಿ ಸಂಪರ್ಕ ಒದಗಿಸಲಾಗಿದ್ದು, ಉತ್ತರ ಕರ್ನಾಟಕದ ಎರಡು ಜಿಲ್ಲೆಗಳು ಅಗ್ರ ಸ್ಥಾನದಲ್ಲಿವೆ
- ಎಲ್ಲ ಜಿಲ್ಲೆಗಳ ಪೈಕಿ ಗದಗ ಜಿಲ್ಲೆ ಮುಂಚೂಣಿಯಲ್ಲಿದ್ದು, ಇಲ್ಲಿ ಶೇ 96.92ರಷ್ಟು ಮನೆಗಳು ನಲ್ಲಿ ನೀರಿನ ಸಂಪರ್ಕಕ್ಕೆ ಒಳಪಟ್ಟಿವೆ
- ಎರಡನೇ ಸ್ಥಾನದಲ್ಲಿರುವ ಧಾರವಾಡ ಜಿಲ್ಲೆಯಲ್ಲಿ ಶೇ 92.83 ಮನೆಗಳು ಈ ಸೌಲಭ್ಯ ಪಡೆದಿವೆ. ಮಂಡ್ಯ, ಕೊಪ್ಪಳ, ದಕ್ಷಿಣ ಕನ್ನಡ ಮತ್ತು ಹಾವೇರಿ ಜಿಲ್ಲೆಗಳು ಶೇ 70ಕ್ಕೂ ಹೆಚ್ಚಿನ ಪ್ರಗತಿ ಸಾಧಿಸಿವೆ
- ಬೆಂಗಳೂರು ನಗರ ಹಾಗೂ ಗ್ರಾಮೀಣ ಜಿಲ್ಲೆಗಳು ಪಟ್ಟಿಯಲ್ಲಿ ಕೊನೆಯ ಎರಡು ಸ್ಥಾನಗಳಲ್ಲಿವೆ. ಬೆಂಗಳೂರು ನಗರ ಜಿಲ್ಲೆಗೆ ಹೊಂದಿಕೊಂಡಿರುವ ಗ್ರಾಮೀಣ ಪ್ರದೇಶಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗಿದ್ದು, ಇವು ನಲ್ಲಿ ನೀರಿನ ಸಂಪರ್ಕ ಪಡೆಯುವಲ್ಲಿ ಹಿಂದೆ ಬಿದ್ದಿವೆ

ಆಧಾರ: ಜಲ ಜೀವನ್ ಮಿಷನ್ ಡ್ಯಾಶ್‌ಬೋರ್ಡ್

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ
ಹೌದು 85%
ಅಲ್ಲ 15%

ವರ್ಗಾವಣೆ ಬೆದರಿಕೆಯ ಕುರಿತು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರ ಇತ್ತೀಚಿನ ಹೇಳಿಕೆಯಿಂದ, ಜನರಿಗೆ ಸಂಸ್ಥೆಗಳ ಮೇಲಿನ ನಂಬಿಕೆ ಕಡಿಮೆಯಾಗುತ್ತದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 166

ಸೀತೆ ರೂಪ ಧರಿಸಿದ ಸತಿ

ರಾಮನಿಗೆ ನಮಸ್ಕರಿಸಿದ ಪರಮೇಶ್ವರನ ವರ್ತನೆಯಿಂದ ಆಶ್ಚರ್ಯಗೊಂಡಿದ್ದ ಸತೀದೇವಿಗೆ ಶಿವನು, 'ನಾನು ಕೊಟ್ಟಿರುವ ವರದಂತೆ ನಮಸ್ಕಾರ ಮಾಡಿರುವೆ. ಇವರಿಬ್ಬರೂ ಸೂರ್ಯವಂಶದ ರಾಜಕುಮಾರರು. ದಶರಥರಾಜನ ಪುತ್ರರು, ಮಹಾವೀರರು, ವಿವೇಕಿಗಳು. ಈ ಸಹೋದರರ ಹೆಸರು ರಾಮ ಮತ್ತು ಲಕ್ಷ್ಮಣ. ಕಿರಿಯವನು ಲಕ್ಷ್ಮಣ, ಹಿರಿಯನಾದ ರಾಮನು ವಿಷ್ಣುವಿನ ಪೂರ್ಣ ಅವತಾರ. ರಾಮನು ಸತ್ಪುರುಷರನ್ನು ರಕ್ಷಿಸುವುದಕ್ಕಾಗಿ ಮತ್ತು ದುಷ್ಟರನ್ನು ಶಿಕ್ಷಿಸುವುದಕ್ಕಾಗಿ ಅವತರಿಸಿದ್ದಾನೆ' ಎಂದು ಅವರಿಬ್ಬರ ಹಿನ್ನೆಲೆ ತಿಳಿಸುತ್ತಾನೆ.


ಆದರೆ ಸತೀದೇವಿಗೆ ವಿಶ್ವಾಸವುಂಟಾಗಲಿಲ್ಲ. ಆಗ ಶಂಕರನು 'ಎಲೈ ದೇವಿ, ನಿನಗೆ ಇನ್ನೂ ನಂಬಿಕೆಯಿಲ್ಲದಿದ್ದರೆ, ವಟವೃಕ್ಷದ ಬಳಿಯಲ್ಲಿ ರಾಮನಿದ್ದಾನೆ. ಅವನನ್ನು ಪರೀಕ್ಷಿಸು' ಎಂದ. ಸತೀದೇವಿಯು ಅವನನ್ನು ಪರೀಕ್ಷಿಸಲು, ಸೀತೆಯ ರೂಪವನ್ನು ಧರಿಸಿದಳು. ರಾಮನು ನಿಜವಾಗಿಯೂ ಹರಿಯ ಅವತಾರವಾಗಿದ್ದರೆ ನನ್ನ ನಿಜರೂಪ ತಿಳಿಯುವನು ಎಂದು ಆಲೋಚಿಸಿದಳು.

ಸೀತೆಯ ರೂಪ ಧರಿಸಿ ಬಂದ ಸತೀದೇವಿಯನ್ನು ನೋಡಿ ರಾಮ ಚಕಿತನಾದ. ಸೀತೆಯ ರೂಪಧರಿಸಿ ಬಂದ ಸ್ತ್ರೀ ಯಾರೆಂದು ತಿಳಿಯಲು ಶಿವನಾಮವನ್ನು ಜಪಿಸಿದ. ಆಗ ಅವಳು ಸತೀದೇವಿ ಅನ್ನೋದು ತಿಳಿಯಿತು. ರಾಮ ಸೀತಾರೂಪಳಾದ ಸತೀದೇವಿಗೆ ನಮಸ್ಕರಿಸಿ, 'ಓ ಸತೀದೇವಿ ನಿನಗೆ ನಮಸ್ಕಾರ, ಶಂಕರನೆಲ್ಲಿ? ನಿನ್ನ ಪತಿಯನ್ನು ಬಿಟ್ಟು ಒಬ್ಬಳೇ ಏಕೆ ಈ ಅರಣ್ಯಕ್ಕೆ ಬಂದಿರುವೆ? ಸೀತಾರೂಪವನ್ನೇಕೆ ಧರಿಸಿರುವೆ?' ಎಂದು ಕೇಳಿದ.

ರಾಮನ ಮಾತುಗಳನ್ನು ಕೇಳಿ ಸತೀದೇವಿ ವಿಸ್ಮಯಗೊಂಡಳು. ರಾಮನು ಹರಿಯ ಅವತಾರ ಎಂದು ಶಿವನು ಹೇಳಿದುದು ಸತ್ಯವೆಂದು ತಿಳಿದುಕೊಂಡಳು. ರಾಮನು ವಿಷ್ಣುಸ್ವರೂಪನೆಂದು ತಿಳಿದ ನಂತರ ಸತೀದೇವಿಯು ಮನಸ್ಸಿನಲ್ಲಿ ಭಕ್ತಿಯಿಂದ ಶಿವನಾಮವನ್ನು ಸ್ಮರಿಸಿದಳು. ನಂತರ ತನ್ನ ನಿಜವಾದ ರೂಪವನ್ನು ಪ್ರಕಟಿಸಿ ರಾಮನಿಗೆ ಹೇಳಿದಳು: 'ಎಲೈ ರಾಮನೇ, ಸರ್ವತಂತ್ರ ಸ್ವತಂತ್ರನಾದ ಪರಮೇಶ್ವರ ಮತ್ತು ನಾನು ಭೂಮಿಯಲ್ಲಿ ಸಂಚರಿಸುತ್ತಾ ಈ ದಂಡಕಾರಣ್ಯಕ್ಕೆ ಬಂದೆವು. ಆಗ ನೀನು ಈ ಅರಣ್ಯದಲ್ಲಿ ಸೀತೆಯನ್ನು ಕಳೆದುಕೊಂಡು ವಿರಹಿಯಾಗಿ ಲಕ್ಷ್ಮಣನೊಡನೆ ಹುಡುಕುತ್ತಲಿದ್ದೆ. ಇಂತಹ ನಿನ್ನನ್ನು ಆ ಪರಮೇಶ್ವರನು ನೋಡಿದ. ಆಗ ಶಿವನು ನೀನು ವಿಷ್ಣುವಿನ ಅವತಾರವೆಂದು ನಿನ್ನನ್ನು ಹೊಗಳಿ ನಮಸ್ಕರಿಸಿ, ವಟವೃಕ್ಷದ ಮೂಲಕ್ಕೆ ತೆರಳಿದ. ನಿನ್ನನ್ನು ನೋಡಿ ನನ್ನ ಪತಿ ಶಿವನು ತುಂಬಾ ಆನಂದಪಟ್ಟ. ಸಾಕ್ಷಾತ್ ಹರಿಯನ್ನು ನೋಡಿದ್ದರೂ ಅವನು ಅಷ್ಟೊಂದು ಆನಂದಪಡುತ್ತಿರಲಿಲ್ಲ. ಅಷ್ಟು ಆನಂದಿಸಿದ. ಆದರೆ, ನೀನು ಹರಿಯ ಅವತಾರವೆಂದು ಹೇಳಿದ ಶಿವನ ಮಾತಿನಲ್ಲಿ ನನಗೆ ನಂಬಿಕೆ ಹುಟ್ಟಲಿಲ್ಲ. ಅದಕ್ಕಾಗಿ ಶಿವನಾಜ್ಞೆಯಂತೆ ನಾನು ನಿನ್ನನ್ನು ಪರೀಕ್ಷಿಸಿದೆ. ಈಗ ನೀನು ವಿಷ್ಣುವಿನ ಅವತಾರವೆಂಬುದು ನನಗೆ ಮನದಟ್ಟಾಯಿತು. ಜಗದೊಡೆಯನಾದ ಶಿವನು ಮಾನವರೂಪಿಯಾದ ನಿನ್ನನ್ನು ನಮಸ್ಕರಿಸಲು ಕಾರಣವೇನು? ನಿಜವಾದ ವಿಷಯವನ್ನು ಹೇಳಿ ನನ್ನ ಸಂಶಯವನ್ನು ಹೋಗಲಾಡಿಸು' ಎಂದು ಕೋರಿದಳು.

ಸತೀದೇವಿ ಹೇಳಿದ ಮಾತುಗಳನ್ನು ಕೇಳಿ ರಾಮನಿಗೆ ಸಂತೋಷವಾಯಿತು. ಅರಳಿದ ಕಣ್ಣಿನಿಂದ ಆನಂದಬಾಷ್ಪ ಸುರಿಸುತ್ತಾ, ತನ್ನ ಪ್ರಭುವಾದ ಶಂಕರನನ್ನು ಧ್ಯಾನಿಸಿದ. ಆಗ ಅವನಿಗೆ ಶಿವನಲ್ಲಿ ಹೆಚ್ಚಾದ ಭಕ್ತಿಯು ಪ್ರಾಪ್ತವಾಯಿತು. ಆದರೂ ರಾಮನು ಶಂಕರನ ಬಳಿಗೆ ಹೋಗದೆ, ಶಿವನ ಮಹಿಮೆಯನ್ನು ಹೊಗಳುತ್ತಾ ನಿಂತ. ನಂತರ ಸತೀದೇವಿಯ ಆಜ್ಞೆಯಂತೆ ಶಿವನು ತನಗೇಕೆ ನಮಸ್ಕರಿಸಿದ ಎಂಬ ವಿಷಯವನ್ನು ಹೇಳಲು ಉದ್ಯುಕ್ತನಾದ ಎಂಬಲ್ಲಿಗೆ ಶಿವಪುರಾಣದ ಸತೀಖಂಡದ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜುಲೈ 7, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಅಷ್ಟಮಿ ಗಂ. 19-29 ನಕ್ಷತ್ರ: ಹಸ್ತ ಗಂ. 12-20 ಯೋಗ: ಪರಿಘ ಗಂ. 10-38, ಕರಣ: ವಿಷ್ಟಿ ಗಂ. 07-44, ಮಿಥುನ ಮಾಸದ 22 ನೇ ದಿನ.
ರಾಹುಕಾಲ: ಮಧ್ಯಾಹ್ನ 01:30-03:00
ಸೂರ್ಯೋದಯ: 06-13 ಸೂರ್ಯಾಸ್ತ: 06-58 ಮುಸ್ಲಿಂ ದಿನಾಂಕ: 07 ಜುಲ್‌ಹಿಜಾ
ದಿನ ವಿಶೇಷ: ಖರ್ಚಿ ಪೂಜಾ (ತ್ರಿಪುರಾ)
ಅದೃಷ್ಟ ಸಂಖ್ಯೆ: 2, 10

ಮೇಷ: ಜಾಣತನದಿಂದ ಕೆಲಸ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುವಿರಿ. ಬಟ್ಟೆಯ ವ್ಯಾಪಾರದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಬಹುದು. ನಿಮ್ಮನ್ನು ಅವಲಂಬಿಸಿರುವವರನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಚ್ಚಲಿದೆ.

ವೃಷಭ: ಆತ್ಮೀಯರ ಮತ್ತು ಬಂಧುವರ್ಗದವರ ಸಹಾಯ ಸ್ವೀಕಾರ ಅಗೌರವವಲ್ಲ. ಸಹಾಯ ಹಸ್ತ ಮೂಲಕ ಅಪೂರ್ಣ ಕೆಲಸ ಕಾರ್ಯಗಳು ಪೂರ್ಣಗೊಳ್ಳುವುದು. ಕ್ರೀಡಾಪಟುಗಳಿಗೆ ಪ್ರೋತ್ಸಾಹ ಲಭ್ಯವಾಗುತ್ತದೆ.

ಮಿಥುನ: ನಿಯಮ ಉಲ್ಲಂಘಿಸುವುದು, ಇಂಥ ಧೋರಣೆ ಮತ್ತು ದಬ್ಬಾಳಿಕೆ ನಡೆಸುವ ನಿಮ್ಮ ರೀತಿ ನೀತಿ ಬದಲಿಸಿಕೊಳ್ಳುವ ಹಾದಿ ಹುಡುಕಿಕೊಳ್ಳಿರಿ. ಸೋದರಿಯ ವಿಷಯದಲ್ಲಿ ಅನುಕಂಪ ಮೂಡುವುದು.

ಕರ್ಕಾಟಕ: ಇಂದು ನೀವು ಆಧ್ಯಾತ್ಮದತ್ತ ವಾಲಲಿದ್ದೀರಿ. ಸಂಜೆ ಹೊತ್ತಿಗೆ ಹಳೆಯ ಸ್ನೇಹಿತರ ಸಂಪರ್ಕ ಆಗುವುದು. ಇಂದು ನಿಮ್ಮ ಗ್ರಹಗತಿಗಳು ಉತ್ತಮವಾಗಿದ್ದು ಅದೃಷ್ಟ ಹುಡುಕಿಕೊಂಡು ಬರಲಿದೆ.

ಸಿಂಹ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶಗಳು ದೊರೆಯಲಿದೆ. ಓದಿನಲ್ಲಿ ಅಪರಿಮಿತ ಆಸಕ್ತಿ. ಕಚೇರಿಯಲ್ಲಿ ನಿಮ್ಮ ಸಮಯ ವ್ಯರ್ಥವಾಗುವ ರೀತಿಯಲ್ಲಿ ಘಟನೆಗಳು ನಡೆಯುವುದು.

ಕನ್ಯಾ: ಹೊಸ ಜವಾಬ್ದಾರಿ ವಹಿಸಿಕೊಳ್ಳುವ ಮೊದಲು ಮಹಾಗಣಪತಿಯ ಸೇವೆ ಮಾಡಿರಿ. ಸಮಸ್ಯೆ ಹೆಚ್ಚುವುದಕ್ಕೆ ಮುನ್ನವೇ ಪರಿಹರಿಸಿಕೊಳ್ಳಿ. ಆಹಾರ ಪದಾರ್ಥ ಹಾಳು ಮಾಡುವುದು ಸರಿಯಲ್ಲ.

ತುಲಾ: ಯೋಗಾಸನ ಶಿಕ್ಷಕರಿಗೆ ಬೇಡಿಕೆ. ಹುಟ್ಟೂರಿನಲ್ಲಿ ಕೃಷಿ ಮಾಡುವ, ಕೃಷಿ ಭೂಮಿ ಖರೀದಿಸುವ ಆಲೋಚನೆ ನೆರವೇರುವುದು. ಮುದ ನೀಡುವ ಸಂಗತಿಗಳು ಜರುಗಲಿವೆ. ಔಷಧಿ ವ್ಯಾಪಾರಿಗಳಿಗೆ ಲಾಭ.

ವೃಶ್ಚಿಕ: ವ್ಯಾಪಾರ ವ್ಯವಹಾರದಲ್ಲಿ ಮೋಸ, ವಂಚಕರ ಕೈವಾಡ ಬೆಳಕಿಗೆ ಬರುತ್ತದೆ. ನೀವು ನಂಬಿರುವ ವ್ಯಕ್ತಿಗಳ ಬಗ್ಗೆ ನಿಲುವು ಬದಲಾಯಿಸಿಕೊಳ್ಳಬೇಕೆನಿಸಿದ್ದರೂ ಹಾಗೆ ಮಾಡದಿರಿ, ಅದು ಈದಿನಕ್ಕೆ ಫಲ ಪ್ರದವಲ್ಲ.

ಧನು: ಪೆಟ್ರೋಲ್ ವ್ಯಾಪಾರ ಉತ್ತಮ. ಆಸ್ತಿ ಖರೀದಿಸುವ ವಿಷಯದಲ್ಲಿ ನಿಧಾನ ಮಾಡಬೇಡಿ. ಈ ದಿನಕ್ಕೆ ನಿಮ್ಮ ಮೊದಲ ಆದ್ಯತೆ ನಿಮ್ಮ ಕೆಲಸಗಳ ಬಗೆಗೆ ಮಾತ್ರ ಇರಲಿ. ದೃಢ ನಿರ್ಧಾರ ಕೈಗೊಳ್ಳಲು ಹಿಂಜರಿಕೆ ಬೇಡ.

ಮಕರ: ಲೇವಾದೇವಿ ವ್ಯವಹಾರದವರಿಗೆ ನಂಬಿಕೆದ್ರೋಹದಂತ ಘಟನೆಗಳು ಅತ್ಯಂತ ವಿಶ್ವಾಸದ ವ್ಯಕ್ತಿಗಳಿಂದ ನಡೆಯಬಹುದು. ವಿದ್ಯಾರ್ಥಿಗಳ ಪ್ರಯತ್ನಕ್ಕೆ ಫಲ ಕಡಿಮೆ. ವಿಳಂಬವಾಗಿದ್ದ ವಿವಾಹ ವಿಷಯ ಮುಂದುವರಿಯಲಿದೆ.

ಕುಂಭ: ಆರಕ್ಷಕ ಸಿಬ್ಬಂದಿಗೆ ಕೆಲಸದ ಒತ್ತಡ, ಕೆಲಸದ ಸಮಯ ಹೆಚ್ಚಲಿದೆ. ಕೂಡಿಟ್ಟ ಠೇವಣಿ ಹಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗ. ಅನ್ನಪೂರ್ಣೇಶ್ವರಿಯನ್ನು ಪ್ರತಿ ನಿತ್ಯವು ಮನೆಯಲ್ಲಿ ಪೂಜಿಸುವುದರಿಂದ ಶುಭ.

ಮೀನ: ಕೆಲವು ವಿಷಯಗಳಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದಕ್ಕಿಂತ ಇತರರ ಸಲಹೆ ಪಡೆಯುವುದು ಕೊನೇಪಕ್ಷ ಕಾಲ ಅವಕಾಶವನ್ನು ತೆಗೆದುಕೊಂಡು ಯೋಚಿಸಿ ಉತ್ತರ ನೀಡುವುದು ಉತ್ತಮ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಸಂಬಂಧಗಳಲ್ಲಿ ತಾರತಮ್ಯ

ನೂರಾರು ಸರಕುಗಳು ಜೀವಿತದ ಸಂತೆಯಲಿ |
ಊರಿನವು, ಕೇರಿಯವು, ಮನೆಯವಾತ್ಮದವು ||
ಬೇರೆ ಬೇರೆ ಪುರುಳ್ಗೆ ಬೇರೆ ನೆಲೆ, ಬೇರೆ ಬೆಲೆ |
ತಾರತಮ್ಯವೆ ತತ್ವ – ಮಂಕುತಿಮ್ಮ || 666 ||

ಪದ-ಅರ್ಥ:
ಮನೆಯವಾತ್ಮದವು = ಮನೆಯವು + ಆತ್ಮದವು,
ಪುರುಳ್ಗೆ = ವಸ್ತುಗಳಿಗೆ, ಸತ್ವಕ್ಕೆ,
ತಾರತಮ್ಯ = ವ್ಯತ್ಯಾಸ, ವೈವಿಧ್ಯತೆ

ವಾಚ್ಯಾರ್ಥ: ಬದುಕಿನ ಸಂತೆಯಲ್ಲಿ ನೂರಾರು ವಸ್ತುಗಳು, ಸಂಬಂಧಗಳು. ಅವು ಊರಿನವು, ಕೇರಿಯವು, ಮನೆಯವು ಮತ್ತು ಆತ್ಮದವು. ಈ ಎಲ್ಲ ಸರಕುಗಳ ನೆಲೆ ಬೇರೆ, ಬೆಲೆ ಬೇರೆ. ಈ ತಾರತಮ್ಯವೇ ಬದುಕಿನ ತತ್ವ.

ವಿವರಣೆ: ಸಂತೆಯಲ್ಲಿ ಸಾವಿರಾರು ಸಾಮಾನುಗಳಿವೆ. ಎಲ್ಲವೂ ಒಂದೇ ಬೆಲೆಯನ್ನು ಹೊಂದಿಲ್ಲ. ಅವು ದೊರೆಯುವ ರೀತಿ, ಪ್ರಮಾಣ, ಜನರ ಅವಶ್ಯಕತೆ ಅನುಸರಿಸಿ ಅವುಗಳ ಬೆಲೆ ತೀರ್ಮಾನವಾಗುತ್ತದೆ. ಒಂದು ಕಡೆಗೆ ಬೆಲ್ಲ ಎಂಭತ್ತು ರೂಪಾಯಿಗೆ ಕಿಲೋಗ್ರಾಂ. ಮುಂದೆ ಅಂಥದೇ ಬೆಲ್ಲಕ್ಕೆ ಇನ್ನೂರು ರೂಪಾಯಿ! ಯಾಕೆಂದು ಕೇಳಿದರೆ ಇದು ಆರ್ಗಾನಿಕ್ ಬೆಲ್ಲ, ತಯಾರಿಸುವ ಖರ್ಚು ಹೆಚ್ಚು, ಆದ್ದರಿಂದ ಹೆಚ್ಚಿನ ಬೆಲೆ ಎಂದರು.

ಇವು ಬಳಸುವ ವಸ್ತುಗಳು. ಇನ್ನು ಬದುಕಿನಲ್ಲಿ ಬರುವ ಸಂಬಂಧಗಳೂ ಹಾಗೆಯೇ. ಇವು ಮನೆಯಿಂದ ಪ್ರಾರಂಭವಾಗುತ್ತವೆ. ತಾಯಿ, ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ, ಸೋದರಮಾವ, ಅತ್ತೆ, ಹೆಂಡತಿ ಹೀಗಾಗಿ ನೂರಾರು ಸಂಬಂಧಗಳು. ಪ್ರತಿಯೊಂದು ಜೀವಕ್ಕೆ ಎಲ್ಲ ಸಂಬಂಧಗಳು ಒಂದೇ ರೀತಿಯಾಗಿವೆಯೇ? ಎಲ್ಲವೂ ಅಷ್ಟೇ ತೀವ್ರತೆಯ ಬಂಧಗಳೇ? ಇಲ್ಲ. ಹಾಗಿರುವುದೂ ಸಾಧ್ಯವಿಲ್ಲ. ಈ ವೃತ್ತದ ನಂತರ ಬರುವುವು ಕೇರಿಯ ಸಂಬಂಧಗಳು, ಆಮೇಲೆ ಊರಿನ ಜನರ ಸಂಬಂಧಗಳು, ಹಾಗೆಯೇ ನಮ್ಮ ದೇಶ, ನಮ್ಮ ಗ್ರಹ ಹೀಗೆ ಸಂಬಂಧಗಳ ಸರಪಳಿ ಬೆಳೆಯುತ್ತಲೇ ಹೋಗುತ್ತದೆ. ವಿಶ್ವದಲ್ಲಿ ಬದುಕಿದ ನನಗೆ ಬೇರೆ ಬೇರೆ ಹಂತದಲ್ಲಿ ಬೇರೆ ಬೇರೆ ಸಂಬಂಧಗಳಿವೆ. ಕೆಲವು ಗಾಢವಾದವು, ಕೆಲವು ಅಳ್ಳಕವಾದವು.

ಸೀತಾ ದೇವಿಯನ್ನು ರಾಮ ಒಂದು ರೀತಿ ನೋಡಿದ, ಅವನಿಗೆ ಪ್ರಿಯಳಾದ ಪತ್ನಿ ಕಂಡಳು. ಲಕ್ಷ್ಮಣನೂ ಸೀತಾದೇವಿಯನ್ನು ಕಂಡ. ಅವನಿಗೆ ಆಕೆ ತಾಯಿಯಂತೆ ಕಂಡಳು. ದಶರಥ, ಕೌಸಲ್ಯೆ, ಜನಕರಾಜ, ಭರತ, ಶತ್ರುಘ್ನರು ಎಲ್ಲರೂ ಸೀತಾದೇವಿಯನ್ನು ಬೇರೆ ಬೇರೆ ರೀತಿಯಿಂದಲೇ ಕಂಡರು. ಹನುಮಂತನಿಗೆ ತಾಯಿಯನ್ನು ನೋಡಿದಂತೆ ಭಾಸವಾಯಿತು. ಲಕ್ಷ್ಮಣನಿಗೆ ಕಂಡ ಸೀತೆ ರಾಮನಿಗೆ ಕಾಣಲಿಲ್ಲ, ರಾಮನಿಗೆ ಕಂಡ ಸೀತೆ ರಾವಣನಿಗೆ ಕಾಣಲಿಲ್ಲ. ಆಕೆ ಎಲ್ಲರಿಗೂ ಬೇರೆ ಬೇರೆಯಾಗಿಯೇ ಕಂಡಳು. ನಮ್ಮ ಜೀವನದಲ್ಲಿಯೂ, ಪ್ರತಿಯೊಬ್ಬರೂ ಹೀಗೆ ಬೇರೆ ಬೇರೆಯವರಿಗೆ ಬೇರೆಯಾಗಿಯೇ ಕಾಣುತ್ತೇವೆ.

ಇವೆಲ್ಲ ಊರಿನ, ಕೇರಿಯ, ಮನೆಯ ಸಂಬಂಧಗಳಾದರೆ, ಇನ್ನೊಂದು ಆತ್ಮದ ಸಂಬಂಧವಿದೆ. ಅದು ಪರಮಾತ್ಮನೊಂದಿಗೆ. ಕರ್ಮಶೀಲನಾದ ವ್ಯಕ್ತಿಗೆ ದೇವರು 'ಸರ್ವಕರ್ತ'. ಭಕ್ತನಿಗೆ ಅವನು 'ರಸಸಾಗರ'. ಯೋಗಿಗೆ ಅವನು 'ಕೇವಲ'. ಜ್ಞಾನಿಗೆ ದೇವರು 'ಅನಂತ ಚೇತನ'. ಅವರವರಿಗೆ ಅವರವರ ಮಾರ್ಗಪ್ರಿಯ. ಮತ್ತೆ ಕೆಲವರಿಗೆ ದೇವರೆಂಬುದು ಮನುಷ್ಯನ ಕಲ್ಪನೆ. ಭಕ್ತನಿಗೆ ಭಗವಂತನ ರೂಪ, ಸಾಕಾರ ಬೇಕು. ಯೋಗಿಗೆ ನಿರ್ವಿಕಲ್ಪವೇ ಸರಿ. ಜ್ಞಾನಿಗೆ ಮಹಾಪ್ರಜ್ಞೆಯ ರೂಪ ಸರಿಹೊಂದುತ್ತದೆ. ಇವೆಲ್ಲ ದೇವನ ವಿಭಿನ್ನ ರೂಪಗಳೇ. ಆಯಾ ರೂಪಗಳಲ್ಲೇ ಅವರ ಸಾಧನೆ ಮುಂದುವರೆಯುತ್ತದೆ.


ಹೀಗೆ ಬದುಕಿನ ಸಂತೆಯಲ್ಲಿ ವಸ್ತುಗಳ, ಸಂಬಂಧಗಳ ಬೆಲೆಯಲ್ಲಿ, ನೆಲೆಯಲ್ಲಿ ವೈವಿಧ್ಯತೆ, ವ್ಯತ್ಯಾಸ ಕಾಣುತ್ತಲೇ ಹೋಗುತ್ತದೆ.

ಪದಬಂಧ 5011

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಾದ ಮಾಡಿದ್ದಕ್ಕೇ ಈ ಕಲಹ (3)
3.ಮಾನಿನಿಯ ಬಗ್ಗೆಯೇ ಸಂದೇಹವೇ? (3)
5.ಎಲ್ಲವೂ ನಶ್ವರ ಎನ್ನುತ್ತಿರುವ ಮನುಷ್ಯ! (2)
6.ಪೇರಿಸಿಕೊಂಡಿರುವ ಸಾಮಾನುಗಳ ದುರಸ್ತಿ! (3)
7.ಪ್ರಾಣಾಯಾಮ ಮಾಡುವಾಗ ಸಾವನ್ನು ತಂದವ (2)
9.ಜ್ವಾಲಾಮುಖಿಯಿಂದ ಹೊಮ್ಮುವ ಧಾತುಗಳ ರಸ (4)
10.ಈತ ಸಾಕ್ಷಾತ್ಕಾರ ಹೊಂದಿದವನು (4)
11.ತಟಕ್ಕನೆ ತಲುಪಿದ ತಟಾಕದ ದಡ (2)
13.ಪದ್ಮರಾಗಕ್ಕೆ ಅಂಟಿರುವ ಹೂವಿನ ಧೂಳು (3)
15.ಇಹದ ವಿರುದ್ಧ ಪದ (2)
16.ಭಾಗಲಬ್ಧ ಗೊತ್ತಿರದ ಜಿಪುಣ! (3)
17. ಮುಸಲ್ಮಾನ ಸಂತರ ಗೋರಿಯಿರುವ ಪವಿತ್ರ ಸ್ಥಳ (3)

ಮೇಲಿಂದ ಕೆಳಕ್ಕೆ
1.ವರ ನೀಡಿದ್ದು, ವಿಸ್ತಾರವಾದ ನಿರೂಪಣೆ! (3)
2.ಪ್ರಜ್ವಲಿಸುವ ಬೆಂಕಿಯಿದು (3)
3.ಜರ್ಜರಿತ ವಸ್ತುಗಳನ್ನು ಮಾರುವ ಅಂಗಡಿ (3)
4.ನಿಶ್ಚಿತಾರ್ಥಕ್ಕೆ ಹೋಗಬೇಕೆನ್ನುವ ಗೊತ್ತುವಳಿ! (3)
5.ಕಾಲುಗುರಿನಿಂದ ತಲೆಯ ಮುಡಿಯವರೆಗೆ (5)
8.ಮರದಲ್ಲಿರುವವನಿಗೆ ಚಿತ್ತವಿಕಲ್ಪವೇ? (5)
12.ಪಾಲು ಕೇಳಿ ಬಂದಿರುವ ಅಂಚೆ (3)
13.ಹಾಡು ಹೇಳಿ ಗಿಟ್ಟಿಸಿಕೊಂಡಿರುವ ಮೆಡಲು! (3)
14.ಗದ್ದಲ ನೋಡಿ ಬಿಗಿದ ಕಂಠ (3)
15.ಉತ್ತರದವರ ಮಂಚ (3)



5010ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗುಪ್ತಮಾರ್ಗ 3.ತೊಡಪು
5.ಮಜ್ಜನ 7.ಛಳುಕು
8.ವಿಶ್ವಾಸಘಾತ 11.ಕನಲು
12.ನಡುಕ 15.ಗುದಾಮು
16.ಹಣಾಹಣಿ

ಮೇಲಿಂದ ಕೆಳಕ್ಕೆ:
1.ಗುಲಾಮ 2.ರತ್ನ
3.ತೊಡಕು 4.ಪುಡಿಗಾಸು
6.ನಧಾವಿ 7.ಛಡಸವಾಲು
9.ತಲ್ಲೀನ 10.ಹುಸಿನಗು
11.ಕದುಮು 13.ಕಲ್ಯಾಣಿ
14.ದಾಹ

ಸುಡೊಕು 5397

7		4		5				3
			1		9	6		5
		5		3				
2					4	1		9
9	7	1		8				
4			9			3		7
	4		3		7			
						7		
1	3			2			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5396 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಆರ್ಥಿಕ, ಸಾಂಖ್ಯಿಕ ನಿರ್ದೇಶನಾಲಯ: 2000ದಿಂದ ನೇಮಕ, ಬಡ್ತಿ ಪಡೆದವರ ವಿದ್ಯಾರ್ಹತೆ ಪರಿಶೀಲನೆ

‘ನಕಲಿ ಪದವಿ’ ಪತ್ತೆಗೆ ನಿವೃತ್ತ ಜಡ್ಜ್

• ರಾಜೇಶ್ ರೈ ಚಟ್ಲ

ಬೆಂಗಳೂರು: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿ ನೇಮಕಗೊಂಡ ಮತ್ತು ಮುಂಬಡ್ತಿ ಪಡೆದ ಅಧಿಕಾರಿ, ನೌಕರರ ವಿರುದ್ಧ ಚಾಟಿ ಬೀಸಲು ಮುಂದಾಗಿರುವ ರಾಜ್ಯ ಸರ್ಕಾರ, ಈ ಬಗ್ಗೆ ತನಿಖೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶ ಟಿ.ಎಚ್. ನಾರಾಯಣಗೌಡ ಅವರನ್ನು ನೇಮಿಸಿದೆ.

ನಿರ್ದೇಶನಾಲಯದ ನಿವೃತ್ತ ನಿರ್ದೇಶಕಿ ಸಿ.ಎಚ್. ವಸುಂಧರಾದೇವಿ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳದಲ್ಲಿ (ಎಸಿಬಿ) ದಾಖಲಾಗಿರುವ ಪ್ರಕರಣದ ಆಂತರಿಕ ವಿಚಾರಣೆ ಮತ್ತು ಇದೇ ನಿರ್ದೇಶನಾಲಯದಲ್ಲಿ 2000ದ ಏಪ್ರಿಲ್ 1ರಿಂದ ಈವರೆಗೆ ನೇಮಕಗೊಂಡ ಮತ್ತು ಮುಂಬಡ್ತಿ ಪಡೆದ ಅಧಿಕಾರಿ, ನೌಕರರ ಪದವಿ ಪ್ರಮಾಣಪತ್ರಗಳನ್ನು ಪರಿಶೀಲಿಸಿ ಎರಡು ತಿಂಗಳ ಒಳಗೆ ವರದಿ ಸಲ್ಲಿಸುವಂತೆ ನಾರಾಯಣಗೌಡ ಅವರಿಗೆ ಸೂಚಿಸಲಾಗಿದೆ. ವಸುಂಧರಾದೇವಿ ಅವರ ವಿಚಾರಣೆ ಎಸಿಬಿಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿರುವುದರಿಂದ ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವರದಿ ನೀಡಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.



ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿದವರನ್ನು ಯಾವುದೇ ಕಾರಣಕ್ಕೂ ಸಹಿಸಲ್ಲ. ಅಂಥವರ ಪತ್ತೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರನ್ನು ನೇಮಿಸಿರುವುದು ಇದೇ ಮೊದಲು

ಮುನಿರತ್ನ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಸಾಂಖ್ಯಿಕ ಸಚಿವರು

ಮುಂಬಡ್ತಿ ನೀಡುವ ವೇಳೆ ಪದವಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಮಂಡ್ಯದ ಕೆ.ಆರ್. ರವೀಂದ್ರ ಎಂಬುವವರು ವಸುಂಧರಾದೇವಿ ವಿರುದ್ಧ ಎಸಿಬಿಗೆ ದೂರು ನೀಡಿದ್ದರು. ದೂರಿನಲ್ಲಿದ್ದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖೆಯ ವಿಜಿಲೆನ್ಸ್ ಅಧಿಕಾರಿಗಳಿಂದ ವಸುಂಧರಾದೇವಿ ಅವರನ್ನು ವಿಚಾರಣೆಗೆ ಒಳಪಡಿಸಿ, ಆರೋಪಗಳು ದೃಢಪಟ್ಟರೆ ಪ್ರಕರಣ ದಾಖಲಿಸಲು ಸರ್ಕಾರಿ ಆದೇಶ ಸಹಿತ ಎಸಿಬಿಗೆ ಕಳುಹಿಸುವಂತೆ ಎಸಿಬಿ ಪೊಲೀಸ್ ಮಹಾನಿರ್ದೇಶಕರು ಇಲಾಖೆಗೆ ಸೂಚಿಸಿದ್ದರು.

ಪ್ರಜಾವಾಣಿ ವಿಶೇಷ

ಎಸಿಬಿಗೆ ಸಲ್ಲಿಕೆಯಾದ ದೂರಿನ ಕುರಿತು ಸಮಜಾಯಿಷಿ ನೀಡುವಂತೆ ವಸುಂಧರಾದೇವಿ ಅವರಿಗೆ 2021 ಸೆ. 13ರಂದು ಸರ್ಕಾರ ನೋಟಿಸ್ ನೀಡಿತ್ತು. ನೋಟಿಸ್‌ಗೆ ಅ. 25ರಂದು ಉತ್ತರಿಸಿದ್ದ ಅವರು, ತಮ್ಮ ಮೇಲಿನ ಆರೋಪಗಳು ಸತ್ಯಕ್ಕೆ ದೂರವಾಗಿದೆ ಎಂದಿದ್ದರು. ಬಳಿಕ ಅವರು ನಿವೃತ್ತರಾಗಿದ್ದರು.

‘ವಸುಂಧರಾದೇವಿ ಅವರ ಸಮಜಾಯಿಷಿಗೆ ಅದೇ ಹಂತದ ಅಧಿಕಾರಿಯಾಗಿರುವ ನಾನು ಅಭಿಪ್ರಾಯ ನೀಡುವುದು ಸೂಕ್ತವಲ್ಲ. ದೂರು ಪರಿಶೀಲಿಸಿ ತೀರ್ಮಾನ ಕೊಡುವುದು ನಿರ್ದೇಶಕರ ಹೊಣೆ. ಸರ್ಕಾರ ತನಿಖೆ ನಡೆಸಿದರೆ ಇಲಾಖಾ ಕಡತವನ್ನು ಒಪ್ಪಿಸಲಾಗುವುದು’ ಎಂದು ಹಾಲಿ ನಿರ್ದೇಶಕ ಎನ್. ಮಾಧುರಾಮ್ ಅವರು ಇದೇ ಮಾರ್ಚ್ 14ರಂದು ಪತ್ರ ಬರೆದಿದ್ದರು.

‘ಆರೋಪಿ ಅಧಿಕಾರಿ, ಹಾಲಿನಿರ್ದೇಶಕರ ಅಭಿಪ್ರಾಯ ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆರೋಪ ಸರಿ ಎನಿಸುತ್ತಿದೆ. ಹೀಗಾಗಿ, ಆ ಪ್ರಕರಣ ಮತ್ತು ನಿರ್ದೇಶನಾಲಯದಲ್ಲಿ 2000 ಏ. 1 ನಂತರ ನೇಮಕ, ಬಡ್ತಿ ಪಡೆದ ಅಧಿಕಾರಿ, ನೌಕರರ ಪದವಿ ಪ್ರಮಾಣಪತ್ರಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ ವಿಚಾರಣೆ ನಡೆಸಲು ಸರ್ಕಾರ ನಿರ್ಧರಿಸಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಅಸ್ತಿತ್ವದಲ್ಲಿಲ್ಲದ ವಿವಿಗಳಿಂದ ಪದವಿ

ಇಲಾಖೆಯಲ್ಲಿ 70ಕ್ಕೂ ಹೆಚ್ಚು ಮಂದಿ ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿ ನೇಮಕ, ಬಡ್ತಿ ಪಡೆದಿರುವ ಅನುಮಾನವಿದೆ. ವಿವಿಧ ವೃಂದಗಳಲ್ಲಿ ಮುಂಬಡ್ತಿ ನೀಡಲು ನಡೆದ ಇಲಾಖಾ ಪದೋನ್ನತಿ ಸಮಿತಿ (ಡಿಪಿಸಿ) ಸಭೆಯಲ್ಲಿ ನೌಕರರ ವಿದ್ಯಾರ್ಹತೆ ಪರಿಶೀಲಿಸಿದಾಗ ಸಂದೇಹ ಬಂದಿದೆ. ಅಸ್ತಿತ್ವದಲ್ಲಿಯೇ ಇಲ್ಲದ ವಿಶ್ವವಿದ್ಯಾಲಯಗಳ ಹೆಸರಿನಲ್ಲಿ ನಕಲಿ ಪ್ರಮಾಣಪತ್ರದ ಸಲ್ಲಿಸಿದ ಪ್ರಕರಣಗಳು ಈಗಾಗಲೇ ಪತ್ತೆಯಾಗಿದ್ದು, ಕೆಲವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ಕೆಲವರು ಸಿಕ್ಕಿಬೀಳುವ ಭಯದಿಂದ ಬಡ್ತಿಯನ್ನೇ ನಿರಾಕರಿಸಿದ್ದಾರೆ ಎಂದು ಇಲಾಖೆಯ ಅಧಿಕಾರಿ ತಿಳಿಸಿದರು.



ಪ್ರಮಾಣ ವಚನ... ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆಯ್ಕೆಯಾದ ಮಧು ಮಾದೇಗೌಡ, ಬಸವರಾಜ ಹೊರಟ್ಟಿ, ಹಣಮಂತ ನಿರಾಣಿ, ಪ್ರಕಾಶ ಹುಕ್ಕೇರಿ ಬುಧವಾರ ವಿಧಾನಸೌಧದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ವಿಧಾನಪರಿಷತ್ ವಿರೋಧಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹಂಗಾಮಿ ಸಭಾಪತಿ ರಘುನಾಥ ರಾವ್ ಮಲ್ಕಾಪುರೆ, ಸಚಿವ ಹಾಗೂ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ಸಚಿವ ಹಾಲಪ್ಪ ಆಚಾರ್ ಇದ್ದರು

‘ನ್ಯಾಯಾಂಗದ ನೈತಿಕ ಸ್ಥೈರ್ಯ ಕುಗ್ಗಿಸಲು ಬಿಜೆಪಿ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯಾಂಗ ವ್ಯವಸ್ಥೆ ಹಾಗೂ ನ್ಯಾಯಮೂರ್ತಿಗಳ ಮೇಲೆ ಈಗ ನಡೆಯುತ್ತಿರುವ ದಾಳಿ ಕಾಕತಾಳೀಯವಲ್ಲ. ಇದು ಬಿಜೆಪಿಯ ಸಂಘಟಿತ ಹಾಗೂ ಪೂರ್ವನಿಯೋಜಿತ ದಾಳಿ. ಇದರ ಹಿಂದೆ ನ್ಯಾಯಾಂಗದ ನೈತಿಕ ಸ್ಥೈರ್ಯ ಕುಗ್ಗಿಸುವ, ಒತ್ತಡ ಹೇರುವ, ಬೆದರಿಸುವ ಉದ್ದೇಶ ಅಡಗಿದೆ’ ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಅಭಿಷೇಕ್ ಮನು ಸಿಂಘ್ವಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ, ತಮಗೆ ವರ್ಗಾವಣೆ ಬೆದರಿಕೆ ಇದ್ದು, ನಾನು ಕೇವಲ ಸಂವಿಧಾನಕ್ಕೆ ಮಾತ್ರ ಉತ್ತರದಾಯಿಯಾಗಿದ್ದೇನೆ ಎಂದು ನ್ಯಾಯಾಲಯದಲ್ಲಿ ತಿಳಿಸಿದ್ದಾರೆ. ಈ ವಿಚಾರಗಳನ್ನು ನಾವು ಇಲ್ಲಿಗೆ ಬಿಡುವುದಿಲ್ಲ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದು ಈ ಗಂಭೀರ ಆರೋಪದ ಬಗ್ಗೆ ತನಿಖೆ ನಡೆಸಲು ವಿಶೇಷ ಸಮಿತಿ ರಚಿಸುವಂತೆ ಕೋರುತ್ತೇವೆ’ ಎಂದರು.

‘ದೇಶದಲ್ಲಿನ ಇತ್ತೀಚಿನ ಬೆಳವಣಿಗೆಗಳು ಬಿಜೆಪಿ ಪಾಲಿಗೆ ಅನುಕೂಲಕರವಾಗಿಲ್ಲ. ಉದಯಪುರದಲ್ಲಿನ ಹತ್ಯೆ ಪ್ರಕರಣದಲ್ಲಿ ಪ್ರಚಾರ ಪಡೆಯಲು ಬಿಜೆಪಿ ಮುಂದಾಗಿತ್ತು, ಆದರೆ ಹಂತಕರು ಬಿಜೆಪಿಯ ಸದಸ್ಯರು ಎಂಬ ವಿಚಾರ ಬಯಲಾಗಿದೆ. ಅಲ್ಲದೆ, ಕಾಶ್ಮೀರದಲ್ಲಿ ಕುಖ್ಯಾತ ಲಷ್ಕರ್ ಉಗ್ರಗಾಮಿ ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಎಂಬುದೂ ಗೊತ್ತಾಗಿದೆ. ಇದೆಲ್ಲದರ ಮಧ್ಯೆ ಬಿಜೆಪಿ ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ನಕಲಿ ರಾಷ್ಟ್ರೀಯತೆಯನ್ನು ಪ್ರದರ್ಶಿಸುತ್ತಿದೆ’ ಎಂದರು.

‘ನೂಪುರ್ ಶರ್ಮಾ ಅವರ ಅರ್ಜಿಯನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್ ಪೀಠವು ಅದಕ್ಕೆ ಸೂಕ್ತ ಕಾರಣವನ್ನು ತಿಳಿಸಿತ್ತು. ಸುಪ್ರೀಂ ಕೋರ್ಟ್ ಈ ಪ್ರಕರಣದಲ್ಲಿ ಪ್ರಾಮಾಣಿಕ ಹಾಗೂ ನೇರ ನುಡಿಯಲ್ಲಿ ಟೀಕಿಸಿದಾಗ ಬಿಜೆಪಿ ಆತ್ಮಾವಲೋಕನ ಮಾಡಿಕೊಳ್ಳಬೇಕಿತ್ತು. ಆದರೆ, ಬಿಜೆಪಿ, ತನ್ನ ಪಕ್ಷದ ವಕ್ತಾರೆಯನ್ನು ಖಂಡಿಸಿದ ನ್ಯಾಯ ಪೀಠದ ವಿರುದ್ಧವೇ ದಾಳಿ ಮಾಡಿದೆ. 2014ರ ನಂತರ ನ್ಯಾಯಾಂಗ ವ್ಯವಸ್ಥೆ ಮೇಲೆ ಕಾಣದ ಶಕ್ತಿಗಳು ಈ ರೀತಿ ಒತ್ತಡ ಹೇರುತ್ತಿರುವುದು ಇದೇ ಮೊದಲಲ್ಲ’ ಎಂದರು.

‘ಹೈಕಮಾಂಡ್ ನಿರ್ದೇಶನದಂತೆ ನಡೆ’

ಬೆಂಗಳೂರು: ‘ನಾಯಕರು ಹುಟ್ಟುಹಬ್ಬ ಆಚರಿಸಿಕೊಳ್ಳುವುದರಲ್ಲಿ ಯಾವುದೇ ತಪ್ಪಿಲ್ಲ. ನಾನು ಪಕ್ಷದ ಹೈಕಮಾಂಡ್ ನಿರ್ದೇಶನದಂತೆ ನಡೆದುಕೊಳ್ಳುತ್ತಿದ್ದೇನೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬ (ಸಿದ್ದರಾಮೋತ್ಸವ) ಕಾರ್ಯಕ್ರಮದ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ವಿಚಾರವಾಗಿ ನನಗೆ ಯಾವುದೇ ಆಕ್ಷೇಪ ಇಲ್ಲ’ ಎಂದರು.

‘ಹುಟ್ಟುಹಬ್ಬ ಆಚರಿಸಿಕೊಳ್ಳುವುದು ಅವರವರ ವೈಯಕ್ತಿಕ ಹಾಗೂ ಅಭಿಮಾನಿಗಳ ಇಚ್ಛೆಗೆ ಬಿಟ್ಟಿದ್ದು. ಪಕ್ಷಕ್ಕೆ ಏನೆಲ್ಲಾ ಕಾರ್ಯಕ್ರಮಗಳು ಅನುಕೂಲವಾಗುತ್ತವೋ ಅದಕ್ಕೆ ಪಕ್ಷದ ಅಧ್ಯಕ್ಷನಾಗಿ ನಾನು ಬೆಂಬಲವಾಗಿ ನಿಲ್ಲುತ್ತೇನೆ’ ಎಂದರು.

‘ದೇಶದ 75ನೇ ಸ್ವಾತಂತ್ರ್ಯೋತ್ಸವ ಆಚರಣೆ ಅಂಗವಾಗಿ ಆಗಸ್ಟ್ 15ರಂದು ನಡೆಯಲಿರುವ ಪಕ್ಷದ ಕಾರ್ಯಕ್ರಮದ ಹೊಣೆಯನ್ನು ಸೋನಿಯಾ ಗಾಂಧಿ ನನಗೆ ವಹಿಸಿದ್ದಾರೆ. ಅಂದು ಕಾಂಗ್ರೆಸ್ ನಾಯಕರು, ಸುಮಾರು 1 ಲಕ್ಷ ಕಾರ್ಯಕರ್ತರು ಬೆಂಗಳೂರಿನಲ್ಲಿ ಮೆರವಣಿಗೆ ನಡೆಸಲಿದ್ದಾರೆ. ಜತೆಗೆ 75 ಕಿ. ಮೀ ಪಾದಯಾತ್ರೆ ಮಾಡಲಿದ್ದಾರೆ. ಎಲ್ಲ ಜಿಲ್ಲೆಗಳಲ್ಲಿಯೂ ಪಾದಯಾತ್ರೆ ನಡೆಸಲು ಸೂಚಿಸಲಾಗಿದೆ. ಈ ಬಗ್ಗೆ ಚರ್ಚಿಸಲು ಪಕ್ಷದ ನಾಯಕರ ಸಭೆ ಗುರುವಾರ (ಜುಲೈ 7) ನಡೆಯಲಿದೆ’ ಎಂದರು.

‘ದೇಶಕ್ಕೆ ಕಾಂಗ್ರೆಸ್ ಸ್ವಾತಂತ್ರ್ಯ ತಂದುಕೊಟ್ಟಿದೆ, ಸಂವಿಧಾನ ನೀಡಿದೆ. ಈ ಕಾರ್ಯಕ್ರಮದ ಆಚರಣೆ ನಮ್ಮ ಕರ್ತವ್ಯ. ಕಾರ್ಯಕ್ರಮದ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಪಾತ್ರವನ್ನು ಎಲ್ಲರಿಗೂ ತಿಳಿಸಬೇಕಿದೆ’ ಎಂದರು.

ಹಿಂದೂ–ಮುಸ್ಲಿಂ ಯುವಕರ ನಡುವೆ ಗಲಾಟೆ

ಕೆರೂರ್: ಮೂವರಿಗೆ ಚಾಕು ಇರಿತ

ಬಾಗಲಕೋಟೆ: ಬಾದಾಮಿ ತಾಲ್ಲೂಕಿನ ಕೆರೂರು ಬಸ್ ನಿಲ್ದಾಣದಲ್ಲಿ ಬುಧವಾರ ಸಂಜೆ ಹಿಂದೂ–ಮುಸ್ಲಿಂ ಯುವಕರ ನಡುವೆ ಗಲಾಟೆ ನಡೆದಿದ್ದು, ಮೂವರಿಗೆ ಗಾಯಗಳಾಗಿವೆ.

ಗಲಾಟೆಯಲ್ಲಿ ಅರುಣ್, ಲಕ್ಷ್ಮಣ ಎಂಬುವವರಿಗೆ ಚಾಕುವಿನಿಂದ ಇರಿಯಲಾಗಿದೆ. ಯಮನೂರ ಎಂಬುವವರು ಗಾಯಗೊಂಡಿದ್ದಾರೆ. ಅರುಣ, ಹಿಂದೂ ಜಾಗರಣ ವೇದಿಕೆ ಕಾರ್ಯದರ್ಶಿಯಾಗಿದ್ದಾರೆ. ಅವರನ್ನು ಬಾಗಲಕೋಟೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಮಾರುಕಟ್ಟೆ ಪ್ರದೇಶದಲ್ಲಿ ಬೈಕ್ ಹಾಗೂ ಎರಡು ತಳ್ಳುಗಾಡಿಗಳಿಗೆ ಬೆಂಕಿ ಹಚ್ಚಲಾಗಿದೆ. ಪರಿಸ್ಥಿತಿ ಬಿಗುವಿನಿಂದ ಕೂಡಿದೆ. ಪಟ್ಟಣದಲ್ಲಿ ಸೂಕ್ತ ಬಂದೋಬಸ್ತ್ ಒದಗಿಸಲಾಗಿದೆ ಎಂದು ಕೆರೂರು ಪ್ರಭಾರಿ ಪಿಎಸ್ಐ ವೈ.ಎಸ್. ಪಠಾಣ ‘ಪ್ರಜಾವಾಣಿ’ಗೆ ತಿಳಿಸಿದರು.



ಕೆರೂರಿನಲ್ಲಿ ಬುಧವಾರ ತಳ್ಳುಗಾಡಿಗಳಿಗೆ ಬೆಂಕಿ ಹಚ್ಚಿರುವುದು

ಜಿಲ್ಲಾ ಪೊಲೀಸ್ ವರಿಷ್ಠ ಜಯಪ್ರಕಾಶ, ಸಿಪಿಐ ಭೀಮಣ್ಣ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಿಷೇಧಾಜ್ಞೆ: ಶಾಲಾ–ಕಾಲೇಜುಗಳಿಗೆ ರಜೆ ಬಾದಾಮಿ ತಾಲ್ಲೂಕಿನ ಕೆರೂರು ಬಸ್ ನಿಲ್ದಾಣದಲ್ಲಿ ಬುಧವಾರ ಸಂಜೆ ಹಿಂದೂ–ಮುಸ್ಲಿಂ ಯುವಕರ ನಡುವೆ ನಡೆದಿರುವ ಗಲಾಟೆ ಹಿನ್ನೆಲೆಯಲ್ಲಿ ಬುಧವಾರ ಮಧ್ಯರಾತ್ರಿಯಿಂದ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಜು.6 ರಿಂದ ಜು.8ರ ರಾತ್ರಿ 8 ಗಂಟೆಯವರೆಗೆ ನಿಷೇಧಾಜ್ಞೆ ಜಾರಿಯಲ್ಲಿರಲಿದೆ ಎಂದು ಜಿಲ್ಲಾಧಿಕಾರಿ ಪಿ. ಸುನೀಲ್ ಕುಮಾರ ತಿಳಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗು ಗುರುವಾರ ಕೆರೂರಿನ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

10 ಲಕ್ಷ ಮಕ್ಕಳು ಶಾಲೆಯಿಂದ ಹೊರಗೆ!

ಒಂದನೇ ಪುಟದಿಂದ....

ಸಮೀಕ್ಷೆ ನಡೆದಿರುವುದು ಹೇಗೆ? ಗ್ರಾಮೀಣ ಭಾಗದಲ್ಲಿ ಶಾಲೆಗಳಿಂದ ಹೊರಗುಳಿದಿರುವ ಮಕ್ಕಳ ಬಗ್ಗೆ 2021ರ ಅಕ್ಟೋಬರ್‌ನಲ್ಲಿ ಮತ್ತು ಬಿಬಿಎಂಪಿ ಸೇರಿ ರಾಜ್ಯದ ಎಲ್ಲಾ 319 ನಗರ ಸ್ಥಳೀಯ ಸಂಸ್ಥೆಗಳಲ್ಲಿ 2022ರ ಮಾರ್ಚ್‌ನಲ್ಲಿ ಸಮೀಕ್ಷೆ ಪೂರ್ಣಗೊಳಿಸಲಾಗಿದೆ. ನಗರ ಪ್ರದೇಶಗಳಲ್ಲಿ ಶೇ 100ರಷ್ಟು ಸಮೀಕ್ಷೆ ನಡೆಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮೀಣ ಭಾಗದಲ್ಲಿ 6ರಿಂದ 14 ವರ್ಷದ 15,338 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇದೇ ವಯೋಮಾನದ 10 ಸಾವಿರ ಮಕ್ಕಳು ಶಾಲೆಗಳಲ್ಲಿ ಪ್ರವೇಶಾತಿಯನ್ನೇ ಪಡೆದಿಲ್ಲ. 3 ವರ್ಷದೊಳಗಿನ 4.54 ಲಕ್ಷ ಮಕ್ಕಳು ಹಾಗೂ 4ರಿಂದ 6 ವರ್ಷದ 5.33 ಲಕ್ಷ ಮಕ್ಕಳು ಅಂಗನವಾಡಿ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಕ್ಕಳ ಸಮೀಕ್ಷೆಯ ವಿವರ

ನಗರ ಪ್ರದೇಶ

- ಕುಟುಂಬಗಳ ಸಮೀಕ್ಷೆ: 33.42 ಲಕ್ಷ
- ಸಮೀಕ್ಷೆ ಶೇಕಡವಾರು 98.06
- ಗುರುತಿಸಲಾದ 18 ವರ್ಷದೊಳಗಿನ ಮಕ್ಕಳು: 13.73 ಲಕ್ಷ
- ಅಂಗನವಾಡಿಯಲ್ಲಿ ನೋಂದಾಯಿಸಿಕೊಳ್ಳದ 3 ವರ್ಷದೊಳಗಿನ ಮಕ್ಕಳು: 87,921
- ಅಂಗನವಾಡಿಗಳಲ್ಲಿ ನೋಂದಾಯಿಸಿಕೊಳ್ಳದ 4ರಿಂದ 6 ವರ್ಷದ ಮಕ್ಕಳು: 1.23 ಲಕ್ಷ
- ಶಾಲೆಗೆ ದಾಖಲಾದ 6ರಿಂದ 18 ವರ್ಷದ ಒಟ್ಟು ಮಕ್ಕಳು: 10.62 ಲಕ್ಷ
- ಶಾಲೆಯಿಂದ ಹೊರಗುಳಿದ 6ರಿಂದ 14 ವರ್ಷದ ಮಕ್ಕಳು: 2,798
- ದಾಖಲಾಗದ 6 ರಿಂದ 14 ವರ್ಷದ ಮಕ್ಕಳು: 3,225

ಗ್ರಾಮೀಣ ಪ್ರದೇಶ

- ಕುಟುಂಬಗಳ ಸಮೀಕ್ಷೆ: 84.02 ಲಕ್ಷ
- ಸಮೀಕ್ಷೆ ಶೇಕಡವಾರು: 100
- ಗುರುತಿಸಲಾದ 18 ವರ್ಷದೊಳಗಿನ ಮಕ್ಕಳು: 35.24 ಲಕ್ಷ
- ಅಂಗನವಾಡಿಗಳಲ್ಲಿ ನೋಂದಾಯಿಸಿಕೊಳ್ಳದ 3 ವರ್ಷದೊಳಗಿನ ಮಕ್ಕಳು: 93 ಸಾವಿರ
- ಅಂಗನವಾಡಿಗಳಲ್ಲಿ ನೋಂದಾಯಿಸಿಕೊಳ್ಳದ 4ರಿಂದ 6 ವರ್ಷದ ಮಕ್ಕಳು: 1.07 ಲಕ್ಷ
- ಶಾಲೆಗೆ ದಾಖಲಾತಿ ಪಡೆದ 6ರಿಂದ18 ವರ್ಷದ ಒಟ್ಟು ಮಕ್ಕಳು: 27.11 ಲಕ್ಷ
- ಶಾಲೆಯಿಂದ ಹೊರಗುಳಿದ 6ರಿಂದ 14 ವರ್ಷದ ಮಕ್ಕಳು: 10,378
- ದಾಖಲಾಗದ 6 ರಿಂದ 14 ವರ್ಷದ ಮಕ್ಕಳು: 5,248

ಬಿಬಿಎಂಪಿ


- ಕುಟುಂಬಗಳ ಸಮೀಕ್ಷೆ: 26.57 ಲಕ್ಷ
- ಸಮೀಕ್ಷೆ ಶೇಕಡವಾರು: 106
- ಗುರುತಿಸಲಾದ 18 ವರ್ಷದೊಳಗಿನ ಮಕ್ಕಳ ಸಂಖ್ಯೆ: 17.70 ಲಕ್ಷ
- ಅಂಗನವಾಡಿಗಳಲ್ಲಿ ನೋಂದಾಯಿಸಿಕೊಳ್ಳದ 3 ವರ್ಷದೊಳಗಿನ ಮಕ್ಕಳು: 2.73 ಲಕ್ಷ
- ಅಂಗನವಾಡಿಗಳಲ್ಲಿ ನೋಂದಾಯಿಸಿಕೊಳ್ಳದ 4ರಿಂದ 6 ವರ್ಷದ ಮಕ್ಕಳು: 3.02 ಲಕ್ಷ
- ಶಾಲೆಗೆ ದಾಖಲಾತಿ ಪಡೆದ 6ರಿಂದ 18 ವರ್ಷದ ಒಟ್ಟು ಮಕ್ಕಳು: 11.83 ಲಕ್ಷ
- ಶಾಲೆಯಿಂದ ಹೊರಗುಳಿದ 6ರಿಂದ 14 ವರ್ಷದ ಮಕ್ಕಳು: 2,162
- ದಾಖಲಾಗದ 6 ರಿಂದ 14 ವರ್ಷದ ಮಕ್ಕಳು: 1,545.

ಸಿದ್ದರಾಮಯ್ಯಗೆ ‘ಜಯದೇವಶ್ರೀ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ



ಶಂಕರಮೂರ್ತಿ



ಭಿಕ್ಷಾವರ್ತಿಮಠ



ಚೆನ್ನಮ್ಮ ಹಳ್ಳಿಕೇರಿ

ದಾವಣಗೆರೆ: ಜಯದೇವ ಮುರುಘರಾಜೇಂದ್ರ ಸ್ವಾಮೀಜಿ ಅವರ 65ನೇ ಸ್ಮರಣೋತ್ಸವದ ಅಂಗವಾಗಿ ನೀಡಲಾಗಿರುವ ‘ಜಯದೇವ ಶ್ರೀ ಪ್ರಶಸ್ತಿ’ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಲಾಗಿದೆ.

‘ಶೂನ್ಯಪೀಠ ಅಲ್ಲಮ ಪ್ರಶಸ್ತಿ’ಗೆ ವಿಧಾನಪರಿಷತ್ ಮಾಜಿ ಸಭಾಪತಿ ಡಿ.ಎಚ್. ಶಂಕರಮೂರ್ತಿ, ‘ಶೂನ್ಯಪೀಠ ಚನ್ನಬಸವ ಪ್ರಶಸ್ತಿ’ಗೆ ಹರಿಹರದ ಸಾಹಿತಿ ಪ್ರೊ.ಎಚ್.ಎ. ಭಿಕ್ಷಾವರ್ತಿಮಠ, ‘ಶೂನ್ಯಪೀಠ ಅಕ್ಕನಾಗಮ್ಮ ಪ್ರಶಸ್ತಿ’ಗೆ ಹಾವೇರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರ್ತಿ ಚೆನ್ನಮ್ಮ ಹಳ್ಳಿಕೇರಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮುರುಘಾ ಮಠದ ಶಾಖಾ ಮಠವಾದ ವಿರಕ್ತ ಮಠದ ಬಸವಪ್ರಭು ಸ್ವಾಮೀಜಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಜಯದೇವ ಶ್ರೀ’ ಹಾಗೂ ‘ಶೂನ್ಯಪೀಠ ಅಲ್ಲಮ ಪ್ರಭು’ ಪ್ರಶಸ್ತಿಗಳು ತಲಾ ₹ 50,000, ಚನ್ನಬಸವ ಹಾಗೂ ಅಕ್ಕನಾಗಮ್ಮ ಪ್ರಶಸ್ತಿಗಳು ತಲಾ ₹ 25,000 ನಗದು ಹಾಗೂ ಫಲಕ ಒಳಗೊಂಡಿರುತ್ತವೆ. ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಜುಲೈ 12ರಂದು ದಾವಣಗೆರೆಯಲ್ಲಿ ನಡೆಯುವ ಸಾಧಕರ ಸಮಾವೇಶದಲ್ಲಿ ಡಾ.ಶಿವಮೂರ್ತಿ ಮುರುಘಾ ಶರಣರು ಪ್ರಶಸ್ತಿ ಪ್ರದಾನ ಮಾಡುವರು ಎಂದು ಹೇಳಿದರು.

ಅಕ್ರಮ ಭೂ ಮಂಜೂರು: ತಹಶೀಲ್ದಾರ್ ವಿರುದ್ಧ ದೂರು

ಸಕಲೇಶಪುರ (ಹಾಸನ): ಮಾಜಿ ಸೈನಿಕರೊಬ್ಬರಿಗೆ ಸೇರಿದ್ದ 5.18 ಎಕರೆ ಜಮೀನನ್ನು ಅಕ್ರಮವಾಗಿ ಪರಭಾರೆ ಮಾಡಿರುವ ಪ್ರಕರಣದಲ್ಲಿ ತಹಶೀಲ್ದಾರ್ ಸೇರಿ ಕಂದಾಯ ಇಲಾಖೆಯ ಐವರು ಸಿಬ್ಬಂದಿ ಹಾಗೂ ಅಕ್ರಮ ಮಂಜೂರಾತಿ ಪಡೆದ ಇಬ್ಬರ ವಿರುದ್ಧ ಪ್ರಕರಣ ದಾಖಲಿಸುವಂತೆ ಉಪ ವಿಭಾಗಾಧಿಕಾರಿ ಪ್ರತೀಕ್ ಭಾಯಲ್ ಅರೇಹಳ್ಳಿ ಪೊಲೀಸರಿಗೆ ಸೂಚನೆ ನೀಡಿದ್ದಾರೆ. ‘ಬೇಲೂರು ತಾಲ್ಲೂಕಿನಲ್ಲಿ ನಡೆದ ಪ್ರಕರಣದ ವಿಚಾರಣೆ ನಡೆಸಿರುವ ಅವರು, ‘ಅಧಿಕಾರ ದುರುಪಯೋಗ ಮಾಡಿಕೊಂಡ ತಹಶೀಲ್ದಾರ್ ಯು.ಎಂ. ಮೋಹನ್‌ಕುಮಾರ್, ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿರುವ ಅರೇಹಳ್ಳಿ ಹೋಬಳಿ ಕಂದಾಯ ನಿರೀಕ್ಷಕ ಚಂದ್ರೇಗೌಡ, ಶಿರಸ್ತೇದಾರ ಬಿ.ಕೆ. ನಾಗರಾಜ್, ವಿಷಯ ನಿರ್ವಾಹಕ ರಾಜೇಶ್, ಭೂಮಾಪಕ ಕುಮಾರ್, ಅಕ್ರಮ ಮಂಜೂರಾತಿ ಪಡೆದಿರುವ ಪದ್ಮಾ ಹಾಗೂ ಅವರ ಪುತ್ರ ದಿನೇಶ್, ಬಗರ್ ಹುಕುಂ ಸಕ್ರಮ ಸಮಿತಿಯ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸಿ ವಿಚಾರಣೆ ನಡೆಸಬೇಕು’ ಎಂದು ಅವರು ನಿರ್ದೇಶನ ನೀಡಿದ್ದಾರೆ.

ಹೈಕೋರ್ಟ್ ಮೆಟ್ಟಿಲೇರಿದ ಟ್ವಿಟರ್ ಕಂಪನಿ

ಬೆಂಗಳೂರು: ‘ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆಗೆ ವಿರುದ್ಧವಾಗಿರುವ 1,400ಕ್ಕೂ ಹೆಚ್ಚು ಟ್ವಿಟರ್ ಖಾತೆಗಳನ್ನು ಬ್ಲಾಕ್ ಮಾಡಬೇಕು’ ಎಂದು ಕೇಂದ್ರ ಸರ್ಕಾರ ನೀಡಿರುವ ನೋಟಿಸ್‌ಗಳನ್ನು ಪ್ರಶ್ನಿಸಿ ‘ಟ್ವಿಟರ್’ ಕಂಪನಿ ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ದಾಖಲಿಸಿದೆ.

ಮಂಗಳವಾರ ಈ ಅರ್ಜಿ ದಾಖಲಿಸಿದ್ದು, ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. ‘ಐಟಿ ಕಾಯ್ದೆ ಕಲಂ 69ಎ ಅಡಿಯಲ್ಲಿ ಕೆಲವು ಖಾತೆಗಳನ್ನು ಸಂಪೂರ್ಣ ನಿರ್ಬಂಧಿಸುವಂತೆ ಕೇಂದ್ರ ಸರ್ಕಾರ 2021ರ ಫೆಬ್ರುವರಿ 2ರಿಂದ ಹಲವು ನೋಟಿಸ್‌ಗಳನ್ನು ನೀಡಿದೆ. ಇದು ಸಂವಿಧಾನದ ಅಡಿಯಲ್ಲಿ ಬಳಕೆದಾರರ ಹಕ್ಕುಗಳ ಉಲ್ಲಂಘನೆ’ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

ಟ್ವಿಟರ್ ಪರವಾಗಿ ಹೈಕೋರ್ಟ್ ವಕೀಲ ಮನು ಕುಲಕರ್ಣಿ ವಕಾಲತ್ತು ಸಲ್ಲಿಸಿದ್ದಾರೆ.

ಭೂಕುಸಿತ: ವ್ಯಕ್ತಿ ಸಾವು, ಮೂವರಿಗೆ ಗಾಯ

ಬಂಟ್ವಾಳ (ದಕ್ಷಿಣ ಕನ್ನಡ): ಪಂಜಿಕಲ್ಲು ಗ್ರಾಮದ ಮುಕ್ಕುಡದಲ್ಲಿ ಭೂಕುಸಿತ ಉಂಟಾಗಿ ಕೇರಳ ಮೂಲದ ಬಿಜು ಎಂಬ ಕಾರ್ಮಿಕ ಸಾವಿಗೀಡಾಗಿದ್ದಾರೆ. ಸಂತೋಷ್, ಜಾನಿ ಮತ್ತು ಬಾಬು ಗಂಭೀರ ಗಾಯಗೊಂಡಿದ್ದಾರೆ.

ಗ್ರಾಮಗಳ ಶಾಶ್ವತ ಸ್ಥಳಾಂತರವಿಲ್ಲ: ಸಿಎಂ

ಪ್ರಜಾವಾಣಿ ವಾರ್ತೆ

ಮೈಸೂರು: ‘ಪ್ರವಾಹಪೀಡಿತ ಗ್ರಾಮಗಳ ಶಾಶ್ವತ ಸ್ಥಳಾಂತರದ ಪ್ರಸ್ತಾವವಿಲ್ಲ. ಸಂತ್ರಸ್ತರಿಗೆ ಸಮೀಪದ ಎತ್ತರದ ಪ್ರದೇಶಗಳಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, ‘ಉತ್ತರ ಕರ್ನಾಟಕದಲ್ಲಿ 2009ರಲ್ಲಿ ಪ್ರವಾಹ ಉಂಟಾದಾಗ 60 ಹಳ್ಳಿಗಳನ್ನು ಸ್ಥಳಾಂತರಿಸಿ ಮನೆಗಳನ್ನೂ ಕಟ್ಟಿಕೊಡಲಾಗಿತ್ತು. ಪ್ರವಾಹ ಇಳಿಯುತ್ತಿದ್ದಂತೆಯೇ ಜನ ಮತ್ತೆ ಊರುಗಳಿಗೇ ಮರಳಿದ್ದರು. ಹೀಗಾಗಿ, ರಾಜ್ಯದಾದ್ಯಂತ ಪ್ರವಾಹಬಾಧಿತ ಸ್ಥಳಗಳನ್ನು ಗುರುತಿಸಿ ಸುತ್ತಮುತ್ತಲಿನ ಎತ್ತರದ ಜಾಗದಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಿ, ಸ್ಥಳಾಂತರಿಸಲಾಗುವುದು. ಅದಕ್ಕಾಗಿ ಸಮಗ್ರ ಸಮೀಕ್ಷೆ ನಡೆಸುವಂತೆ ಸೂಚಿಸಿದ್ದೇನೆ’ ಎಂದರು.

‘ಮುಂಗಾರು ಚುರುಕುಗೊಂಡಿರುವುದರಿಂದ ಜಿಲ್ಲಾಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಕಳೆದ ಬಾರಿ ಭೂಕುಸಿತವಾದ ಸ್ಥಳಗಳಲ್ಲಿ ಜನರನ್ನು ಸ್ಥಳಾಂತರಿಸಲು, ಸಂಪರ್ಕ ಕಡಿತಗೊಳ್ಳದಂತೆ ನೋಡಿಕೊಳ್ಳಲು ಸೂಚಿಸಿದ್ದೇನೆ. ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ತುರ್ತು ಸಂದರ್ಭಕ್ಕಾಗಿ ಜಿಲ್ಲಾಧಿಕಾರಿಗಳ ಖಾತೆಯಲ್ಲಿರುವ ತಲಾ ₹ 10 ಕೋಟಿಯನ್ನು ಬಳಸುವಂತೆ ಸೂಚಿಸಲಾಗಿದೆ. ಅವಶ್ಯವಿದ್ದರೆ ಹೆಚ್ಚಿನ ಹಣ ಬಿಡುಗಡೆ ಮಾಡಲಾಗುವುದು’ ಎಂದರು.

ಕಡಲ್ಕೊರೆತ ತಡೆಗೆ ಕ್ರಮ: ‘ಉತ್ತರಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಲ್ಲಿ ಮಳೆ ಹೆಚ್ಚಿದ್ದು, ಕಡಲ್ಕೊರೆತವೂ ಹೆಚ್ಚಾಗಿದೆ. ಮನೆಗಳಿಗೆ ಹಾನಿಯಾಗಿದ್ದರೆ ಸಂತ್ರಸ್ತರ ವಾಸ್ತವ್ಯಕ್ಕೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಕಡಲ್ಕೊರೆತ ತಡೆಯಲು ಶಾಶ್ವತ ಪರಿಹಾರಕ್ಕಾಗಿ ಹೊಸ ತಂತ್ರಜ್ಞಾನ ಬಳಕೆಗೆ ಕೆಲವರು ಮುಂದೆ ಬಂದಿದ್ದಾರೆ. ಪ್ರಾಯೋಗಿಕವಾಗಿ ಅದನ್ನು ಬಳಸಲಾಗುವುದು’ ಎಂದರು.

‘ಮೈಸೂರಿನ ಎನ್‌ಡಿಆರ್‌ಎಫ್ ತಂಡವನ್ನು ಕೊಡಗಿಗೆ ನಿಯೋಜಿಸಲಾಗಿದೆ. ಬೆಂಗಳೂರಿನಲ್ಲಿ ಮಳೆ ನೀರು ನಿರ್ವಹಣೆಗೆ ಕ್ರಮ ವಹಿಸಲಾಗಿದೆ. ಕೆರೆ ಅಂಗಳದಲ್ಲಿ ಮತ್ತು ಕೆರೆಯ ಮೇಲೆಯೇ ಮನೆ ಕಟ್ಟಿದ್ದಾರೆ. ನೀರು ಸರಾಗವಾಗಿ ಹರಿದು ಹೋಗುವಂತಾಗಲು ರಾಜಕಾಲುವೆ ದುರಸ್ತಿಗೆ ₹ 1,600 ಕೋಟಿ ಬಿಡುಗಡೆ ಮಾಡಲಾಗಿದೆ. ರಾಜಕಾಲುವೆ ಸರಿಪಡಿಸಿದರೆ ಬಹುತೇಕ ಸಮಸ್ಯೆಗಳು ಬಗೆಹರಿಯುತ್ತವೆ’ ಎಂದರು.

ಉತ್ತರ ಕನ್ನಡ: ತಗ್ಗಿದ ಮಳೆ ಅಬ್ಬರ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಬುಧವಾರ ಮಳೆಯ ಅಬ್ಬರ ತುಸು ತಗ್ಗಿತ್ತು. ಮುಂಡಗೋಡ ತಾಲ್ಲೂಕಿನಲ್ಲಿ ಬೆಳಿಗ್ಗೆಯಿಂದಲೇ ವರ್ಷಧಾರೆಯಾಯಿತು. ಉಳಿದಂತೆ, ಭಟ್ಕಳ, ಹೊನ್ನಾವರ, ಕುಮಟಾ ತಾಲ್ಲೂಕುಗಳಲ್ಲಿ ಜಿಟಿಜಿಟಿ ಮಳೆ ಮುಂದುವರಿಯಿತು. ಕಾರವಾರದಲ್ಲಿ ಮಧ್ಯಾಹ್ನದ ತನಕ ಮೋಡ ಮತ್ತು ಬಿಸಿಲಿನ ವಾತಾವರಣ ಕಂಡುಬಂತು. ಹೊನ್ನಾವರ ತಾಲ್ಲೂಕಿನ ಎರಡು ಕಡೆ ಮನೆಗಳ ಮೇಲೆ ತೆಂಗಿನ ಮರಗಳು ಬಿದ್ದಿವೆ. ಧಾರವಾಡ ವರದಿ: ಜಿಲ್ಲೆಯಲ್ಲಿ ಆಗಾಗ ರಭಸದ ಮಳೆ ಸುರಿಯಿತು. ಮಲೆನಾಡು ಭಾಗದಲ್ಲಿಯೂ ಮಳೆ ಮುಂದುವರಿದಿದೆ. ಹುಬ್ಬಳ್ಳಿ, ಕುಂದಗೋಳ ಹಾಗೂ ನವಲಗುಂದದಲ್ಲಿ ಸಾಧಾರಣ ಮಳೆಯಾಗಿದೆ.

ಗದಗ ಜಿಲ್ಲೆಯ ರೋಣ, ಮುಂಡರಗಿ, ಲಕ್ಷ್ಮೇಶ್ವರ, ಮುಳಗುಂದ ಭಾಗದಲ್ಲಿ ಜಿಟಿಜಿಟಿ ಮಳೆ ಆಗುತ್ತಿದೆ. ವಿಜಯನಗರ ಜಿಲ್ಲೆಯ ಹೊಸಪೇಟೆ, ಹರಪನಹಳ್ಳಿಯಲ್ಲಿ ಸಾಧಾರಣ ಮಳೆಯಾಗಿದೆ. ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯದ ಒಳಹರಿವು ಸತತ ಹೆಚ್ಚಾಗುತ್ತ ಇದೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	115.70	30,923	3,575
ಹಾರಂಗಿ	2,859	2,854.54	12,644	11,940
ಕಬಿನಿ	2284.00	2,262.70	14,700	1,000
ಹೇಮಾವತಿ	2,922	2,911.85	11,969	250
ಲಿಂಗನಮಕ್ಕಿ	1,819	1762.10	39,262.10	903
ಸೂಪಾ (ಮೀ)	564	523.50	34,849	-
ಮಾಣಿ	595	574.18	9,756	-
ತುಂಗಭದ್ರಾ	1,633	1,616.87	34,075	256
ಮಲಪ್ರಭಾ	2,079.50	2,053.50	1,664	194
ಘಟಪ್ರಭಾ	2,175	2,090.58	5,592	3,212
ಭದ್ರಾ	186	160.11	26,004	136
ಆಲಮಟ್ಟಿ (ಮೀ)	519.60	513.87	42,858	451
ನಾರಾಯಣಪುರ (ಮೀ)	492.25	491.02	691.25	78.74

* ನೆಲಮಟ್ಟದಿಂದ

ಮೈದುಂಬಿದ ದೂಧಗಂಗಾ,ಕೃಷ್ಣಾ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಕಳೆದ ಮೂರು ದಿನಗಳಿಂದ ಧಾರಾಕಾರ ಮಳೆ ಸುರಿಯುತ್ತಿದ್ದು, ತಾಲ್ಲೂಕಿನಲ್ಲಿ ಹರಿದ ದೂಧಗಂಗಾ ಹಾಗೂ ವೇದಗಂಗಾ ಉಪ ನದಿಗಳು ಮೈದುಂಬಿ ಹರಿಯುತ್ತಿದೆ.

ತಾಲ್ಲೂಕಿನ ಮಲಿಕವಾಡ ಬಳಿಯ ಕಿರು ಸೇತುವೆ ಮೇಲೆ ವೇದಗಂಗಾ ನೀರು ಬರಲು ಇನ್ನು ಒಂದು ಅಡಿ ಮಾತ್ರ ಬಾಕಿ ಇದೆ. ಕೃಷ್ಣಾ ನದಿಗೆ ರಾಜಾಪುರ ಬ್ಯಾರೇಜ್ ಬಳಿ 37,708 ಕ್ಯುಸೆಕ್ ನೀರು ಹರಿಯುತ್ತಿದೆ. ಇದಕ್ಕೆ ದೂಧಗಂಗಾ ನದಿಯ(10,560 ಕ್ಯುಸೆಕ್) ನೀರೂ ಸೇರಿದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬ್ಯಾರೇಜ್ ಬಳಿ ಈ ಎರಡೂ ನದಿಗಳು ಸೇರಿ 48,260 ಕ್ಯುಸೆಕ್ ನೀರು ಹರಿವು ಇದೆ. ಮಹಾರಾಷ್ಟ್ರದ ರಾಧಾನಗರಿ ಜಲಾಶಯದಿಂದ 12 ಸಾವಿರ ಕ್ಯುಸೆಕ್ ನೀರನ್ನು ಪಂಚಗಂಗಾ ನದಿಗೆ ಬಿಡಲಾಗುತ್ತಿದೆ. ನರಸಿಂಹವಾಡಿ ಎಂಬಲ್ಲಿ ಈ ನೀರು ಕೃಷ್ಣಾ ನದಿ ಸೇರುತ್ತದೆ. ಸಮಾಗಮಗೊಂಡ ನೀರು ಬುಧವಾರ ಬೆಳಿಗ್ಗೆ ರಾಜಾಪುರ ಬ್ಯಾರೇಜ್ ಮೇಲೆ ಹರಿದಿದೆ. ಕೊಂಕಣ ಪ್ರದೇಶದಲ್ಲಿ ಮಳೆಯ ಆರ್ಭಟ ತುಸು ಕಡಿಮೆ ಆಗಿದೆ.

ಚಿಕ್ಕಮಗಳೂರಿನಲ್ಲಿ ಬಿರುಸಿನ ಮಳೆ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬುಧವಾರ ಮಳೆಯ ಅಬ್ಬರ ಕಡಿಮೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆ ಬಿರುಸಾದ ಮಳೆ ಸುರಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ಮನೆಗಳು ಪೂರ್ಣ ಹಾಗೂ ಎಂಟು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಉಳ್ಳಾಲದ ಕುಂಪಲ ಮೂರುಕಟ್ಟೆಯಲ್ಲಿ ಮನೆ ಅಂಗಳದಲ್ಲಿದ್ದ ಬಾವಿ ಕಟ್ಟೆ ಸಹಿತ ಕುಸಿದಿದೆ. ರಾತ್ರಿ ವೇಳೆ ಘಟನೆ ನಡೆದಿದ್ದರಿಂದ ಅನಾಹುತ ತಪ್ಪಿದೆ. ಉಜಿರೆ ಕೊಯ್ಯೂರಿನಲ್ಲಿ ಶಾಲೆಯ ಕಾಂಪೌಂಡ್ ಕುಸಿದಿದೆ. ಉಡುಪಿ ಜಿಲ್ಲೆಯಲ್ಲಿ 27 ಮನೆಗಳಿಗೆ ಹಾಗೂ ಹೆಬ್ರಿ ತಾಲ್ಲೂಕಿನಲ್ಲಿ ಭತ್ತದ ಕೃಷಿಗೆ ಹಾನಿಯಾಗಿದೆ. ಕುಂದಾಪುರದಲ್ಲಿ ಮರಬಿದ್ದು ಇಬ್ಬರು ಗಾಯಗೊಂಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬೆಟ್ಟಗೆರೆ, ಬಣಕಲ್ ವಿಲೇಜ್, ಗೋಣಿಬೀಡಿನಲ್ಲಿ ಮೂರು ಮನೆಗಳ ಗೋಡೆಗಳು ಕುಸಿದಿವೆ.

ಮೂಡಿಗೆರೆ ತಾಲ್ಲೂಕಿನ ಮುಗ್ರಹಳ್ಳಿ, ಹಂತೂರು, ಉಗ್ಗೆಹಳ್ಳಿ, ಊರುಬಗೆ, ಫಲ್ಗುಣಿ ಭಾಗದಲ್ಲಿ ಗದ್ದೆ ನಾಟಿಗಾಗಿ ನಿರ್ಮಿಸಿದ್ದ ಸಸಿಮಡಿಗಳು ನೀರಿನಲ್ಲಿ ಕೊಚ್ಚಿ ಹೋಗಿವೆ. ಭತ್ತದ ಗದ್ದೆಗಳು ಜಲಾವೃತವಾಗಿದ್ದು, ಎಸ್ಟೇಟ್ ಕುಂದೂರು, ಬೀಜುವಳ್ಳಿ, ಜನ್ನಾಪುರ ಭಾಗಗಳಲ್ಲಿ ಶುಂಠಿಗದ್ದೆಗೆ ನೀರು ನುಗ್ಗಿ ಹಾನಿಯಾಗಿದೆ.

ಬಿಳಿಗಿರಿರಂಗನಬೆಟ್ಟ: ಬುಡಕಟ್ಟು ಸಮುದಾಯದ ಹೆಣ್ಣುಮಕ್ಕಳಿಗೆ ವಿತರಣೆ

‘ಮೈತ್ರಿ ಮುಟ್ಟಿನ ಕಪ್’ ಯೋಜನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಈ ಸಾಲಿನ ರಾಜ್ಯ ಬಜೆಟ್‌ನಲ್ಲಿ ಘೋಷಿಸಿದ್ದ, ಹದಿಹರೆಯದ ಹೆಣ್ಣುಮಕ್ಕಳಿಗೆ ಮುಟ್ಟಿನ ಕಪ್ (ಮೆನ್‌ಸ್ಟ್ರುವಲ್ ಕಪ್) ವಿತರಿಸುವ ‘ಮೈತ್ರಿ ಮುಟ್ಟಿನ ಕಪ್’ ಯೋಜನೆಗೆ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದಲ್ಲಿ ಬುಧವಾರ ಚಾಲನೆ ನೀಡಲಾಯಿತು.

ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಯೋಜನೆಯ ರಾಯಭಾರಿಗಳಾದ ಚಿತ್ರ ನಟಿ ಅಮೃತ ಅಯ್ಯಂಗಾರ್ ಹಾಗೂ ಕ್ರಿಕೆಟ್ ಪಟು ವೇದಾ ಕೃಷ್ಣಮೂರ್ತಿ ಅವರು ಹೆಣ್ಣುಮಕ್ಕಳಿಗೆ ಮುಟ್ಟಿನ ಕಪ್ ವಿತರಿಸಿದರು.

ಡಾ.ಕೆ.ಸುಧಾಕರ್ ಮಾತನಾಡಿ, ‘ಚಾಮರಾಜನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದಿರುವ ಯೋಜನೆಯನ್ನು ಎಲ್ಲ ಜಿಲ್ಲೆಗಳಿಗೂ ವಿಸ್ತರಿಸುವ ಚಿಂತನೆ ಇದೆ’ ಎಂದರು.

‘ಮಾತೃ ಹೃದಯದ ಬಿಜೆಪಿ ಸರ್ಕಾರವು, ಹೆಣ್ಣು ಮಕ್ಕಳ ಆರೋಗ್ಯದ ವಿಚಾರದಲ್ಲಿ ತಂದೆ– ತಾಯಂದಿರಂತೆ ಯೋಚಿಸಿ ಯೋಜನೆ ಜಾರಿಗೊಳಿಸಿದೆ. ಮಹಿಳೆಯರಿಗಾಗಿ ಪ್ರತ್ಯೇಕ ಕ್ಲಿನಿಕ್‌ಗಳನ್ನು ಆರಂಭಿಸಲಾಗುವುದು’ ಎಂದರು.



ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದಲ್ಲಿ ನಡೆದ ಸಮಾರಂಭದಲ್ಲಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ವಿದ್ಯಾರ್ಥಿನಿಯೊಬ್ಬರಿಗೆ ಮುಟ್ಟಿನ ಕಪ್ ವಿತರಿಸಿದರು. ಯೋಜನೆಯ ರಾಯಭಾರಿಗಳಾದ ಅಮೃತ ಅಯ್ಯಂಗಾರ್, ವೇದಾ ಕೃಷ್ಣಮೂರ್ತಿ, ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಕೊಳ್ಳೇಗಾಲ ಶಾಸಕ ಎನ್.ಮಹೇಶ್ ಇದ್ದರು

ಸಚಿವ ಸೋಮಣ್ಣ ಮಾತನಾಡಿ, ‘ಋತುಚಕ್ರದ ಅವಧಿಯಲ್ಲಿ ಹೆಣ್ಣುಮಕ್ಕಳು ಅನುಭವಿಸುವ ನೋವನ್ನು ಅರ್ಥ ಮಾಡಿಕೊಂಡು ಸುಧಾಕರ್ ಅವರು ಯೋಜನೆ ಜಾರಿಗೊಳಿಸಿದ್ದಾರೆ’ ಎಂದರು.

‘ಮಧ್ಯಪ್ರದೇಶದ ಮಾದರಿಯಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್‌ನಲ್ಲಿ ಘೋಷಿಸಿದ್ದರು.

ಆರೋಗ್ಯ ಇಲಾಖೆಯು ಎರಡೂ ಜಿಲ್ಲೆಗಳ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ 16ರಿಂದ 18 ವರ್ಷ ವಯಸ್ಸಿನ 10 ಸಾವಿರ ಹೆಣ್ಣುಮಕ್ಕಳಿಗೆ ಪರಿಸರ ಸ್ನೇಹಿಯಾದ, ಮರುಬಳಕೆ ಮಾಡಬಹುದಾದ ಕಪ್ ವಿತರಿಸಲಿದೆ. ಕಪ್ 8ರಿಂದ 10 ವರ್ಷಗಳ ಕಾಲ ಬಾಳಿಕೆ ಬರುತ್ತದೆ.

ಹೇಳಿಕೆ ಸಮರ್ಥಿಸಿಕೊಂಡ ಟಿಎಂಸಿ ಸಂಸದೆ, ಭೋಪಾಲ್ ಮತ್ತು ಕೋಲ್ಕತ್ತದಲ್ಲಿ ಎಫ್‌ಐಆರ್

ಮಹುವಾ ವಿರುದ್ಧ ಕ್ರಮಕ್ಕೆ ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಕಾಳಿ ಮಾತೆ ಕುರಿತು ಹೇಳಿಕೆ ನೀಡಿದ್ದ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಬಿಜೆಪಿ ಪಟ್ಟು ಹಿಡಿದಿದೆ. ರಾಜ್ಯದ ಹಲವೆಡೆ ಮಹುವಾ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಮಧ್ಯಪ್ರದೇಶದ ಭೋಪಾಲ್‌ನಲ್ಲೂ ಒಂದು ಎಫ್‌ಐಆರ್ ದಾಖಲಾಗಿದೆ.

'ಧರ್ಮದ ಬಗ್ಗೆ ಏನನ್ನೂ ಹೇಳಲು ಸಾಧ್ಯವಿಲ್ಲದ ಭಾರತದಲ್ಲಿ ಜೀವಿಸಲು ನಾನು ಬಯಸುವುದಿಲ್ಲ' ಎಂದು ಮಹುವಾ ಹೇಳಿದ್ದಾರೆ ಎಂದು ಎನ್‌ಡಿ. ಟಿ.ವಿ. ವರದಿ ಮಾಡಿದೆ.

'ನೂಪುರ್ ಶರ್ಮಾ ವಿರುದ್ಧ ತೆಗೆದುಕೊಂಡಂತಹ ಕ್ರಮವನ್ನೇ, ಮಹುವಾ ವಿರುದ್ಧವೂ ತೆಗೆದುಕೊಳ್ಳಬೇಕು. ಇನ್ನು ಹತ್ತು ದಿನಗಳಲ್ಲಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ನ್ಯಾಯಾಲಯದ ಮೆಟ್ಟಿಲೇರುತ್ತೇವೆ' ಎಂದು ಪಶ್ಚಿಮ ಬಂಗಾಳ ಬಿಜೆಪಿ ಶಾಸಕ ಮತ್ತು ನಾಯಕ ಸುವೇಂಧು ಅಧಿಕಾರಿ ಆಗ್ರಹಿಸಿದ್ದಾರೆ.



ನಾನು ಹೇಳಿದ ರೀತಿಯಲ್ಲಿ ಕಾಳಿಯನ್ನು ಪೂಜಿಸುವುದಿಲ್ಲ ಎಂಬುದರ ಬಗ್ಗೆ ಬಿಜೆಪಿ ಪ್ರಮಾಣ ಪತ್ರ ಸಲ್ಲಿಸಲಿ. ನಾನು ತಪ್ಪು ಎಂದು ಸಾಬೀತು ಮಾಡಲಿ
ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

ಬಿಜೆಪಿ ಆಗ್ರಹಕ್ಕೆ ಪ್ರತಿಕ್ರಿಯೆ ನೀಡಿರುವ ಮಹುವಾ, 'ಬಿಜೆಪಿಯೇ, ನಾನು ಕಾಳಿ ಭಕ್ತೆ. ನಿಮ್ಮ ಗೂಂಡಾಗಳು, ನಿಮ್ಮ ಅಜ್ಞಾನ, ನಿಮ್ಮ ಪೊಲೀಸ್, ನಿಮ್ಮ ಟ್ರೋಲ್‌ಗಳಿಗೆ ನಾನು ಹೆದರುವುದಿಲ್ಲ. ಸತ್ಯಕ್ಕೆ ಯಾವುದೇ ಬಲದ ಬೆಂಬಲ ಬೇಕಿಲ್ಲ' ಎಂದು ಟ್ವೀಟ್ ಮಾಡಿದ್ದಾರೆ. ಜತೆಗೆ, ಮಹುವಾ ಅವರು ಟ್ವಿಟರ್‌ನಲ್ಲಿ ಟಿಎಂಸಿಯ ಅಧಿಕೃತ ಖಾತೆಯನ್ನು ಅನುಸರಿಸುವುದನ್ನು ಕೈಬಿಟ್ಟಿದ್ದಾರೆ.

ಬಿಜೆಪಿ ನಾಯಕರಿಗೆ ಒಂದು ಕಾನೂನು, ಟಿಎಂಸಿ ನಾಯಕರಿಗೆ ಬೇರೆ ಕಾನೂನು ಇದೆಯೇ? ಮಹುವಾ ಅವರನ್ನು ತಕ್ಷಣವೇ ಬಂಧಿಸಬೇಕು
ಸುವೇಂಧು ಅಧಿಕಾರಿ, ಪಶ್ಚಿಮ ಬಂಗಾಳ ಬಿಜೆಪಿ ನಾಯಕ

ಮಹುವಾ ಮೇಲಿನ ದಾಳಿಯಿಂದ ದಿಗ್ಭ್ರಮೆಯಾಗಿದೆ. ಧರ್ಮದ ವಿಚಾರವಾಗಿ ಎಲ್ಲರಿಗೂ ಗೊತ್ತಿರುವುದನ್ನು ಬಹಿರಂಗವಾಗಿ ಹೇಳದ ಸ್ಥಿತಿಗೆ ಬಂದಿದ್ದೇವೆ
ಶಶಿ ತರೂರ್, ಕಾಂಗ್ರೆಸ್ ಸಂಸದ

ಮಣಿಮೇಕಲೈಗೆ ಸಂಕಷ್ಟ

- ನಿರ್ದೇಶಕಿ ಲೀನಾ ಮಣಿಮೇಕಲೈ ಮಾಡಿದ್ದ ಪೋಸ್ಟರ್‌ನ ಟ್ವೀಟ್ ಅನ್ನು ಟ್ವಿಟರ್ ಸಂಸ್ಥೆ ತನ್ನ ವೇದಿಕೆಯಿಂದ ತೆಗೆದುಹಾಕಿದೆ
- ಲೀನಾ ಅವರಿಗೆ ವಿಡಿಯೊ ಮೂಲಕ ಜೀವಬೆದರಿಕೆ ಹಾಕಿದ ತಮಿಳುನಾಡಿನ ಕೊಯಮತ್ತೂರಿನ ಶಕ್ತಿಸೇನಾ ಹಿಂದೂ ಮಕ್ಕಳ್ ಇಯಕ್ಕಂ ಸಂಘಟನೆಯ ಮುಖ್ಯಸ್ಥ ಸರಸ್ವತಿ ಅವರನ್ನು ಬುಧವಾರ ಬಂಧಿಸಲಾಗಿದೆ
- ಕಾಳಿ ಮಾತೆ ಕುರಿತ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸದಿರಲು ಕೆನಡಾದ ಅಗಾಖಾನ್ ಮ್ಯೂಸಿಯಂ ನಿರ್ಧರಿಸಿದೆ. ಹಿಂದೂ ಸಮುದಾಯದ ಸದಸ್ಯರ ಮನಸ್ಸಿಗೆ ನೋವು ಉಂಟು ಮಾಡಿದ್ದಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ ಎಂದು ಹೇಳಿದೆ
- ನಿರ್ದೇಶಕಿ ಲೀನಾ ಹಾಗೂ ಇತರರ ವಿರುದ್ಧ ಬಿಹಾರದ ಪ್ರತ್ಯೇಕ ಕೋರ್ಟ್‌ಗಳಲ್ಲಿ ಬುಧವಾರ ಪ್ರಕರಣಗಳು ದಾಖಲಾಗಿವೆ. ಪಟ್ನಾ ಹಾಗೂ ಮುಜಾಫ್ಫರ್‌ಪುರ ಕೋರ್ಟ್‌ಗಳಲ್ಲಿ ವಕೀಲರ ತಂಡಗಳು ದೂರು ನೀಡಿವೆ
- 'ನಿಮ್ಮ ತಲೆಯನ್ನು ನಿಮ್ಮ ದೇಹದಿಂದ ಬೇರ್ಪಡಿಸಬೇಕೇ' ಎಂದು ಅಯೋಧ್ಯೆಯ ದೇವಾಲಯವೊಂದರ ಅರ್ಚಕ ಮಹಾಂತ ರಾಜು ದಾಸ್ ಅವರು ಬೆದರಿಕೆ ಹಾಕಿದ್ದಾರೆ
- ತಮಿಳು ಚಿತ್ರ ನಿರ್ದೇಶಕ ಸುಸಿ ಗಣೇಶನ್ ಅವರ ಮೇಲೆ 'ಮೀಟೂ' ಆರೋಪ ಮಾಡಿದ್ದ ಲೀನಾ ಅವರನ್ನು ಮದ್ರಾಸ್ ಹೈಕೋರ್ಟ್ ಬುಧವಾರ ತರಾಟೆಗೆ ತೆಗೆದುಕೊಂಡಿದೆ

ಲಾಲು ಅನಾರೋಗ್ಯ: ಏರ್ ಆಂಬುಲೆನ್ಸ್ ಮೂಲಕ ದೆಹಲಿಗೆ

ಪಟ್ನಾ (ಪಿಟಿಐ): ಭುಜದ ಮೂಳೆ ಮುರಿತಕ್ಕೊಳಗಾಗಿ ಇಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿರುವ ಬಿಹಾರದ ಮಾಜಿ ಮುಖ್ಯಮಂತ್ರಿ, ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರನ್ನು ಏರ್ ಆಂಬುಲೆನ್ಸ್ ಮೂಲಕ ದೆಹಲಿಗೆ ಕರೆದೊಯ್ಯಲಾಗಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಲಾಲು ಅವರು ಚಿಕಿತ್ಸೆ ಪಡೆಯುತ್ತಿರುವ ಇಲ್ಲಿನ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. 'ಲಾಲುಜಿ ಅವರು ಆಸ್ಪತ್ರೆಗೆ ದಾಖಲಾದ ನಂತರ ಅವರ ಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಕಂಡುಬರುತ್ತಿದೆ. ಆದರೆ, ಉತ್ತಮ ಚಿಕಿತ್ಸೆಗಾಗಿ ದೆಹಲಿಗೆ ಕರೆದೊಯ್ಯುವುದು ಒಳ್ಳೆಯದು. ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಲಾಲು ಅವರು ನಿಯಮಾನುಸಾರ ವೈದ್ಯಕೀಯ ವೆಚ್ಚಕ್ಕಾಗಿ ರಾಜ್ಯ ಸರ್ಕಾರದಿಂದ ಸಹಾಯ ಪಡೆಯುತ್ತಾರೆ' ಎಂದು ಹೇಳಿದರು.



ಲಾಲು ಪ್ರಸಾದ್ ಅವರ ಆರೋಗ್ಯ ವಿಚಾರಿಸಿದ ಬಿಹಾರದ ಮುಖ್ಯಮಂತ್ರಿ ನಿತಿಶ್ ಕುಮಾರ್ – ಪಿಟಿಐ ಚಿತ್ರ

'ನನ್ನ ತಂದೆ ಆಸ್ಪತ್ರೆಗೆ ದಾಖಲಾದಾಗಿನಿಂದ ಮುಖ್ಯಮಂತ್ರಿಗಳು ಸಂಪರ್ಕದಲ್ಲಿದ್ದಾರೆ. ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ನರೇಂದ್ರ ಮೋದಿ ಅವರು ಕರೆ ಮಾಡಿ ತಂದೆಯವರ ಆರೋಗ್ಯ ವಿಚಾರಿಸಿದ್ದಾರೆ' ಎಂದು ಲಾಲು ಅವರ ಮಗ ತೇಜಸ್ವಿ ಹೇಳಿದರು.

'ಮೂತ್ರಪಿಂಡ ಕಸಿ ಮಾಡಲು ತಂದೆಯನ್ನು ಸಿಂಗಪುರಕ್ಕೆ ಕರೆದೊಯ್ಯುವ ಯೋಜನೆ ಇದೆ. ದೆಹಲಿಯ ವೈದ್ಯರ ಅಭಿಪ್ರಾಯವನ್ನುನಾವು ಅನುಸರಿಸುತ್ತೇವೆ' ಎಂದೂ ಹೇಳಿದರು.

ವೀರೇಂದ್ರ ಹೆಗ್ಗಡೆ, ಪಿ.ಟಿ. ಉಷಾ ರಾಜ್ಯಸಭೆಗೆ

ಒಂದನೇ ಪುಟದಿಂದ...

ಇವರನ್ನು ರಾಜ್ಯ ಸಭೆಗೆ ಆಯ್ಕೆ ಮಾಡಿರುವುದು ಸಂತಸ ತಂದಿದೆ' ಎಂದು ಮೋದಿ ಹೇಳಿದ್ದಾರೆ.

ಮೂಲತಃ ತಮಿಳುನಾಡಿನವರಾದ ಇಳಯರಾಜ ಅವರು ತಮಿಳು, ಕನ್ನಡ, ಮಲಯಾಳಂ, ತೆಲುಗು, ಹಿಂದಿ ಮತ್ತು ಮರಾಠಿ ಚಿತ್ರರಂಗಗಳಲ್ಲಿ ಸಂಗೀತ ಸಂಯೋಜನೆ, ಗಾಯನ ಮತ್ತು ಗೀತರಚನೆ ಮೂಲಕ ಭಾರತೀಯ ಚಿತ್ರರಂಗಕ್ಕೆ ಕೊಡುಗೆ ನೀಡಿದ್ದಾರೆ.

ತೆಲುಗಿನ ವಿ. ವಿಜಯೇಂದ್ರ ಪ್ರಸಾದ್ ಅವರು ಚಿತ್ರ ನಿರ್ಮಾಣದ ಜತೆಗೆ ಚಿತ್ರ ಸಾಹಿತಿಯಾಗಿಯೂ ಪ್ರಸಿದ್ಧರು. ಇವರು 'ಬಾಹುಬಲಿ' ಮತ್ತು 'ಆರ್‌ಆರ್‌ಆರ್' ಚಿತ್ರಗಳಿಗೆ ಬರೆದ ಕಥೆಗಳು ಸಿನಿಪ್ರಿಯರ ಮನ ಗೆಲ್ಲುವ ಜತೆಗೆ, ಗಳಿಕೆಯಲ್ಲೂ ಅಖಿಲ ಭಾರತ ಮಟ್ಟದಲ್ಲಿ ಯಶಸ್ವಿ ಚಿತ್ರಗಳೆನಿಸಿ ಹಲವು ದಾಖಲೆಗಳನ್ನು ಬರೆದಿವೆ.

ಬಿಜೆಪಿಯ 'ಮಿಷನ್ ದಕ್ಷಿಣ್'ನ ಭಾಗ

ದಕ್ಷಿಣ ಭಾರತವು ಬಿಜೆಪಿಯ ಮುಂದಿನ ಗುರಿ ಆಗಲಿದೆ ಎಂದು ಹೈದರಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಭಾನುವಾರ ಘೋಷಿಸಲಾಗಿದೆ. ದಕ್ಷಿಣದ ರಾಜ್ಯಗಳತ್ತ ಗಮನಹರಿಸುವುದು ಪಕ್ಷದ ಈಗಿನ ಕಾರ್ಯತಂತ್ರ. ಅದರ ಬೆನ್ನಲ್ಲೇ, ದಕ್ಷಿಣದ ರಾಜ್ಯಗಳ ನಾಲ್ವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಗಿದೆ. ಇದು ಬಿಜೆಪಿಯ 'ಮಿಷನ್ ದಕ್ಷಿಣ್'ನ ಭಾಗ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಆರಂಭವಾಗಿದೆ. ಮುಂದಿನ ವರ್ಷ ಕರ್ನಾಟಕ ಹಾಗೂ ತೆಲಂಗಾಣ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಈ ನಾಮನಿರ್ದೇಶನದ ಪರಿಣಾಮ ವಿಧಾನಸಭಾ ಚುನಾವಣೆಯ ಮೇಲಾಗಲಿದೆ ಎಂಬುದು ಬಿಜೆಪಿ ನಾಯಕರ ವಿಶ್ವಾಸ.

ಪನ್ನೀರ್ ಸೆಲ್ವಂ ವಿರುದ್ಧ ಪಳನಿಸ್ವಾಮಿಗೆ ಮೇಲುಗೈ

ನವದೆಹಲಿ (ಪಿಟಿಐ): ಪಕ್ಷದ ಏಕ ನಾಯಕತ್ವದ ವಿಷಯಕ್ಕೆ ಸಂಬಂಧಿಸಿದಂತೆ ಎಐಎಡಿಎಂಕೆಯ ಸಾಮಾನ್ಯ ಮತ್ತು ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಯಾವುದೇ ಅಘೋಷಿತ ನಿರ್ಣಯಗಳನ್ನು ಅಂಗೀಕರಿಸುವುದನ್ನು ನಿರ್ಬಂಧಿಸಿದ್ದ ಮದ್ರಾಸ್ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಬುಧವಾರ ತಡೆ ನೀಡಿದೆ.

ಮದ್ರಾಸ್‌ಹೈಕೋರ್ಟ್‌ಆದೇಶವನ್ನು ಪ್ರಶ್ನಿಸಿ ತಮಿಳುನಾಡು ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ ಪಳನಿಸ್ವಾಮಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಮತ್ತು ಕೃಷ್ಣ ಮುರಾರಿ ಅವರನ್ನೊಳಗೊಂಡ ರಜಾಕಾಲದ ಪೀಠವು ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದೆ.

'ಪ್ರತಿವಾದಿಗಳು ಎರಡು ವಾರಗಳಲ್ಲಿ ಪ್ರತಿಕ್ರಿಯೆ ನೀಡಬೇಕು. ಪ್ರಕರಣದ ವಾಸ್ತವಾಂಶಗಳು ವ್ಯಾಜ್ಯದ ವಿಷಯ ಮತ್ತು ಹೈಕೋರ್ಟ್ ಆದೇಶಗಳ ಸಂದರ್ಭಗಳ ದೃಷ್ಟಿಯಿಂದ ಜೂನ್ 23, 2022 ರ ಆದೇಶದ ಜಾರಿ ಮತ್ತು ಪರಿಣಾಮವನ್ನು ತಡೆಹಿಡಿಯುವುದು ಸೂಕ್ತವೆಂದು ಪರಿಗಣಿಸಲಾಗಿದೆ' ಎಂದು ಪೀಠ ಹೇಳಿದೆ.



ಪನ್ನೀರ್ ಸೆಲ್ವಂ(ಬಲ), ಪಳನಿಸ್ವಾಮಿ(ಬಲ): ಪಿಟಿಐ ಚಿತ್ರ

ಪ್ರಕರಣಕ್ಕೆ ಸಂಬಂಧಿಸಿದಂತೆ, ಮದ್ರಾಸ್ ಹೈಕೋರ್ಟ್ ವಿಭಾಗೀಯ ಪೀಠವು ಮಧ್ಯರಾತ್ರಿ ತುರ್ತು ವಿಚಾರಣೆ ನಡೆಸಿ ಜೂನ್ 23 ರಂದು ಬೆಳಿಗ್ಗೆ 4 ಗಂಟೆಗೆ ಆದೇಶವನ್ನು ನೀಡಿತ್ತು.

ಎಐಎಡಿಎಂಕೆಯ ಸಾಮಾನ್ಯ ಮತ್ತು ಕಾರ್ಯಕಾರಿ ಮಂಡಳಿಗಳ ಸಭೆಯಲ್ಲಿ ಯಾವುದೇ ಅಘೋಷಿತ ನಿರ್ಣಯಗಳನ್ನು ತೆಗೆದುಕೊಳ್ಳುವಂತಿಲ್ಲ ಎಂದು ತೀರ್ಪು ನೀಡಿದ್ದ ನ್ಯಾಯಾಲಯ, ಪಕ್ಷದ ಜಂಟಿ ಸಂಯೋಜಕ ಪಳನಿಸ್ವಾಮಿ ನೇತೃತ್ವದ ಬಣವು ಏಕ ನಾಯಕತ್ವದ ವಿಚಾರದ ಕುರಿತಂತೆ ಯಾವುದೇ ನಿರ್ಣಯ ಕೈಗೊಳ್ಳದಂತೆ ಸೂಚಿಸಿತ್ತು.

ಲಸಿಕೆ: ಡೋಸ್ ನಡುವಿನ ಅಂತರ 6 ತಿಂಗಳಿಗೆ ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆಯ ಮುನ್ನೆಚ್ಚರಿಕಾ ಡೋಸ್ ಪಡೆಯುವ ಅಂತರವನ್ನು 9 ತಿಂಗಳಿನಿಂದ(39 ವಾರ) 6 ತಿಂಗಳಿಗೆ (26 ವಾರ) ಇಳಿಕೆ ಮಾಡಿ ಕೇಂದ್ರ ಸರ್ಕಾರ ಆದೇಶಿಸಿದೆ.



ತಜ್ಞರ ಸಮಿತಿಯ ಶಿಫಾರಸು ಆಧರಿಸಿ, 18–59 ವರ್ಷದ ಎಲ್ಲ ಫಲಾನುಭವಿಗಳಿಗೆ ಎರಡನೇ ಡೋಸ್ ಪಡೆದ 6 ತಿಂಗಳು ಅಥವಾ 26 ವಾರಗಳ ಬಳಿಕ ಬೂಸ್ಟರ್ ಡೋಸ್ ಲಸಿಕೆ ನೀಡಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ.

'ಬದಲಾಗುತ್ತಿರುವ ವೈಜ್ಞಾನಿಕ ಪುರಾವೆಗಳು ಮತ್ತು ಜಾಗತಿಕ ಅಭ್ಯಾಸಗಳ ದೃಷ್ಟಿಯಿಂದ, ಲಸಿಕೆಗೆ ಸಂಬಂಧಿಸಿದ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ (ಎನ್‌ಟಿಎಜಿಐ)ಯ ತಾಂತ್ರಿಕ ಉಪ ಸ್ಥಾಯಿ ಸಮಿತಿಯು (ಎಸ್‌ಟಿಎಸ್‌ಸಿಐ) ಎರಡನೇ ಡೋಸ್ ಮತ್ತು ಮುನ್ನೆಚ್ಚರಿಕೆ ಡೋಸ್ ನಡುವಿನ ಅಂತರವನ್ನು ಪರಿಷ್ಕರಿಸಲು ಶಿಫಾರಸು ಮಾಡಿದೆ. 6 ತಿಂಗಳು ಅಥವಾ 26 ವಾರಗಳ ನಂತರ ಬೂಸ್ಟರ್ ಡೋಸ್ ನೀಡಲು ಎನ್‌ಟಿಎಜಿಐ ಅನುಮೋದಿಸಿದೆ' ಎಂದು ಸಚಿವಾಲಯ ಹೇಳಿದೆ.

'ಆದ್ದರಿಂದ 2 ನೇ ಡೋಸ್ ಪಡೆದು 6 ತಿಂಗಳು ಅಥವಾ 26 ವಾರ ಪೂರ್ಣಗೊಂಡಿರುವ 18-59 ವರ್ಷದ ಎಲ್ಲಾ ಫಲಾನುಭವಿಗಳಿಗೆ ಮುನ್ನೆಚ್ಚರಿಕೆ ಡೋಸ್ ಅನ್ನು ನೀಡಲು ನಿರ್ಧರಿಸಲಾಗಿದೆ' ಎಂದು ರಾಜ್ಯಗಳಿಗೆ ಬರೆದ ಪತ್ರದಲ್ಲಿ ಸಚಿವಾಲಯ ತಿಳಿಸಿದೆ.

60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಫಲಾನುಭವಿಗಳಿಗೆ ಹಾಗೂ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರಿಗೆ 2ನೇ ಡೋಸ್ ಪಡೆದು 6 ತಿಂಗಳು ಅಥವಾ 26 ವಾರಗಳು ಪೂರ್ಣಗೊಂಡ ಬಳಿಕ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ ಉಚಿತವಾಗಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡಲಾಗುವುದು ಎಂದೂ ಅದು ತಿಳಿಸಿದೆ.

ಅತ್ಯಾಚಾರ: ನಟ ವಿಜಯ್ ಜಾಮೀನು ರದ್ಧತಿಗೆ ನಕಾರ



ನವದೆಹಲಿ (ಪಿಟಿಐ): ಅತ್ಯಾಚಾರ ಪ್ರಕರಣದಲ್ಲಿ ಮಲಯಾಳಂ ಚಿತ್ರ ನಿರ್ಮಾಪಕ, ನಟ ವಿಜಯ್ ಬಾಬುಗೆ ಕೇರಳ ಹೈಕೋರ್ಟ್ ನೀಡಿರುವ ನಿರೀಕ್ಷಣಾ ಜಾಮೀನು ರದ್ದುಗೊಳಿಸಲು ನಿರಾಕರಿಸಿರುವ ಸುಪ್ರೀಂ ಕೋರ್ಟ್, ಅನುಮತಿ ಇಲ್ಲದೆ ಕೇರಳ ಬಿಟ್ಟು ತೆರಳದಂತೆ ನಟನಿಗೆ ಸೂಚನೆ ನೀಡಿದೆ.

ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ, ಜೆ.ಕೆ. ಮಹೇಶ್ವರಿ ಅವರನ್ನೊಳಗೊಂಡ ರಜಾಕಾಲದ ಪೀಠ, ಬಾಬುಗೆ ಹೈಕೋರ್ಟ್ ವಿಧಿಸಿದ್ದ ಜಾಮೀನು ಷರತ್ತುಗಳಲ್ಲಿ ಕೆಲ ಮಾರ್ಪಾಡುಗೊಳಿಸಿ, ಅಗತ್ಯವಿದ್ದರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಬಹುದು ಎಂದು ಹೇಳಿದೆ.



ಧಾರ್ಮಿಕ ವಿಧಿ ವಿಧಾನ ಗುಜರಾತ್‌ನ ಸೂರತ್‌ನಲ್ಲಿ ತಾಪಿ ನದಿಯ ಉದ್ಭವ ದಿನವೆಂದು ನಂಬಲಾದ ಆಷಾಢದ ಏಳನೇ ದಿನ ಬುಧವಾರ ಮಹಿಳೆಯರು ನದಿ ದಂಡೆಯಲ್ಲಿ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರು –ಪಿಟಿಐ ಚಿತ್ರ

ತಿರುಚಿದ ವಿಡಿಯೊ ಪ್ರಕರಣ ತಲೆಮರೆಸಿಕೊಂಡ ಟಿ.ವಿ ನಿರೂಪಕ

ರಾಯಪುರ: (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕುರಿತು ತಿರುಚಿದ ವಿಡಿಯೊ ಪ್ರಸಾರ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬುಧವಾರ ರಾಯಪುರ ಪೊಲೀಸರು ಗಾಜಿಯಾಬಾದ್‌ನಲ್ಲಿರುವ ಝೀ ಸುದ್ದಿ ವಾಹಿನಿ ನಿರೂಪಕ ರೋಹಿತ್ ರಂಜನ್ ನಿವಾಸಕ್ಕೆ ಭೇಟಿ ನೀಡಿದ ವೇಳೆ ಅವರು ಅಲ್ಲಿ ಇರಲಿಲ್ಲ. ತಲೆಮರೆಸಿಕೊಂಡಿರುವ ಅವರ ಪತ್ತೆಗೆ ಶೋಧ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

'ಪೊಲೀಸರು ಬೆಳಿಗ್ಗೆ 9 ಗಂಟೆಗೆ ಅವರ ಮನೆಗೆ ಭೇಟಿ ನೀಡಿದ ವೇಳೆ ಬೀಗ ಹಾಕಲಾಗಿತ್ತು. ಮಂಗಳವಾರವಷ್ಟೇ ರೋಹಿತ್ ಅವರನ್ನು ನೊಯ್ಡಾ ಪೊಲೀಸರು ಬಂಧಿಸಿ, ಬಳಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದರು. ಈ ವಿಷಯವನ್ನು ಅವರು ರಾಯಪುರ ಪೊಲೀಸರಿಗೆ ತಿಳಿಸಿರಲಿಲ್ಲ. ಸಂಜೆ ಪತ್ರಿಕಾ ಹೇಳಿಕೆಯಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ಹೇಳಿದ್ದರು' ಎಂದು ಪೊಲೀಸ್ ವರಿಷ್ಠಾಧಿಕಾರಿ ಪ್ರಶಾಂತ್ ಅಗರವಾಲ್ ತಿಳಿಸಿದ್ದಾರೆ.

ಈ ನಡುವೆ ತಿರುಚಿದ ವಿಡಿಯೊ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ರಾಜ್ಯಗಳಲ್ಲಿ ಎಫ್‌ಐಆರ್ ದಾಖಲಾಗಿರುವುದರಿಂದ ರಕ್ಷಣೆ ನೀಡುವಂತೆ ಕೋರಿ ರೋಹಿತ್ ರಂಜನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಗುರುವಾರ ನಡೆಸುವುದಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಜೆ.ಕೆ.ಮಹೇಶ್ವರಿ ಅವರ ರಜಾಕಾಲದ ಪೀಠ ತಿಳಿಸಿದೆ.

ರಾಹುಲ್ ಗಾಂಧಿ ಕುರಿತು ತಿರುಚಿದ ವಿಡಿಯೊ ಪ್ರಸಾರ ಮಾಡಿದ ಝೀ ಸುದ್ದಿ ವಾಹಿನಿ ಮತ್ತು ನಿರೂಪಕ ರೋಹಿತ್ ರಂಜನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಸುದ್ದಿ ಪ್ರಸಾರ ಮತ್ತು ಡಿಜಿಟಲ್ ಮಾನದಂಡಗಳ ಪ್ರಾಧಿಕಾರ (ಎನ್‌ಬಿಡಿಎಸ್‌ಎ)ಕ್ಕೆ ಕಾಂಗ್ರೆಸ್ ದೂರು ಸಲ್ಲಿಸಿದೆ.

ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆದಿರುವ ಕಾಂಗ್ರೆಸ್ ಸಂವಹನ ವಿಭಾಗದ ಮುಖ್ಯಸ್ಥ ಪವನ್ ಖೇರಾ, ಜುಲೈ 1 ರಂದು ವಾಹಿನಿ ಪ್ರಸಾರ ಮಾಡಿದ 'ಡಿಎನ್‌ಎ' ಹೆಸರಿನ ಕಾರ್ಯಕ್ರಮದಲ್ಲಿ ನಿರೂಪಕ ದುರುದ್ದೇಶಪೂರಿತವಾಗಿ ವಿಷಯವನ್ನು ಪ್ರಸ್ತಾಪಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಬಜರಂಗದಳದಿಂದ ಸಹಾಯವಾಣಿ

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ 'ಪೋಸ್ಟ್'ಗಾಗಿ ಇಸ್ಲಾಮಿಕ್ ಮೂಲಭೂತವಾದಿಗಳಿಂದ ಬೆದರಿಕೆ ಎದುರಿಸುವವರ ನೆರವಿಗಾಗಿ ಬಜರಂಗ ದಳವು ಸಹಾಯವಾಣಿ ಆರಂಭಿಸಿದೆ.

'ಟೇಲರ್ ಕನ್ಹಯ್ಯ ಲಾಲ್ ಹಾಗೂ ಉಮೇಶ್ ಕೊಲ್ಹೆ ಅವರ ಹತ್ಯೆ ಇಡೀ ಜಗತ್ತನ್ನೇ ಬೆಚ್ಚಿಬೀಳಿಸಿದೆ. ಮುಸ್ಲಿಂ ಮೂಲಭೂತವಾದದ ವಿಷ ದೇಶದೆಲ್ಲೆಡೆ ವೇಗವಾಗಿ ಪಸರಿಸುತ್ತಿದೆ' ಎಂದು ವಿಶ್ವ ಹಿಂದೂ ಪರಿಷತ್‌ನ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ ತಿಳಿಸಿದ್ದಾರೆ.

'ಹಿಂದೂ ಬಾಂಧವರು ತಮಗೆ ಬೆದರಿಕೆ ಕರೆಗಳು ಬಂದ ಕೂಡಲೇ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಬೇಕು. ಆರೋಪಿಗಳ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳದಿದ್ದರೆ, ಬಜರಂಗದಳದ ಕಾರ್ಯಕರ್ತರು ನೊಂದವರ ನೆರವಿಗೆ ಧಾವಿಸಲಿದ್ದಾರೆ. ಬಜರಂಗದಳ, ವಿಎಚ್‌ಪಿಯ ರಾಜ್ಯ ಘಟಕಗಳು ಶೀಘ್ರವೇ ಸಹಾಯವಾಣಿ ಸಂಖ್ಯೆ ಪ್ರಕಟಿಸಲಿವೆ' ಎಂದಿದ್ದಾರೆ.



ರಷ್ಯಾ ಪಡೆಗಳು ಬುಧವಾರ ನಡೆಸಿದ ಕ್ಷಿಪಣಿ ದಾಳಿಗೆ ಉಕ್ರೇನಿನ ಎರಡನೇ ದೊಡ್ಡ ನಗರ ಹಾರ್ಕಿವ್‌ನಲ್ಲಿರುವ ವಿಶ್ವವಿದ್ಯಾಲಯದ ಆಡಳಿತ ಕಚೇರಿ ಧ್ವಂಸವಾಗಿದೆ – ಎಎಫ್‌ಪಿ ಚಿತ್ರ

ರಷ್ಯಾ ಶೆಲ್ ದಾಳಿ: 12 ನಾಗರಿಕರು ಸಾವು

ಕ್ರಾಮರಸ್ಕ್ (ಉಕ್ರೇನ್)/ಬ್ರಸೆಲ್ಸ್/ಮಾಸ್ಕೊ (ಎಪಿ/ಎಎಫ್‌ಪಿ): ರಷ್ಯಾ ಪಡೆಗಳು ಉಕ್ರೇನ್ ಮೇಲೆ ದಾಳಿ ತೀವ್ರಗೊಳಿಸಿದ್ದು, ಕಳೆದ 24 ತಾಸುಗಳಲ್ಲಿ ನಾಗರಿಕರನ್ನು ಗುರಿಯಾಗಿಸಿ ನಡೆಸಿರುವ ಶೆಲ್ ದಾಳಿಯಲ್ಲಿ 12 ಮಂದಿ ನಾಗರಿಕರು ಮೃತಪಟ್ಟಿದ್ದಾರೆ. ಹಲವಾರು ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ಬುಧವಾರ ಬೆಳಿಗ್ಗೆ ಅವ್‌ದಿವ್ಕಾ, ಸ್ಲೊವಿಯಾನ್‌ಸ್ಕ್, ಕ್ರಸ್ನೊರಿವ್ಕಾ ಮತ್ತು ಕುರಖೋವ್‌ದಲ್ಲಿ ನಡೆದ ದಾಳಿಗಳಲ್ಲಿ ಈ ಸಾವು, ನೋವು ಸಂಭವಿಸಿದೆ. ಪ್ರತಿ ಅಪರಾಧಕ್ಕೂ ರಷ್ಯಾ ಸೈನಿಕರನ್ನು ಶಿಕ್ಷಿಸುತ್ತೇವೆ' ಎಂದು ಡೊನೆಟ್‌ಸ್ಕ್ ಗವರ್ನರ್ ಪಾವ್ಲೊ ಕಿರಿಲೆನ್‌ಕೊ ತಿಳಿಸಿದ್ದಾರೆ.

ಉಕ್ರೇನ್‌ನ ಎರಡನೇ ದೊಡ್ಡ ನಗರ ಹಾರ್ಕಿವ್ ಮೇಲೆ ತಡರಾತ್ರಿ ರಷ್ಯಾ ಪಡೆಗಳು ಕ್ಷಿಪಣಿ ದಾಳಿ ನಡೆಸಿವೆ. ವಿಶ್ವ ವಿದ್ಯಾಲಯದ ಆಡಳಿತ ಕಟ್ಟಡ ಧ್ವಂಸ ಗೊಂಡಿದೆ. ಮೂವರು ಗಾಯಗೊಂಡಿದ್ದಾರೆ ಎಂದು ಹಾರ್ಕಿವ್ ಗವರ್ನರ್ ಆಲೆಹ್ ಸಿನಿಹುವಾ ತಿಳಿಸಿದ್ದಾರೆ.

ಮುಖ್ಯಸಚೇತಕನನ್ನು ಬದಲಿಸಿದ ಶಿವಸೇನಾ

ಮುಂಬೈ (ಪಿಟಿಐ): 'ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾವು ಬುಧವಾರ ಲೋಕಸಭೆಯಲ್ಲಿ ಸಂಸದೆ ಭಾವನಾ ಗವಾಲಿ ಅವರ ಬದಲಿಗೆ ಸಂಸದ ರಾಜನ್ ವಿಚಾರೆ ಅವರನ್ನು ಮುಖ್ಯಸಚೇತಕರನ್ನಾಗಿ ನಾಮನಿರ್ದೇಶನ ಮಾಡಿದೆ' ಎಂದು ಪಕ್ಷದ ಮುಖಂಡ ಸಂಜಯ್ ರಾವುತ್ ಹೇಳಿದ್ದಾರೆ.



ಸಂಜಯ್ ರಾವುತ್

'ತಕ್ಷಣವೇ ಜಾರಿಗೆ ಬರುವಂತೆ ಶಿವಸೇನಾವು ರಾಜನ್ ಅವರನ್ನು ಮುಖ್ಯ ಸಚೇತಕರನ್ನಾಗಿ ನಾಮನಿರ್ದೇಶನ ಮಾಡುತ್ತಿದೆ' ಎಂದು ರಾವುತ್ ಅವರು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ್ ಜೋಷಿ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಜುಲೈ 11ರ ಬಳಿಕ ಸಂಪುಟ ವಿಸ್ತರಣೆ ಸಾಧ್ಯತೆ: ಶಿವಸೇನಾದ ಬಂಡಾಯ ಶಾಸಕರ ಅನರ್ಹತೆ ಮತ್ತು ಪಕ್ಷದ ವಿಪ್ ಕುರಿತು ಸ್ಪೀಕರ್ ನಿರ್ಧಾರದ ವಿರುದ್ಧದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಜುಲೈ 11ರಂದು ನಡೆಸಲಿದೆ.

ಈ ಕಾರಣಕ್ಕಾಗಿ ಮುಖ್ಯಮಂತ್ರಿ ಶಿಂಧೆ ನೇತೃತ್ವದ ಮಹಾರಾಷ್ಟ್ರ ಸರ್ಕಾರದ ಸಚಿವ ಸಂಪುಟದ ವಿಸ್ತರಣೆಯು ಜು.11ರ ಬಳಿಕ ನಡೆಯುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

'12 ಮಂದಿ ಶಿಂಧೆ ಬಣ ಸೇರಲಿದ್ದಾರೆ'

ಶಿವಸೇನಾದ 12ರಿಂದ 18 ಮಂದಿ ಸಂಸದರು ಶೀಘ್ರದಲ್ಲೇ ಏಕನಾಥ್ ಶಿಂಧೆ ಬಣ ಸೇರಲಿದ್ದಾರೆ ಎಂದು ಬಂಡಾಯ ಶಾಸಕ ಗುಲಾಬ್ ರಾವ್ ಪಾಟೀಲ್ ಹೇಳಿದ್ದಾರೆ.

ಎನ್‌ಡಿಎ ಕಡೆಯಿಂದ ಸ್ಪರ್ಧಿಸಿರುವ ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಬೆಂಬಲಿಸುವಂತೆ ಶಿವಸೇನಾ ಸಂಸದ ರಾಹುಲ್ ಶೆವಾಲೆ ಪಕ್ಷದ ಅಧ್ಯಕ್ಷ ಉದ್ಧವ್ ಠಾಕ್ರೆಗೆ ಕೋರಿದ ಮರುದಿನವೇ ಶಾಸಕರು ಈ ಹೇಳಿಕೆ ನೀಡಿದ್ದಾರೆ.

'ಶಿಂಧೆ ಬಣವು ಪಕ್ಷದ ವೈಭವವನ್ನು ಮರಳಿ ತರಲಿದೆ. 55 ಶಾಸಕರಲ್ಲಿ ನಮ್ಮ ಬಳಿ 40 ಮಂದಿ ಇದ್ದಾರೆ. 18 ಸಂಸದರಲ್ಲಿ 12 ಮಂದಿ ಕೂಡ ನಮ್ಮ ಬಣದಲ್ಲಿದ್ದಾರೆ. ಈಗ ಪಕ್ಷ ಯಾರಿಗೆ ಸೇರಬೇಕು ಹೇಳಿ. ನಾಲ್ವರು ಸಂಸದರನ್ನು ನಾನು ವೈಯಕ್ತಿಕವಾಗಿ ಭೇಟಿಯಾಗಿದ್ದೇನೆ ಎಂದು ಅವರು ಹೇಳಿದ್ದಾರೆ.

ನಾರಾಯಣ ಹೆಡ್ಕೆ ವಠಾರದ ಬಳಿ ಭೂಕುಸಿತ: ಮೂರು ಮಂದಿಗೆ ಗಾಯ

ಮುಂಬೈನಲ್ಲಿ ಭಾರಿ ಮಳೆ: ತಗ್ಗು ಪ್ರದೇಶ ಜಲಾವೃತ

ಮುಂಬೈ/ಡೆಹ್ರಾಡೂನ್ (ಪಿಟಿಐ): ಮುಂಬೈನಲ್ಲಿ ವಿಪರೀತ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ನಾರಾಯಣ ಹೆಡ್ಕೆ ವಠಾರದ ಬಳಿ ಬುಧವಾರ ಭೂಕುಸಿತ ಸಂಭವಿಸಿದ್ದು, ಮೂರು ಮಂದಿ ಗಾಯಗೊಂಡಿದ್ದಾರೆ. ಅಲ್ಲದೇ ಅನೇಕ ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದು, ಸಂಚಾರಕ್ಕೆ ಅಡಚಣೆಯುಂಟಾಗಿದೆ ಎಂದು ಬೃಹನ್ ಮುಂಬೈ ಪಾಲಿಕೆಯ ಅಧಿಕಾರಿಗಳು ತಿಳಿಸಿದರು.

'ಗಾಯಗೊಂಡವರನ್ನು ಸಿಯಾನ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಮೂರು ಕೊಠಡಿಗಳು ಹಾನಿಗೊಳಗಾಗಿವೆ. ಮುನ್ನೆಚ್ಚರಿಕೆಯ ಕ್ರಮವಾಗಿ ಅಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ' ಎಂದು ಅವರು ಹೇಳಿದರು.

ಮುಂಬೈನಲ್ಲಿ ಮುಂದಿನ 24 ಗಂಟೆಗಳಲ್ಲಿ ವಿಪರೀತ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಸೂಚನೆ ನೀಡಿದೆ.

'24 ಗಂಟೆಗಳಲ್ಲಿ ದಕ್ಷಿಣ ಮುಂಬೈನಲ್ಲಿ ಸರಾಸರಿ 107 ಮಿಮೀ ಮಳೆಯಾದರೆ, ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಕ್ರಮವಾಗಿ 172 ಮಿಮೀ ಮತ್ತು 152 ಮಿಮೀ ಮಳೆಯಾಗಿದೆ' ಎಂದು ಪೌರಾಡಳಿತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಮುಂಬೈನಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ರಸ್ತೆಗಳು ಜಲಾವೃತವಾಗಿದ್ದು, ವಾಹನ ಸಂಚಾರಕ್ಕೆ ಅಡಚಣೆಯುಂಟಾಯಿತು – ಪಿಟಿಐ ಚಿತ್ರ

ಉತ್ತರಾಖಂಡದಲ್ಲಿ ಭೂಕುಸಿತ; ಗ್ರಾಮ ಮುಖ್ಯಸ್ಥ ಸಾವು: ಉತ್ತರಾಖಂಡದ ತೆಹ್ರಿ ಜಿಲ್ಲೆಯಲ್ಲಿ ಬುಧವಾರ ಸುರಿದ ಭಾರಿ ಮಳೆಯಿಂದಾಗಿ ಭೂಕುಸಿತ ಸಂಭವಿಸಿದ್ದು, ತಾಟೋರ್ ಗ್ರಾಮಕ್ಕೆ ಹೊಸದಾಗಿ ಗ್ರಾಮ ಪ್ರಧಾನರಾಗಿ ಆಯ್ಕೆಯಾದ ವ್ಯಕ್ತಿಯೊಬ್ಬರು ಪ್ರಮಾಣವಚನ ಸ್ವೀಕರಿಸಲು ತೆರಳುತ್ತಿದ್ದಾಗ ಮೃತಪಟ್ಟಿದ್ದಾರೆ. ಹಾಗೂ ಜೊತೆಗಿದ್ದ ಮೂವರು ಗಾಯಗೊಂಡಿದ್ದಾರೆ.

ಗ್ರಾಮದ ಮುಖ್ಯಸ್ಥ ಪ್ರತಾಪ್ ಸಿಂಗ್ (50) ಸಾವೀಗೀಡಾದವರು. ಪ್ರತಾಪ್ ಸಿಂಗ್ ಹಾಗೂ ಅವರ ಕುಟುಂಬ ಘಟ್ಯೂಡ್‌ಗೆ ಹೋಗುತ್ತಿದ್ದಾಗ ಅವರ ಕಾರಿನ ಮೇಲೆ ಜೌನ್‌ಪುರ ಬ್ಲಾಕ್ ಬಳಿ ಬಂಡೆಯೊಂದು ಬಿದ್ದಿದೆ. ಘಟನೆಯಲ್ಲಿ ಪ್ರತಾಪ್ ಅವರು ಮೃತಪಟ್ಟಿದ್ದಾರೆ ಎಂದು ನ್ಯೂ ತೆಹ್ರಿಯ ಅಧಿಕಾರಿಗಳು ತಿಳಿಸಿದ್ದಾರೆ.

'ರಾಜ್ಯದ ಇತರ ಭಾಗಗಳಲ್ಲಿ ಕೂಡ ಭೂಕುಸಿತಗಳು ವರದಿಯಾಗಿದ್ದು, ರುದ್ರಪ್ರಯಾಗ ಜಿಲ್ಲೆಯ ಸಿರೋಬಗಢ ಬಳಿ ಬದರಿನಾಥ ಹೆದ್ದಾರಿಯು ಮುಚ್ಚಿಹೋಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೆದ್ದಾರಿಗೆ ಅಡ್ಡಿಯಾಗಿರುವ ಅವಶೇಷಗಳನ್ನು ತೆರವುಗೊಳಿಸಲಾಗುತ್ತಿದ್ದು, ಬದರಿನಾಥ ಮಾರ್ಗದ ಸಂಚಾರವನ್ನು ಬದಲಾಯಿಸಲಾಗಿದೆ ಎಂದು ರುದ್ರಪ್ರಯಾಗ ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ಪರಿಹಾರ್ ತಿಳಿಸಿದ್ದಾರೆ.

ಹಿಮಾಚಲ ಮಳೆಯಿಂದ 7 ಮಂದಿ ಸಾವು?

ಶಿಮ್ಲಾ (ಪಿಟಿಐ): 'ಹಿಮಾಚಲ ಪ್ರದೇಶದ ಕುಲು ಜಿಲ್ಲೆಯಲ್ಲಿ ಬುಧವಾರ ಸಂಭವಿಸಿದ ಭಾರಿ ಮಳೆ ಮತ್ತು ಹಠಾತ್ ಪ್ರವಾಹದಿಂದ ಉಂಟಾದ ಪ್ರತ್ಯೇಕ ಘಟನೆಗಳಲ್ಲಿ ಕನಿಷ್ಠ ಏಳು ಮಂದಿ ಸಾವಿಗೀಡಾಗಿರುವ ಶಂಕೆ ವ್ಯಕ್ತವಾಗಿದೆ' ಎಂದು ಕುಲುವಿನ ಪೊಲೀಸ್ ವರಿಷ್ಠಾಧಿಕಾರಿ ಗುರುದೇವ್ ಶರ್ಮಾ ತಿಳಿಸಿದ್ದಾರೆ.

'ಕುಲುವಿನ ಮಲಾನಾ ವಿದ್ಯುತ್ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ 25ಕ್ಕೂ ಹೆಚ್ಚು ನೌಕರರನ್ನು ಪ್ರವಾಹದಿಂದ ಹಾನಿಗೊಳಗಾದ ಕಟ್ಟಡದಿಂದ ರಕ್ಷಿಸಲಾಗಿದೆ. ಜಿಲ್ಲೆಯ ಪ್ರತ್ಯೇಕ ಭಾಗಗಳಲ್ಲಿ ಮೂವರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಶಂಕೆ ಇದೆ' ಎಂದು ಅವರು ಹೇಳಿದ್ದಾರೆ.



ಹಜ್ ಯಾತ್ರೆಗೆ ಈ ಬಾರಿ 10 ಲಕ್ಷ ಮಂದಿ

ಮೆಕ್ಕಾ (ಎಪಿ): ಮೆಕ್ಕಾದಲ್ಲಿ ಪವಿತ್ರ ಹಜ್ ಯಾತ್ರೆ ಗುರುವಾರದಿಂದ ಆರಂಭವಾಗಲಿದ್ದು, ಈಗಾಗಲೇ 10 ಲಕ್ಷ ಮಂದಿ ಅಲ್ಲಿ ಸೇರಿದ್ದಾರೆ. ಕೋವಿಡ್ ಪಿಡುಗಿನ ಬಳಿಕ ಇದೇ ಮೊದಲ ಬಾರಿಗೆ ಇಷ್ಟೊಂದು ಮಂದಿ ಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ.

ಈ ಬಾರಿ ವಿದೇಶಗಳಿಂದ 8.5 ಲಕ್ಷ ಮಂದಿಗೆ ಹಜ್ ಯಾತ್ರೆ ಕೈಗೊಳ್ಳುವುದಕ್ಕೆ ಅವಕಾಶ ನೀಡಲಾಗಿದೆ. ಯಾತ್ರೆಯಲ್ಲಿ ಪಾಲ್ಗೊಳ್ಳುವವರು 65 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಕೋವಿಡ್ ಲಸಿಕೆಯನ್ನು ಕಡ್ಡಾಯವಾಗಿ ಪಡೆದಿರಬೇಕು. ಪ್ರಯಾಣ ಮಾಡುವ ಸಮಯಕ್ಕೂ ಮುಂಚಿನ 72 ಗಂಟೆಗಳ ಒಳಗೆ ಕೋವಿಡ್ ಪರೀಕ್ಷೆ ಮಾಡಿಸಿ, ನೆಗೆಟಿವ್ ವರದಿಯನ್ನು ಪಡೆದಿರಬೇಕು ಎಂಬ ನಿಯಮ ರೂಪಿಸಲಾಗಿದೆ.

2019ರಲ್ಲಿ 25 ಲಕ್ಷ ಮಂದಿ ಹಜ್ ಯಾತ್ರೆ ಕೈಗೊಂಡಿದ್ದರು.

ಬ್ರಿಟನ್‌ನಲ್ಲಿ ಮುಂದುವರಿದ ಸಚಿವರ ರಾಜೀನಾಮೆ

ಇಕ್ಕಟ್ಟಿನಲ್ಲಿ ಜಾನ್ಸನ್ ನಾಯಕತ್ವ

ಲಂಡನ್ (ಪಿಟಿಐ/ರಾಯಿಟರ್ಸ್): ಬ್ರಿಟನ್‌ನಲ್ಲಿ ಸಚಿವರ ರಾಜೀನಾಮೆ ಪರ್ವ ಮುಂದುವರಿದಿದ್ದು, ರಿಷಿ ಸುನಕ್ ಸಹಿತ ಎಂಟು ಹಿರಿಯ ಸಚಿವರು ಮತ್ತು ಐವರು ಕಿರಿಯ ಸಚಿವರು ಪ್ರಧಾನಿ ಬೋರಿಸ್ ಜಾನ್ಸನ್ ಅವರ ಮೇಲೆ ವಿಶ್ವಾಸ ಕಳೆದುಕೊಂಡು ಸರ್ಕಾರದಿಂದ ಹೊರ ನಡೆದಿದ್ದಾರೆ. ಜಾನ್ಸನ್ ನಾಯಕತ್ವಕ್ಕೆ ಈಗ ಹೊಸ ಸವಾಲು ಎದುರಾಗಿದೆ.


ಆರೋಗ್ಯ ಕಾರ್ಯದರ್ಶಿ ಸ್ಥಾನಕ್ಕೆ ಸಾಜಿದ್ ಜಾವಿದ್ ಮಂಗಳವಾರ ರಾಜೀನಾಮೆ ಸಲ್ಲಿಸಿದ ಕೆಲವೇ ನಿಮಿಷಗಳಲ್ಲಿ ಹಣಕಾಸು ಸಚಿವ ರಿಷಿ ಸುನಕ್ ಕೂಡ ತಮ್ಮ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ಸಲ್ಲಿಸಿದ್ದರು. ಸುನಕ್ ಹಾದಿಯನ್ನೇ ಅನುಸರಿಸಿ ಸಚಿವರು ತಮ್ಮ ಸ್ಥಾನಗಳಿಗೆ ಬುಧವಾರ ರಾಜೀನಾಮೆ ನೀಡಿದ್ದಾರೆ. ಬೋರಿಸ್ ಅವರ ನಾಯಕತ್ವದ ಮೇಲೆ ವಿಶ್ವಾಸ ಕಳೆದುಕೊಂಡಿರುವ ಆಡಳಿತಕನ್ಸರ್ವೇಟಿವ್ ಪಕ್ಷದ ಸಂಸದರ ಸಂಖ್ಯೆ ಬುಧವಾರ ಸಂಜೆ ಹೊತ್ತಿಗೆ 27ಕ್ಕೆ ತಲುಪಿದೆ.

ಈ ಮಧ್ಯೆ, ರಿಷಿ ಸುನಕ್ ಸ್ಥಾನಕ್ಕೆ ಇರಾಕ್ ಸಂಜಾತ ನಧೀಂ ಜಹಾವಿ ಅವರನ್ನು ನೇಮಿಸಲಾಗಿದೆ.

ರಾಜೀನಾಮೆ ನೀಡಲ್ಲ: ಹಲವು ಸಚಿವರು ರಾಜೀನಾಮೆ ಸಲ್ಲಿಸಿದ್ದರೂ, ಪ್ರಧಾನಿ ಹುದ್ದೆ ತೊರೆಯುವುದಿಲ್ಲ ಎಂದು ಜಾನ್ಸನ್ ಸ್ಪಷ್ಟಪಡಿಸಿದ್ದಾರೆ.

ಅಕ್ರಮಗಳು ಮತ್ತು ಕೋವಿಡ್ ಸಂಬಂಧಿತ ನಿಯಮಾವಳಿ ಉಲ್ಲಂಘಿಸಿ ನಡೆಸಿದ ಔತಣ ಕೂಟದಿಂದಾಗಿ ಬೋರಿಸ್ ಸಾಕಷ್ಟು ಟೀಕೆಗೆ ಒಳಗಾಗಿದ್ದರು. ಬೋರಿಸ್ ಅವರು ಪ್ರತಿನಿಧಿಸುವ ಕನ್ಸರ್ವೇಟಿವ್ ಪಕ್ಷದ ಸಂಸದರೇ ಬೋರಿಸ್ ನಾಯಕತ್ವದ ವಿರುದ್ಧ ಸಿಡಿದೆದ್ದಿದ್ದರು. ಇದರಿಂದಾಗಿ ಕಳೆದ ತಿಂಗಳು ಎದುರಾದ ಅವಿಶ್ವಾಸ ನಿಲುವಳಿ ಸಂದರ್ಭ ಜಾನ್ಸನ್ ಅವರು ಪ್ರಯಾಸದಿಂದ ವಿಶ್ವಾಸಮತ ಗಳಿಸಿ, ಅಧಿಕಾರ ಉಳಿಸಿಕೊಂಡಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,810
ಇಂದಿನ ಅಂತ್ಯ	15,989
▲	179
ದಿನದ ಕನಿಷ್ಠ	15,511

ವಿನಿಮಯ ದರ

$ ಡಾಲರ್	78.94
£ ಪೌಂಡ್	94.65
€ ಯುರೊ	81.06
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹560

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1590)
ಸೋಯಾ (ರಿಫೈನ್ಡ್)	₹1240 (1280)
ಸೂರ್ಯಕಾಂತಿ (ರಿಫೈನ್ಡ್)	₹1600 (1620)
ಪಾಮೋಲಿನ್	₹1195 (1215)

ದ್ವಿಚಕ್ರ, ಕಾರಿಗೆ ಒಂದೇ ಫ್ಲೋಟರ್ ವಿಮೆ ರೂಪಿಸಲು ಪ್ರಾಧಿಕಾರದ ಅನುಮತಿ

ವಾಹನ ವಿಮೆ: ಹೆಚ್ಚುವರಿ ಸೌಲಭ್ಯಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) ವಿಮಾ ಕಂಪನಿಗಳಿಗೆ ವಾಹನ ವಿಮಾ ಪಾಲಿಸಿಗಳ ಜೊತೆ ಕೆಲವು ಹೆಚ್ಚುವರಿ ಸೌಲಭ್ಯಗಳನ್ನು (ಆ್ಯಡ್‌-ಆನ್) ನೀಡಲು ಅವಕಾಶ ಕಲ್ಪಿಸಿದೆ.

ಚಾಲಕ ತನ್ನ ವಾಹನವನ್ನು ಹೇಗೆ ಬಳಸುತ್ತಿದ್ದಾನೆ, ಎಷ್ಟರಮಟ್ಟಿಗೆ ಬಳಸುತ್ತಿದ್ದಾನೆ ಎಂಬುದನ್ನು ಮಾಹಿತಿ ತಂತ್ರಜ್ಞಾನ ಹಾಗೂ ಸಂವಹನ ತಂತ್ರಜ್ಞಾನದ ಆಧಾರದಲ್ಲಿ ಗುರುತಿಸಿ, ವಿಮೆಗೆ ಪ್ರೀಮಿಯಂ ನಿಗದಿ ಮಾಡುವ ಸೌಲಭ್ಯ ಇದು. ವಾಹನಕ್ಕೆ ಆಗುವ ಹಾನಿಗೆ (ಒ.ಡಿ.) ಸಂಬಂಧಿಸಿದಂತೆ ಹೆಚ್ಚುವರಿಯಾಗಿ ಇವನ್ನು ಒದಗಿಸಬಹುದು ಎಂದು ಪ್ರಾಧಿಕಾರ ಹೇಳಿದೆ.

‘ವಾಹನ ವಿಮೆಯ ಪರಿಕಲ್ಪನೆಯು ನಿರಂತರವಾಗಿ ವಿಕಾಸ ಹೊಂದುತ್ತಿದೆ. ಪಾಲಿಸಿದಾರರ ಅಗತ್ಯಗಳ ಜೊತೆ ವಿಮಾ ವಲಯವು ಹೆಜ್ಜೆ ಹಾಕಬೇಕು’ ಎಂದು ಪ್ರಾಧಿಕಾರವು ಹೇಳಿದೆ.

ವಾಹನವನ್ನು ಎಷ್ಟರಮಟ್ಟಿಗೆ ಬಳಸಲಾಗುತ್ತದೆ ಎಂಬುದನ್ನು ಆಧರಿಸಿರುವ ‘ವಾಹನ ಚಾಲನೆ ಮಾಡಿದಷ್ಟು ಪಾವತಿ’ ಹಾಗೂ ಚಾಲಕನು ಎಷ್ಟು ಶಿಸ್ತಿನಿಂದ ವಾಹನ ಚಾಲನೆ ಮಾಡುತ್ತಾನೆ ಎಂಬುದನ್ನು ಆಧರಿಸಿರುವ ‘ವಾಹನ ಚಾಲನೆ ರೀತಿ ಆಧರಿಸಿ ಪಾವತಿ’ ಎಂಬ ಎರಡು ವಿಧಗಳ ಅಡಿಯಲ್ಲಿ ಸೌಲಭ್ಯಗಳನ್ನು ನೀಡಲು ಪ್ರಾಧಿಕಾರ ಒಪ್ಪಿಗೆ ನೀಡಿದೆ.

ಮುಖ್ಯಾಂಶಗಳು
- ಪ್ರೀಮಿಯಂ ಮೊತ್ತ ಕಡಿಮೆ ಆಗುವ ನಿರೀಕ್ಷೆ
- ಮನೆಯಿಂದಲೇ ಕೆಲಸ ಮಾಡುವವರಿಗೆ ಹೆಚ್ಚು ಅನುಕೂಲ: ತಜ್ಞರ ಅಭಿಮತ

ವಾಹನ ಮಾಲೀಕರಿಗೆ ತಮ್ಮ ದ್ವಿಚಕ್ರ ವಾಹನ ಮತ್ತು ಕಾರಿಗೆ ಒಂದೇ ಫ್ಲೋಟರ್ ವಿಮೆ ಖರೀದಿಸುವ ಅವಕಾಶ ಕಲ್ಪಿಸುವುದಕ್ಕೂ ಪ್ರಾಧಿಕಾರ ಸಮ್ಮತಿ ಸೂಚಿಸಿದೆ.



‘ಎಲ್ಲ ವಾಹನ ಮಾಲೀಕರೂ ಒಂದೇ ಬಗೆಯಲ್ಲಿ ವಾಹನ ಬಳಕೆ ಮಾಡುವುದಿಲ್ಲ. ಕೆಲವರು ಬಹಳ ಅಪರೂಪಕ್ಕೆ ಒಮ್ಮೆ ವಾಹನ ಬಳಸಬಹುದು. ವಾಹನಕ್ಕೆ ಆಗುವ ಹಾನಿಗೆ ನೀಡುವ ವಿಮೆ ವಿಚಾರದಲ್ಲಿ ಬಳಕೆ ಆಧಾರಿತ ಸೌಲಭ್ಯ ಒದಗಿಸುವುದಕ್ಕೆ ಪ್ರಾಧಿಕಾರ ಅನುಮತಿ ಕೊಟ್ಟಿದೆ’ ಎಂದು ಬಜಾಜ್ ಅಲಯನ್ಸ್ ಜನರಲ್ ಇನ್ಶುರೆನ್ಸ್ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಟಿ.ಎ. ರಾಮಲಿಂಗಂ ಹೇಳಿದ್ದಾರೆ.

ಅಂದರೆ, ಚಾಲಕರೊಬ್ಬರು ತಾವು ಚಾಲನೆ ಮಾಡುವಷ್ಟು ಕಿ.ಮೀ. ಆಧರಿಸಿ ಸೌಲಭ್ಯ ಪಡೆಯಲು ಬಯಸಿದರೆ, ಇದನ್ನು ಆಯ್ಕೆ ಮಾಡಿಕೊಳ್ಳಬಹುದು. ಇಂತಹ ಸೌಲಭ್ಯ ಪಡೆದಾಗ ವಿಮೆಯು ಕೈಗೆಟಕುವಂತೆ ಆಗುತ್ತದೆ ಎಂದು ಅವರು ವಿವರಿಸಿದ್ದಾರೆ.

ಮನೆಯಿಂದಲೇ ಕೆಲಸ ಮಾಡುವವರಿಗೆ, ವಾಹನ ಬಳಕೆ ಕಡಿಮೆ ಇರುವವರಿಗೆ ಈ ಸೌಲಭ್ಯ ಆಕರ್ಷಕವಾಗಿ ಕಾಣಿಸಲಿದೆ ಎಂದು ಲಿಬರ್ಟಿ ಜನರಲ್ ಇನ್ಶುರೆನ್ಸ್ ಕಂಪನಿಯ ಅಧ್ಯಕ್ಷ ಉದಯನ್ ಜೋಷಿ ಹೇಳಿದ್ದಾರೆ.

ಚಿನ್ನ ₹ 760 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು ಬುಧವಾರ 10 ಗ್ರಾಂಗೆ ₹ 760ರಷ್ಟು ಇಳಿಕೆ ಕಂಡು ₹ 52,064ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,276 ಇಳಿಕೆ ಆಗಿ ₹ 56,930ಕ್ಕೆ ತಲುಪಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹296-555
ದ್ವಿತಳಿ (ಬಿ.ವಿ)	₹211-803

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹166
ಗುಡ್ ಲಾಟ್	₹158

(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

6-7-2022

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	10750-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1600)
ಒಂದು ವಾರದ ಡೆಲಿವರಿ	1585 (1595)
ಸೋಯಾ ಕಚ್ಚಾ	11150 (1195)
ಪಾಮ್ ವಾರದ ಡೆಲಿವರಿ	1193 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1590)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,100 (52,000)
ಬೆಳ್ಳಿ ಕೆ.ಜಿ 56,450 (58,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

2022ರ ಏಪ್ರಿಲ್–ಜೂನ್ ಅವಧಿ: ಎಎಂಎಫ್‌ಐ ಮಾಹಿತಿ

ಎಂಎಫ್ ಸಂಪತ್ತು ಶೇ 14ರಷ್ಟು ವೃದ್ಧಿ

ನವದೆಹಲಿ (ಪಿಟಿಐ): ದೇಶಿ ಮ್ಯೂಚುವಲ್ ಫಂಡ್ (ಎಂಎಫ್) ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯವು 2021ರ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ 2022ರ ಜೂನ್ ತ್ರೈಮಾಸಿಕದಲ್ಲಿ ಶೇಕಡ 14ರಷ್ಟು ಬೆಳವಣಿಗೆ ಕಂಡಿದೆ.

ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯವು ₹ 33.2 ಲಕ್ಷ ಕೋಟಿಯಿಂದ ₹ 37.75 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಈಕ್ವಿಟಿ ಯೋಜನೆಗಳಲ್ಲಿ ಬಂಡವಾಳ ಒಳಹರಿವು ಮುಂದುವರಿದಿದೆ. ಇದರಿಂದಾಗಿ ನಿರ್ವಹಣಾ ಸಂಪತ್ತು ಮೌಲ್ಯ ವೃದ್ಧಿಯಾಗಿದೆ ಎಂದು ಅದು ತಿಳಿಸಿದೆ.



ಪ್ರಮುಖ ಕಂಪನಿಗಳ ನಿರ್ವಹಣಾ ಸಂಪತ್ತು ಮೌಲ್ಯ (ಲಕ್ಷ ಕೋಟಿಗಳಲ್ಲಿ)

ಎಸ್‌ಬಿಐ ಎಂಎಫ್	ಐಸಿಐಸಿಐ ಪ್ರುಡೆನ್ಶಿಯಲ್ ಎಂಎಫ್	ಎಚ್‌ಡಿಎಫ್‌ಸಿ ಎಂಎಫ್
6.47	4.65	4.15

2022ರ ಮಾರ್ಚ್ ತ್ರೈಮಾಸಿಕದಲ್ಲಿ 43 ಕಂಪನಿಗಳ ಒಟ್ಟಾರೆ ನಿರ್ವಹಣಾ ಸಂಪತ್ತು ಮೌಲ್ಯ ₹ 38.38 ಲಕ್ಷ ಕೋಟಿ ಇತ್ತು. ಇದಕ್ಕೆ ಹೋಲಿಸಿದರೆ ಜೂನ್ ತ್ರೈಮಾಸಿಕದಲ್ಲಿ ಸಂಪತ್ತು ಮೌಲ್ಯದಲ್ಲಿ ಇಳಿಕೆ ಆಗಿದೆ.

ಹೂಡಿಕೆದಾರರ ವಿವಿಧ ವರ್ಗಗಳಿಗೆ ಮ್ಯೂಚುವಲ್ ಫಂಡ್‌ಗಳು ಇನ್ನಷ್ಟು ಒಪ್ಪಿತವಾಗಲಿದ್ದು, ಅದು ಉದ್ಯಮವನ್ನು ಇನ್ನಷ್ಟು ಬಲಪಡಿಸಲಿದೆ ಎಂದು ಎಪ್ಸಿಲನ್ ಮನಿ ಕಂಪನಿಯ ಸಹ ಸ್ಥಾಪಕ ಅಭಿಷೇಕ್ ದೇವ್ ಹೇಳಿದ್ದಾರೆ.

ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಾಗುತ್ತಿರುವುದರ ಜೊತೆಗೆ ಉದ್ಯಮವು ನೀಡುತ್ತಿರುವ ವಿತ್ತೀಯ ಒಳಗೊಳ್ಳುವಿಕೆ ಸೇವೆಗಳಿಂದಾಗಿ ನಿರ್ವಹಣಾ ಸಂಪತ್ತು ವೃದ್ಧಿಯಾಗಿದೆ ಎಂದು ಎನ್‌ಜೆ ಎಎಂಸಿ ನಿರ್ದೇಶಕ ರಾಜೀವ್ ಶಾಸ್ತ್ರಿ ತಿಳಿಸಿದ್ದಾರೆ.

ತಾಂತ್ರಿಕ ದೋಷ: ಸ್ಪೈಸ್‌ಜೆಟ್‌ಗೆ ನೋಟಿಸ್

18 ದಿನಗಳಲ್ಲಿ 8 ವಿಮಾನಗಳಲ್ಲಿ ಸಮಸ್ಯೆ: ಸುರಕ್ಷತೆ ಪಾಲನೆಯಲ್ಲಿ ಲೋಪ

ನವದೆಹಲಿ (ಪಿಟಿಐ): 18 ದಿನಗಳ ಅವಧಿಯಲ್ಲಿ ಸಂಸ್ಥೆಯ 8 ವಿಮಾನಗಳಲ್ಲಿ ತಾಂತ್ರಿಕ ದೋಷ ಕಂಡುಬಂದಿರುವುದರಿಂದ ಸ್ಪೈಸ್‌ಜೆಟ್ ಸಂಸ್ಥೆಗೆ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ. ಮೂರು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿದೆ.

‘ಸುರಕ್ಷಿತ, ಸಮರ್ಥ ಹಾಗೂ ವಿಶ್ವಾಸಾರ್ಹ ವಿಮಾನ ಸೇವೆಗಳನ್ನು ಒದಗಿಸುವಲ್ಲಿ ಸ್ಪೈಸ್‌ಜೆಟ್ ವಿಫಲವಾಗಿದೆ. ಹಾಗಾಗಿ, ವಿಮಾನ ನಿಯಮಗಳಡಿ ಕಂಪನಿಗೆ ನೋಟಿಸ್ ನೀಡಲಾಗಿದೆ’ ಎಂದು ಡಿಜಿಸಿಎ ತಿಳಿಸಿದೆ.

‘ಈವರೆಗಿನ ಘಟನೆಗಳನ್ನು ಅವಲೋಕಿಸಿದಾಗ, ಸೂಕ್ತ ನಿರ್ವಹಣೆ ಇಲ್ಲದಿರುವುದು ಕಂಡುಬಂದಿದೆ. ಸುರಕ್ಷತಾ ಕ್ರಮಗಳ ಪಾಲನೆಯಲ್ಲಿ ಲೋಪ ಕಂಡುಬರಲು ಇದುವೇ ಕಾರಣ’ ಎಂದು ಡಿಜಿಸಿಎ ಅಭಿಪ್ರಾಯಪಟ್ಟಿದೆ.

‘ಪ್ರಯಾಣಿಕರ ಸುರಕ್ಷತೆ ಮುಖ್ಯ’: ಸ್ಪೈಸ್‌ಜೆಟ್‌ಗೆ ಕಾರಣ ಕೇಳಿ ನೋಟಿಸ್ ನೀಡಿರುವ ಕುರಿತು ಪ್ರತಿಕ್ರಿಯಿಸಿರುವ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ‘ಪ್ರಯಾಣಿಕರ ಸುರಕ್ಷತೆಯೇ ಮುಖ್ಯ’ ಎಂದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ಸುರಕ್ಷತೆಗೆ ಅಡ್ಡಿಯಾಗುವ ಸಣ್ಣ ದೋಷ ಕಂಡುಬಂದರೂ, ಆ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು ಹಾಗೂ ದೋಷವನ್ನು ಸರಿಪಡಿಸಲಾಗುವುದು’ ಎಂದು ಹೇಳಿದ್ದಾರೆ.

ರಾಡಾರ್‌ನಲ್ಲಿ ಸಮಸ್ಯೆ: ಕೋಲ್ಕತ್ತಗೆ ಮರಳಿದ ಸ್ಪೈಸ್‌ಜೆಟ್

ನವದೆಹಲಿ: ಕೋಲ್ಕತ್ತದಿಂದ ಚೀನಾದ ಚಾಂಗ್‌ಕಿಂಗ್‌ಗೆ ಹೊರಟಿದ್ದ ಸ್ಪೈಸ್‌ಜೆಟ್‌ನ ವಿಮಾನವೊಂದು, ಹವಾಮಾನ ರಾಡಾರ್ ಕಾರ್ಯನಿರ್ವಹಿಸದ ಕಾರಣ ಕೋಲ್ಕತ್ತಕ್ಕೆ ಮರಳಿದ ಘಟನೆ ಮಂಗಳವಾರ ನಡೆದಿದೆ.

‘ಕಂಪನಿಯ ಸರಕು ಸಾಗಣೆ ವಿಮಾನ (ಬೋಯಿಂಗ್ 737) ಜುಲೈ 5ರಂದು ಕೋಲ್ಕತ್ತ ವಿಮಾನ ನಿಲ್ದಾಣದಿಂದ ಟೇಕ್‌ಆಫ್ ಆದ ನಂತರ, ಹವಾಮಾನ ಕುರಿತು ಮಾಹಿತಿ ನೀಡುವ ರಾಡಾರ್ ಕಾರ್ಯನಿರ್ವಹಿಸದಿರುವುದು ವಿಮಾನದ ಸಿಬ್ಬಂದಿಗೆ ಗೊತ್ತಾಗಿದೆ. ಅವರು ಕೂಡಲೇ ಮರಳಿದ್ದು, ಸುರಕ್ಷಿತವಾಗಿ ವಿಮಾನವನ್ನು ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ಇಳಿಸಿದರು’ ಎಂದು ಸ್ಪೈಸ್‌ಜೆಟ್ ವಕ್ತಾರರೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

‘ಶೀಘ್ರ ಪ್ರತಿಕ್ರಿಯೆ’

‘ಡಿಜಿಸಿಎ ನೀಡಿರುವ ನೋಟಿಸ್‌ಗೆ ನಿಗದಿತ ಕಾಲಮಿತಿಯೊಳಗೆ ಪ್ರತಿಕ್ರಿಯೆ ನೀಡುತ್ತೇವೆ’ ಎಂದು ಸ್ಪೈಸ್‌ಜೆಟ್ ತಿಳಿಸಿದೆ.

‘ನಮ್ಮ ಸಂಸ್ಥೆ ಐಎಟಿಎ–ಐಒಎಸ್‌ಎ ಮಾನ್ಯತೆ ಹೊಂದಿದೆ. ವಿಮಾನಗಳ ಸುರಕ್ಷಿತ ಕಾರ್ಯಾಚರಣೆ, ಪ್ರಯಾಣಿಕರು ಮತ್ತು ವಿಮಾನ ಸಿಬ್ಬಂದಿಯ ಸುರಕ್ಷತೆ ನಮ್ಮ ಆದ್ಯತೆಯಾಗಿದೆ’ ಎಂದು ಪ್ರಕಟಣೆ ಹೇಳಿದೆ.

ಸಾಲದ ಬಡ್ಡಿದರ ಹೆಚ್ಚಿಸಿದ ಕೆನರಾ ಬ್ಯಾಂಕ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಗುರುವಾರದಿಂದ ಜಾರಿಗೆ ಬರುವಂತೆ ಎಂಸಿಎಲ್‌ಆರ್ ಆಧಾರಿತ ಸಾಲದ ಮೇಲಿನ ಬಡ್ಡಿ ದರವನ್ನು ಶೇಕಡ 0.10ರಷ್ಟು ಹೆಚ್ಚಿಸಿದೆ. ಒಂದು ವರ್ಷದ ಎಂಸಿಎಲ್‌ಆರ್ ಶೇ 7.40ರಿಂದ 7.50ಕ್ಕೆ ಏರಿಕೆ ಆಗಿದೆ.

ರೆಪೊ ದರಕ್ಕೆ ಜೋಡಣೆ ಆಗಿರುವ ಸಾಲದ ಬಡ್ಡಿಯು ಶೇ 7.30ರಿಂದ ಶೇ 7.80ಕ್ಕೆ ಏರಿಕೆ ಆಗಿದೆ. ಇದು ಸಹ ಗುರುವಾರದಿಂದ ಜಾರಿಗೆ ಬರಲಿದೆ ಎಂದು ಬ್ಯಾಂಕ್ ತಿಳಿಸಿದೆ.

ಅಡುಗೆ ಎಣ್ಣೆ ಬೆಲೆ ಇಳಿಸಲು ಕೇಂದ್ರ ಸೂಚನೆ

ಒಂದನೇ ಪುಟದಿಂದ....

ಈ ಎಣ್ಣೆಗಳ ಬೆಲೆ ಇಳಿಕೆಯಾದ ನಂತರ, ಇತರ ಅಡುಗೆ ಎಣ್ಣೆಗಳ ಬೆಲೆಯಲ್ಲಿಯೂ ಇಳಿಕೆ ಆಗಲಿದೆ ಎಂದು ಪಾಂಡೆ ಹೇಳಿದ್ದಾರೆ.

‘ಎಂಆರ್‌ಪಿ ನಿಗದಿ ಮಾಡುವಾಗ ಸಾಗಣೆ ವೆಚ್ಚವನ್ನೂ ಪರಿಗಣಿಸಲಾಗಿರುತ್ತದೆ. ಹೀಗಾಗಿ, ಒಂದೇ ಬ್ರ್ಯಾಂಡ್‌ನ ಎಣ್ಣೆಗಳ ಎಂಆರ್‌ಪಿಯಲ್ಲಿ ದೇಶದಾದ್ಯಂತ ಏಕರೂಪತೆ ಇರಬೇಕು ಎಂದು ತಯಾರಕರಿಗೆ ಹೇಳಲಾಗಿದೆ. ಇದಕ್ಕೆ ಕಂಪನಿಗಳು ಒಪ್ಪಿಗೆ ಸೂಚಿಸಿವೆ’ ಎಂದು ಪಾಂಡೆ ತಿಳಿಸಿದ್ದಾರೆ.

ಅಡುಗೆ ಎಣ್ಣೆ ಬ್ರ್ಯಾಂಡ್‌ಗಳ ಬಗ್ಗೆ ಗ್ರಾಹಕರಿಂದ ದೂರು ಬರುತ್ತಿರುವುದು ಹೆಚ್ಚಾಗಿರುವ ಬಗ್ಗೆಯೂ ಸಭೆಯಲ್ಲಿ ಚರ್ಚೆಯಾಯಿತು. ಕೆಲವು ಕಂಪನಿಗಳು, ಎಣ್ಣೆಯನ್ನು 15 ಡಿಗ್ರಿ ಸೆಲ್ಸಿಯಸ್‌ನಲ್ಲಿ ಪ್ಯಾಕ್ ಮಾಡಲಾಗಿದೆ ಎಂದು ನಮೂದಿಸಿರುತ್ತವೆ. ಈ ತಾಪಮಾನದಲ್ಲಿ ಎಣ್ಣೆಯ ತೂಕ ಕಡಿಮೆ ಆಗಿರುತ್ತದೆ. ಆದರೆ, ಕಡಿಮೆ ಆಗಿರುವ ತೂಕವನ್ನು ಪ್ಯಾಕ್ ಮೇಲೆ ನಮೂದಿಸಿರುವುದಿಲ್ಲ. ಇದು ನ್ಯಾಯಸಮ್ಮತವಲ್ಲ ಎಂಬ ವಿಚಾರ ಸಭೆಯಲ್ಲಿ ಚರ್ಚೆಯಾಗಿದೆ.

‘ಉದಾಹರಣೆಗೆ, 15 ಡಿಗ್ರಿ ಸೆಲ್ಸಿಯಸ್‌ನಲ್ಲಿ 910 ಗ್ರಾಂ ಎಣ್ಣೆಯನ್ನು ಪ್ಯಾಕ್ ಮಾಡಲಾಗಿದೆ ಎಂದು ನಮೂದಾಗಿರುತ್ತದೆ. ವಾಸ್ತವದಲ್ಲಿ, ತೂಕವು 900 ಗ್ರಾಂಗಿಂತ ಕಡಿಮೆ ಆಗಿರುತ್ತದೆ’ ಎಂದು ಪಾಂಡೆ ವಿವರಿಸಿದರು. ಎಣ್ಣೆಯನ್ನು 30 ಡಿಗ್ರಿ ಸೆಲ್ಸಿಯಸ್‌ನಲ್ಲಿ ಪ್ಯಾಕ್ ಮಾಡಬೇಕು.

ಸೆನ್ಸೆಕ್ಸ್ ಶೇ 1ಕ್ಕೂ ಹೆಚ್ಚು ಗಳಿಕೆ

ಮುಂಬೈ (ಪಿಟಿಐ): ಎಫ್‌ಎಂಸಿಜಿ, ಹಣಕಾಸು ಮತ್ತು ವಾಹನ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿಸಿದ ಕಾರಣ ದೇಶದ ಷೇರುಪೇಟೆಗಳು ಬುಧವಾರ ಶೇಕಡ 1ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ದಾಖಲಿಸಿದವು.

ದೀರ್ಘ ಸಮಯದ ಬಳಿಕ ವಿದೇಶಿ ಬಂಡವಾಳ ಒಳಹರಿವು ಆಗಿರುವುದು ಕೂಡ ಸೂಚ್ಯಂಕಗಳ ಏರಿಕೆಗೆ ನೆರವಾಯಿತು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 616 ಅಂಶ ಜಿಗಿತ ಕಂಡು 53,750 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 179 ಅಂಶ ಹೆಚ್ಚಾಗಿ 15,989 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿ.

ದಿನದ ವಹಿವಾಟಿನಲ್ಲಿ ಬಿಎಸ್‌ಇ ಮಿಡ್‌ಕ್ಯಾಪ್ ಶೇಕಡ 1.76ರಷ್ಟು ಮತ್ತು ಸ್ಮಾಲ್ ಕ್ಯಾಪ್ ಶೇ 0.94ರಷ್ಟು ಏರಿಕೆ ಕಂಡುಕೊಂಡವು.

‘ಎನ್‌ಎಸ್‌ಇನಲ್ಲಿ ಇರುವ ಪ್ರಾಥಮಿಕ ಮಾಹಿತಿಯ ಪ್ರಕಾರ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಮೇ 30ರ ಬಳಿಕ ಇದೇ ಮೊದಲ ಬಾರಿಗೆ (ಜುಲೈ 5ರಂದು) ₹ 1,295.84 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ’ ಎಂದು ಹೆಮ್ ಸೆಕ್ಯುರಿಟೀಸ್‌ನ ಪೋರ್ಟ್‌ಫೋಲಿಯೊ ಮ್ಯಾನೇಜ್‌ಮೆಂಟ್ ಸರ್ವೀಸಸ್‌ನ ಮುಖ್ಯಸ್ಥ ಮೋಹಿತ್ ನಿಗಮ್ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ2.43ರಷ್ಟು ಏರಿಕೆ ಕಂಡು ಒಂದು ಬ್ಯಾರಲ್‌ಗೆ 105.3 ಡಾಲರ್‌ಗಳಿಗೆ ತಲುಪಿತು.

ಲಂಡನ್ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ 100 ಡಾಲರ್‌ಗಿಂತ ಕಡಿಮೆ ಆಗಿದೆ ಎಂದು ಎಎಫ್‌ಪಿ ವರದಿ ಮಾಡಿದೆ.

ವಲಯವಾರು ಏರಿಕೆ (%)

ವಾಹನ	2.73
ಸರಕು ಮತ್ತು ಸೇವೆ	2.47
ಎಫ್‌ಎಂಸಿಜಿ	2.45
ಗ್ರಾಹಕ ಬಳಕೆ ವಸ್ತು	2.42
ರಿಯಲ್ ಎಸ್ಟೇಟ್	2.39

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕಾರ್ಕಳ	
ಹೊಸತು	40000-45000
ಹಳತು	46000-54500
ಕುಮಟ	
ಚಿಪ್ಪು	27019-31018
ಕೋಕ	18609-30099
ಫ್ಯಾಕ್ಟರಿ	10189-19699
ಹಳೆಚಾಲಿ	43099-46969
ಹೊಸಚಾಲಿ	35699-38029
ಶಿವಮೊಗ್ಗ	
ರಾಶಿ	46009-49899
ಸಿದ್ದಾಪುರ	
ಬಿಳಿಗೋಟು	25699-32099
ಚಾಲಿ	36399-38299
ಕೋಕ	22299-31390
ತಟ್ಟಿಬೆಟ್ಟೆ	31299-31299
ರಾಶಿ	47899-48699
ತಟ್ಟಿಬೆಟ್ಟೆ	31089-33300
ಶಿರಸಿ	
ಬೆಟ್ಟೆ	41969-43216
ಬಿಳಿಗೋಟು	25639-32299
ಚಾಲಿ	35809-39189
ರಾಶಿ	46699-47698

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15800	15700	230 ಸೆಂಟ್ಸ್
ಎಸಿ	8960	8500	8550	
ಆರ್‌ಪಿ	9500	9510	950	ಲಂಡನ್
ಆರ್‌ಸಿ	4700	4450	4550	1999 ಡಾಲರ್ಸ್

ಜಬೇರ್ ಸಾಧನೆಗೆ ಮತ್ತೊಂದು ಗರಿ

ವಿಂಬಲ್ಡನ್ ಟೆನಿಸ್: ಗ್ರ್ಯಾನ್‌ಸ್ಲಾಮ್ ಸೆಮಿ ತಲುಪಿದ ಮೊದಲ ಅರಬ್ ಮಹಿಳೆ

ವಿಂಬಲ್ಡನ್ (ಎಪಿ/ಎಎಫ್‌ಪಿ): ಟ್ಯುನಿಷಿಯಾ ಆಟಗಾರ್ತಿ ಆನ್ಸ್ ಜಬೇರ್ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಚಾರಿತ್ರಿಕ ಸಾಧನೆ ಮಾಡಿದರು. ಇಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್ ತಲುಪುವ ಮೂಲಕ ಈ ಸಾಧನೆ ಮಾಡಿದ ಮೊದಲ ಅರಬ್ ಮಹಿಳೆ ಎನಿಸಿಕೊಂಡರು.

ಮೂರನೇ ಶ್ರೇಯಾಂಕದ ಜಬೇರ್, ಸೆಂಟರ್‌ಕೋರ್ಟ್‌ನಲ್ಲಿ ಮಂಗಳವಾರ ರಾತ್ರಿ ನಡೆದ ಎಂಟರಘಟ್ಟದ ಹಣಾಹಣಿಯಲ್ಲಿ 3-6, 6-1, 6-1ರಿಂದ ಜೆಕ್ ಗಣರಾಜ್ಯದ ಮರಿಯಾ ಬೊಜ್ಕೊವಾ ಅವರನ್ನು ಮಣಿಸಿದರು. ಕಳೆದ ವರ್ಷ ಇಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದ ಜಬೇರ್ ತಮ್ಮ ಸಾಧನೆ ಉತ್ತಮಪಡಿಸಿಕೊಂಡರು.

‘ಅರಬ್ಬರು ಯಾವಾಗಲೂ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲುವರು ಎಂಬ ಮಾತಿದೆ. ಆ ಸಂಪ್ರದಾಯವನ್ನು ನೀನು ಮುರಿಯಬೇಕು ಎಂದು ಹಿಚಾಮ್ ಅರಾಜಿ (ಮೊರಕ್ಕೊದ ಮಾಜಿ ಆಟಗಾರ) ನನಗೆ ಹೇಳಿದ್ದರು. ಈ ಹಂತಕ್ಕೆ ತಲುಪುತ್ತೇನೆಂಬ ಎಂಬ ಸಂಪೂರ್ಣ ವಿಶ್ವಾಸವಿತ್ತು’ ಎಂದು ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ಜಬೇರ್ ಹೇಳಿದ್ದಾರೆ.

ಜಬೇರ್ 2020ರ ಆಸ್ಟ್ರೇಲಿಯಾ ಓಪನ್‌ನಲ್ಲಿ ಕ್ವಾರ್ಟರ್‌ಫೈನಲ್ ತಲುಪುವ ಮೂಲಕ ಆ ಗೌರವ ಗಳಿಸಿದ ಮತ್ತು 2021ರಲ್ಲಿ ಅಗ್ರ 10 ರ‍್ಯಾಂಕಿಂಗ್ ಪಟ್ಟಿಯೊಳಗೆ ಸ್ಥಾನ ಗಳಿಸಿದ ಮೊದಲ ಅರಬ್ ಮಹಿಳೆ ಎನಿಸಿಕೊಂಡಿದ್ದರು.

ಸೆಮಿಫೈನಲ್‌ನಲ್ಲಿ ಜಬೇರ್, ಜರ್ಮನಿಯ ತತಿಯಾನ ಮರಿಯಾ ಅವರಿಗೆ ಮುಖಾಮುಖಿಯಾಗುವರು. 34 ವರ್ಷ ತತಿಯಾನ ಮಂಗಳವಾರ ತಮ್ಮದೇ ದೇಶದ ಜೂಲ್ ನಿಮಿಯರ್ ಎದುರು ಗೆದ್ದಿದ್ದರು. ಗ್ರ್ಯಾನ್‌ಸ್ಲಾಮ್‌ನಲ್ಲಿ 35ನೇ ಬಾರಿ ಸ್ಪರ್ಧಿಸಿರುವ ಅವರು ಮೊದಲ ಬಾರಿ ಸೆಮಿಫೈನಲ್ ತಲುಪಿದ ಶ್ರೇಯ ಗಳಿಸಿದ್ದರು.

ಸೆಮಿಫೈನಲ್‌ಗೆ ನಿಕ್, ನಡಾಲ್

ಈ ಬಾರಿಯ ವಿಂಬಲ್ಡನ್ ಟೂರ್ನಿಯಲ್ಲಿ ವಿವಾದಗಳಿಂದ ಗಮನಸೆಳೆದಿರುವ ಆಸ್ಟ್ರೇಲಿಯಾ ಆಟಗಾರ ನಿಕ್ ಕಿರ್ಗಿಯೊಸ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಬುಧವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅವರು 6-4, 6-3, 7-6 (7/5) ರಿಂದ ಚಿಲಿಯ ಕ್ರಿಸ್ಟಿಯನ್ ಗರಿನ್ ಎದುರು ಗೆದ್ದರು. ಮುಂದಿನ ಪಂದ್ಯದಲ್ಲಿ ಕಿರ್ಗಿಯೊಸ್ ಸ್ಪೇನ್‌ನ ರಫೆಲ್ ನಡಾಲ್ ಅವರನ್ನು ಎದುರಿಸುವರು. ಎಂಟರಘಟ್ಟದ ಮತ್ತೊಂದು ಪಂದ್ಯದಲ್ಲಿ ನಡಾಲ್ 3-6, 7-5, 3-6, 7-5, 7-6 (10/4)ರಿಂದ ಅಮೆರಿಕದ ಟೇಲರ್ ಫ್ರಿಟ್ಜ್ ಅವರನ್ನು ಸೋಲಿಸಿದರು. ಈ ಪಂದ್ಯದಲ್ಲಿ ನಡಾಲ್ ಹೊಟ್ಟೆನೋವಿನಿಂದ ಬಳಲಿದರು. ಆದರೂ ಛಲದ ಆಟದ ಮೂಲಕ ಗೆಲುವು ಪಡೆದರು.


ಆನ್ಸ್ ಜಬೇರ್ ಆಟದ ಪರಿ– ಎಎಫ್‌ಪಿ ಚಿತ್ರಗಳು

ನಾಲ್ಕರ ಘಟ್ಟಕ್ಕೆ ಹಲೆಪ್, ರಿಬಾಕಿನಾ: ವಿಂಬಲ್ಡನ್ ಮಾಜಿ ಚಾಂಪಿಯನ್ ರುಮೇನಿಯಾದ ಸಿಮೊನಾ ಹಲೆಪ್ ಮತ್ತು ಕಜಕಸ್ತಾನದ ಎಲೆನಾ ರಿಬಾಕಿನಾ ಮಹಿಳಾ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. ಎಂಟರಘಟ್ಟದ ಹಣಾಹಣಿಯಲ್ಲಿ ಸಿಮೊನಾ 6-2, 6-4ರಿಂದ ಅಮೆರಿಕದ ಅಮಂಡಾ ಅನಿಸಿಮೊವಾ ಎದುರು ಸುಲಭ ಜಯ ಸಂಪಾದಿಸಿದರು. ಎಲೆನಾ 4-6, 6-2, 6-3ರಿಂದ ಅಜ್ಲಾ ತೋಮ್ಲಜನೊವಿಚ್ ವಿರುದ್ಧ ಗೆದ್ದರು.

ಸೆಮಿಫೈನಲ್‌ನಲ್ಲಿ ಸಿಮೊನಾ–ರಿಬಾಕಿನಾ ಮುಖಾಮುಖಿಯಾಗುವರು.

ಭಾರತ–ಇಂಗ್ಲೆಂಡ್ ಮೊದಲ ಟಿ20 ಇಂದು; ರೋಹಿತ್‌ಗೆ ಜೋಸ್ ಪಡೆ ಸವಾಲು

ವಿಶ್ವಕಪ್ ಟೂರ್ನಿಗೆ ‘ಸಿದ್ಧತೆ’ ಶುರು

ಸೌತಾಂಪ್ಟನ್ (ಪಿಟಿಐ): ಕೋವಿಡ್‌ನಿಂದ ಚೇತರಿಸಿಕೊಂಡು ಮರಳಿರುವ ರೋಹಿತ್ ಶರ್ಮಾ ಗುರುವಾರ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಶತಕಗಳನ್ನು ಸಿಡಿಸಿದ್ದ ಜೋಸ್ ಬಟ್ಲರ್ ಆತಿಥೇಯ ತಂಡದ ನಾಯಕತ್ವ ವಹಿಸಲಿದ್ದಾರೆ. ಉಭಯ ತಂಡಗಳಿಗೂ ಮುಂಬರಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಬಳಗವನ್ನು ಸಿದ್ಧಗೊಳಿಸಲು ಈ ಟೂರ್ನಿಯು ಪೂರ್ವಸಿದ್ಧತಾ ವೇದಿಕೆಯಾಗಲಿದೆ. ಅಲ್ಲದೇ ತಂಡದ ಆಯ್ಕೆ ಪ್ರಕ್ರಿಯೆಯ ಭಾಗವೂ ಆಗಲಿದೆ.

ಟೆಸ್ಟ್ ಪಂದ್ಯದಲ್ಲಿ ಆಡಿದ್ದ ವಿರಾಟ್ ಕೊಹ್ಲಿ, ಜಸ್‌ಪ್ರೀತ್ ಬೂಮ್ರಾ, ರವೀಂದ್ರ ಜಡೇಜ, ಶ್ರೇಯಸ್ ಅಯ್ಯರ್ ಮತ್ತು ರಿಷಭ್ ಪಂತ್ ಅವರಿಗೆ ಮೊದಲ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಗಿದೆ. ಎರಡನೇ ಪಂದ್ಯದಲ್ಲಿ ಅವರು ಕಣಕ್ಕಿಳಿಯುವ ಸಾಧ್ಯತೆ ಇದೆ. ಆದ್ದರಿಂದ ಅವಕಾಶ ಪಡೆಯಲಿರುವ ಯುವ ಆಟಗಾರರಾದ ದೀಪಕ್ ಹೂಡಾ, ವೆಂಕಟೇಶ್ ಅಯ್ಯರ್, ಆವೇಶ್ ಖಾನ್ ಅವರು ವಿದೇಶಿ ಅಂಗಳದಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಲು ಸೂಕ್ತ ಸಮಯವಿದು.

ಬಲಾಬಲ

ಪಂದ್ಯಗಳು 19

ಭಾರತ ಜಯ	10
ಇಂಗ್ಲೆಂಡ್ ಜಯ	9

ಐಪಿಎಲ್ ಮತ್ತು ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಸ್ಥಿರವಾದ ಆಟವಾಡಿರುವ ದಿನೇಶ್ ಕಾರ್ತಿಕ್ ಕಣಕ್ಕಿಳಿಯುವುದು ಖಚಿತ. ಆದರೆ, ಕೀಪಿಂಗ್ ಹೊಣೆ ಇಶಾನ್ ಕಿಶನ್ ಅವರಿಗೆ ಲಭಿಸುವ ಸಾಧ್ಯತೆ ಹೆಚ್ಚು. ಅಲ್ಲದೇ ನಾಯಕ ರೋಹಿತ್ ಜೊತೆ ಇನಿಂಗ್ಸ್ ಕೂಡ ಆರಂಭಿಸುವ ಹೊಣೆ ಕೂಡ ನಿಭಾಯಿಸಬೇಕಿದೆ.

ಇಂಗ್ಲೆಂಡ್ ತಂಡದಲ್ಲಿ ಆಲ್‌ರೌಂಡರ್ ಮೋಯಿನ್ ಅಲಿ, ಜೇಸನ್ ರಾಯ್ ಮತ್ತು ಡೇವಿಡ್ ಮಲಾನ್ ಅವರ ಮೇಲೆ ಹೆಚ್ಚಿನ ಭರವಸೆ ಇದೆ. ಬೆನ್ ಸ್ಟೋಕ್ಸ್ ನಾಯಕತ್ವದ ತಂಡವು ಭಾರತದ ವಿರುದ್ಧದ ಟೆಸ್ಟ್‌ನಲ್ಲಿ ಜಯಿಸಿರುವುದು ಚುಟುಕು ಕ್ರಿಕೆಟ್ ತಂಡದ ಆಟಗಾರರ ಹುಮ್ಮಸ್ಸು ಇಮ್ಮಡಿಸುವಂತೆ ಮಾಡಿದೆ.

ಏಯಾನ್ ಮಾರ್ಗನ್ ಈಚೆಗೆ ನಿವೃತ್ತಿ ಘೋಷಿಸಿದ್ದರು. ಆದ್ದರಿಂದ ಬಟ್ಲರ್ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ. ಗೆಲುವಿನ ಆರಂಭ ಮಾಡುವ ಹುಮ್ಮಸ್ಸಿನಲ್ಲಿ ಬಟ್ಲರ್ ಇದ್ದಾರೆ.




ದಿನೇಶ್ ಕಾರ್ತಿಕ್ ಮತ್ತು ದೀಪಕ್ ಹೂಡಾ– ಎಎಫ್‌ಪಿ ಚಿತ್ರ

ಭಾರತಕ್ಕೆ 16 ಪಂದ್ಯಗಳು

ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ಭಾರತ ತಂಡವು 16 ಚುಟುಕು ಕ್ರಿಕೆಟ್ ಪಂದ್ಯಗಳನ್ನು ಆಡಲಿದೆ. ಈ ಎಲ್ಲ ಪಂದ್ಯಗಳಲ್ಲಿ ಆಡುವವರು ವಿಶ್ವಕಪ್ ನಲ್ಲಿ ಆಡುವ ತಂಡಕ್ಕೆ ಆಯ್ಕೆಯಾಗುವತ್ತ ಚಿತ್ತ ನೆಟ್ಟಿದ್ದಾರೆ. ಪ್ರಸ್ತುತ ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಮೂರು, ಜುಲೈ 29ರಿಂದ ಆಗಸ್ಟ್ 7ರವರೆಗೆ ವೆಸ್ಟ್ ಇಂಡೀಸ್ ಎದುರು ಐದು, ಆಗಸ್ಟ್–ಸೆಪ್ಟೆಂಬರ್‌ನಲ್ಲಿ ನಡಯೆಲಿರುವ ಏಷ್ಯಾ ಕಪ್ ಟೂರ್ನಿಯಲ್ಲಿ ಐದು ಮತ್ತು ಸೆಪ್ಟೆಂಬರ್‌ನಲ್ಲಿ ಆಸ್ಟ್ರೇಲಿಯಾ ಎದುರು ಮೂರು ಪಂದ್ಯ ನಡೆಯಲಿವೆ.

ಕಶ್ಯಪ್ ಮುನ್ನಡೆ; ಸೈನಾಗೆ ಸೋಲು

ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಸಿಂಧುಗೆ ಜಯ

ಕ್ವಾಲಾಲಂಪುರ, ಮಲೇಷ್ಯಾ (ಪಿಟಿಐ): ಭಾರತದ ಪಿ.ವಿ.ಸಿಂಧು ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಜಯದ ಆರಂಭ ಮಾಡಿದರು. ಆದರೆ ಸೈನಾ ನೆಹ್ವಾಲ್ ಸತತ ಎರಡನೇ ಟೂರ್ನಿಯಲ್ಲಿ ಮೊದಲ ಸುತ್ತಿನ ತಡೆ ದಾಟುವಲ್ಲಿ ವಿಫಲರಾದರು.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಹಣಾಹಣಿಯಲ್ಲಿ 21-13, 17-21, 21-15ರಿಂದ ಚೀನಾದ ಹೆ ಬಿಂಗ್ ಜಿಯಾವೊ ಸವಾಲು ಮೀರಿದರು. ಜಿದ್ದಾಜಿದ್ದಿನ ಈ ಪಂದ್ಯದಲ್ಲಿ ಗೆಲ್ಲುವ ಮೂಲಕ ಇಂಡೊನೇಷ್ಯಾ ಓಪನ್ ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲೇ ಅನುಭವಿಸಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಂಡರು. ಆ ಸೆಣಸಾಟದಲ್ಲಿ ಬಿಂಗ್ ಜಿಯಾವೊ ನೇರ ಸೆಟ್‌ಗಳಿಂದ ಭಾರತದ ಆಟಗಾರ್ತಿಗೆ ಸೋಲುಣಿಸಿದ್ದರು.

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ, ಮೊದಲ ಗೇಮ್ ಗೆದ್ದುಕೊಂಡರೂ 21-16, 17-21, 14-21ರಿಂದ ದಕ್ಷಿಣ ಕೊರಿಯಾದ ಕಿಮ್ ಗಾ ಯುನ್ ಎದುರಿನ ಪಂದ್ಯ ಕೈಚೆಲ್ಲಿದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಬಿ.ಸಾಯಿ ಪ್ರಣೀತ್ ಮತ್ತು ಪರುಪಳ್ಳಿ ಕಶ್ಯಪ್ ಕೂಡ ಎರಡನೇ ಸುತ್ತು ತಲುಪಿದರು. ಪ್ರಣೀತ್ ಅವರು 21-8, 21-9ರಿಂದ ಗ್ವಾಟೆಮಾಲಾದ ಕೆವಿನ್ ಕೊರ್ಡಾನ್ ಎದುರು ಗೆದ್ದರೆ, ಕಶ್ಯಪ್ 16-21, 21-16, 21-16ರಿಂದ ಇಂಡೊ ನೇಷ್ಯಾದ ಟಾಮಿ ಸುಗಿಯರ್ತೊ ಅವರನ್ನು ಮಣಿಸಿದರು.

ಸಮೀರ್ ವರ್ಮಾ ಮೊದಲ ಸುತ್ತಿನ ಹಣಾಹಣಿಯಲ್ಲಿ 21-10, 12-21, 14-21ರಿಂದ ಚೀನಾ ತೈಪೆಯ ಚೊ ಟಿಯೆನ್ ಚೆನ್ ಎದುರು ಮಣಿದರು.


ಪರುಪಳ್ಳಿ ಕಶ್ಯಪ್– ಪಿಟಿಐ ಚಿತ್ರ

ರ‍್ಯಾಂಕಿಂಗ್: 5ನೇ ಸ್ಥಾನಕ್ಕೆ ಪಂತ್; 13ಕ್ಕಿಳಿದ ಕೊಹ್ಲಿ

ದುಬೈ (ಪಿಟಿಐ): ಭಾರತ ತಂಡದ ರನ್ ಯಂತ್ರ ವಿರಾಟ್ ಕೊಹ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರ ಹತ್ತರಿಂದ ಹೊರಬಿದ್ದಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಅವರು ಕಂಡ ದೊಡ್ಡ ಕುಸಿತ ಇದಾಗಿದೆ.


ರಿಷಭ್ ಪಂತ್

ಆದರೆ, ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಐದನೇ ಸ್ಥಾನಕ್ಕೇರಿದ್ದಾರೆ.

ಭಾರತ ತಂಡದ ಮಾಜಿ ನಾಯಕ ಕೊಹ್ಲಿ ನಾಲ್ಕು ಸ್ಥಾನಗಳ ಕುಸಿತ ಕಂಡು, 13ನೇ ಸ್ಥಾನಕ್ಕಿಳಿದಿದ್ದಾರೆ. ಇಂಗ್ಲೆಂಡ್ ವಿರುದ್ಧ ಮಂಗಳವಾರ ಮುಕ್ತಾಯವಾದ ಟೆಸ್ಟ್ ಪಂದ್ಯದಲ್ಲಿಯೂ ಅವರು ವೈಫಲ್ಯ ಅನುಭವಿಸಿದ್ದರು.

ಪಂತ್ ಮೊದಲ ಇನಿಂಗ್ಸ್‌ನಲ್ಲಿ ಶತಕ ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಅರ್ಧಶತಕ ಬಾರಿಸಿದ್ದರು. ಇದೇ ಪಂದ್ಯದಲ್ಲಿ ಭರ್ಜರಿ ಶತಕ ಬಾರಿಸಿದ್ದ ಇಂಗ್ಲೆಂಡ್ ತಂಡದ ಜೋ ರೂಟ್ ಒಟ್ಟು 923 ಅಂಕಗಳೊಂದಿಗೆ ಅಗ್ರಸ್ಥಾನ ಗಳಿಸಿದ್ದಾರೆ. ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ್ದ ಜಾನಿ ಬೆಸ್ಟೊ 10ನೇ ಸ್ಥಾನಕ್ಕೇರಿದ್ದಾರೆ.

ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ ಮತ್ತು ಸ್ಟೀವ್ ಸ್ಮಿತ್ ಕ್ರಮವಾಗಿ ಎರಡು ಮತ್ತು 3ನೇ ಸ್ಥಾನ ಪಡೆದಿದ್ದಾರೆ.

ವಿಶ್ವಕಪ್ ಹಾಕಿ ಟೂರ್ನಿ: ನ್ಯೂಜಿಲೆಂಡ್ ತಂಡದ ಸವಾಲು

ಭಾರತಕ್ಕೆ ಗೆಲುವಿನ ವಿಶ್ವಾಸ

ಆ್ಯಮ್‌ಸ್ಟೆಲ್ವೀನ್, ನೆದರ್ಲೆಂಡ್ಸ್ (ಪಿಟಿಐ): ಭಾರತ ಮಹಿಳಾ ತಂಡವು ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಗುರುವಾರ ನ್ಯೂಜಿಲೆಂಡ್ ಸವಾಲು ಎದುರಿಸಲಿದೆ. ಕ್ವಾರ್ಟರ್‌ಫೈನಲ್ ಆಸೆ ಜೀವಂತವಾಗಿರಿಸಿಕೊಳ್ಳಲು ಈ ಪಂದ್ಯವನ್ನು ಸವಿತಾ ಪೂನಿಯಾ ಪಡೆ ಗೆಲ್ಲುವ ಅಗತ್ಯವಿದೆ.

ಕಳೆದ ವರ್ಷ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ನಾಲ್ಕನೇ ಸ್ಥಾನ ಗಳಿಸಿದ್ದ ಭಾರತ, ಈ ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಕ್ರಮವಾಗಿ ಇಂಗ್ಲೆಂಡ್ ಮತ್ತು ಚೀನಾ ಎದುರು 1–1ರಿಂದ ಡ್ರಾ ಸಾಧಿಸಿತ್ತು.

ಭಾರತ ತಂಡವು ಬಿ ಗುಂಪಿನಲ್ಲಿ ಸದ್ಯ ಮೂರನೇ ಸ್ಥಾನದಲ್ಲಿದೆ. ಎರಡನೇ ಸ್ಥಾನದಲ್ಲಿರುವ ಚೀನಾ ಮತ್ತು ಅಗ್ರಸ್ಥಾನದಲ್ಲಿರುವ ನ್ಯೂಜಿಲೆಂಡ್‌ಗಿಂತ ಎರಡು ಪಾಯಿಂಟ್ಸ್ ಹಿಂದಿದೆ.

ಟೂರ್ನಿಯಲ್ಲಿ ಒಟ್ಟು 16 ತಂಡಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದ್ದು, ಪ್ರತಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಂಡ ನೇರವಾಗಿ ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಪಡೆಯಲಿವೆ. ಎರಡು ಮತ್ತು 3ನೇ ಸ್ಥಾನ ಪಡೆಯುವ ತಂಡಗಳ ನಡುವಿನ ಹಣಾಹಣಿಯು, ಕ್ವಾರ್ಟರ್‌ಫೈನಲ್‌ನ ಇನ್ನುಳಿದ ನಾಲ್ಕು ಸ್ಥಾನಗಳನ್ನು ನಿರ್ಧರಿಸಲಿವೆ.

ಎಂಟರಘಟ್ಟಕ್ಕೆ ನೇರ ಪ್ರವೇಶ ಪಡೆಯುವ ಹಂಬಲದಲ್ಲಿರುವ ಭಾರತ, ಈ ಪಂದ್ಯದಲ್ಲಿ ಸ್ಪಷ್ಟ ಗೆಲುವು ದಾಖಲಿಸಬೇಕು. ಅಲ್ಲದೆ ಚೀನಾ ತಂಡವು ಇಂಗ್ಲೆಂಡ್ ಎದುರಿನ ಪಂದ್ಯ ದಲ್ಲಿ ಡ್ರಾ ಅಥವಾ ಸೋಲು ಕಾಣಬೇಕು.

ಪಂದ್ಯ ಆರಂಭ: ರಾತ್ರಿ 11

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್.


ಭಾರತ ತಂಡದ ಆಟಗಾರ್ತಿಯರು– ಪಿಟಿಐ ಚಿತ್ರ

ಫುಟ್‌ಬಾಲ್: ಯಂಗ್‌ಸ್ಟಾರ್‌ಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಸ್ಮಯಾ ಎಂ. ಗಳಿಸಿದ ನಾಲ್ಕು ಮತ್ತು ಯಶಸ್ವಿ ವಿ. ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಯಂಗ್‌ಸ್ಟಾರ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಬಿ ಡಿವಿಷನ್ ಮಹಿಳಾ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬುಧವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಯಂಗ್‌ಸ್ಟಾರ್ 10–0ಯಿಂದ ಜಿಆರ್‌ಕೆ ಗರ್ಲ್ಸ್ ತಂಡದ ಎದುರು ಗೆದ್ದಿತು. ಯಶಸ್ವಿ 2, 15 ಮತ್ತು 24ನೇ ನಿಮಿಷಗಳಲ್ಲಿ ಮತ್ತು ವಿಸ್ಮಯಾ 8, 16, 17 ಮತ್ತು 20ನೇ ನಿಮಿಷಗಳಲ್ಲಿ ಗೋಲು ಹೊಡೆದರು. ಮಿಚೆಲ್ಲೆ ಡೇವಿಡ್ಸನ್ (6ನೇ ನಿಮಿಷ), ದಿವ್ಯಾ ಮಗೇಶ್ವರನ್ (11ನೇ ನಿ.) ಮತ್ತು ಅವುಲಾ ಸುವರ್ಣ (12ನೇ ನಿಮಿಷ) ವಿಜೇತ ತಂಡಕ್ಕಾಗಿ ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ 1–0ಯಿಂದ ಟೆಕ್ನಿಕೊ ಫುಟ್‌ಬಾಲ್ ಫೌಂಡೇಷನ್ ಎದುರು ಗೆದ್ದಿತು. ಲೆಜೆಂಡ್ಸ್ ಪರ ಡಿ. ಶ್ವೇತಾ (3ನೇ ನಿ.) ಗೋಲು ಹೊಡೆದರು.

‘ಅನುಚಿತ ವರ್ತನೆ’; ಆರೋಪ ಅಲ್ಲಗಳೆದ ಅಂಬ್ರೋಸ್

ನವದೆಹಲಿ (ಪಿಟಿಐ): ಭಾರತ 17 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ತಂಡದ ಆಟಗಾರ್ತಿಯ ಜತೆ ಅನುಚಿತ ವರ್ತನೆ ತೋರಿದ ಹಿನ್ನೆಲೆಯಲ್ಲಿ ಅಮಾನತುಗೊಂಡಿರುವ ಸಹಾಯಕ ಕೋಚ್ ಅಲೆಕ್ಸ್ ಅಂಬ್ರೋಸ್ ತಮ್ಮ ಮೇಲಿನ ಆರೋಪವನ್ನು ಅಲ್ಲಗಳೆದಿದ್ದಾರೆ.

ತಂಡದ ಯೂರೋಪ್ ಪ್ರವಾಸದ ವೇಳೆ ಅಂಬ್ರೋಸ್ ಮೇಲೆ ಈ ಆರೋಪ ಕೇಳಿಬಂದಿತ್ತು. ತಮ್ಮ ಮೇಲೆ ಸುಳ್ಳು ಆರೋಪ ಮಾಡಲಾಗಿದೆ ಎಂದಿರುವ ಅವರು ವಕೀಲರ ಮೂಲಕ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ ನೋಟಿಸ್ ಕಳುಹಿಸಿದ್ದಾರೆ.

ಕಾಮನ್‌ವೆಲ್ತ್ ಕೂಟ: ಭಾರತ ತಂಡಕ್ಕೆ ಶಂಕರ್

ನವದೆಹಲಿ(ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲಿರುವ ಭಾರತದ ಅಥ್ಲೆಟಿಕ್ಸ್ ತಂಡದಲ್ಲಿ ಹೈಜಂಪ್ ಅಥ್ಲೀಟ್ ತೇಜಸ್ವಿನ್ ಶಂಕರ್ ಅವರನ್ನು ಸೇರ್ಪಡೆ ಮಾಡಲಾಗಿದೆ ಎಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಶಂಕರ್ ಅವರನ್ನು ತಂಡದಿಂದ ಕೈಬಿಟ್ಟಿದ್ದನ್ನು ಪ್ರಶ್ನಿಸಿ ಸಲ್ಲಿಸಿರುವ ದೂರಿನ ವಿಚಾರಣೆಯನ್ನು ನ್ಯಾಯಮೂರ್ತಿ ಯಶವಂತ್ ವರ್ಮಾ ನಡೆಸುತ್ತಿದ್ದಾರೆ. ಆಯ್ಕೆ ಪ್ರಕ್ರಿಯೆ ಮತ್ತು ಶಂಕರ್ ಅವರನ್ನು ಕೈಬಿಟ್ಟಿದ್ದರ ಕುರಿತು ವಿವರಣೆಯನ್ನು ಕೇಳಿದ್ದರು.

‘ರಿಲೆ ತಂಡದಲ್ಲಿ ಒಬ್ಬ ಅಥ್ಲೀಟ್ ಅನರ್ಹಗೊಂಡಿದ್ದಾರೆ. ಆದ್ದರಿಂದ ಒಂದು ಸ್ಥಾನ ತೆರವಾಗಿದೆ. ಆದ್ದರಿಂದ ತೇಜಸ್ವಿನ್ ಶಂಕರ್ ಅವರನ್ನು ಆ ಜಾಗಕ್ಕೆ ಸೇರ್ಪಡೆ ಮಾಡಲು ಅವಕಾಶ ಲಭಿಸಿದೆ’ ಎಂದು ಎಎಫ್‌ಐ ಪರ ವಕೀಲರು ನ್ಯಾಯಪೀಠದ ಮುಂದೆ ವಿವರಣೆ ನೀಡಿದರು.

ಇದೇ 28 ರಿಂದ ಆಗಸ್ಟ್ 8ರವರೆಗೆ ಬರ್ಮಿಂಗ್‌ಹ್ಯಾಮ್‌ನಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ಹಾಕಿ: ಹರೀಶ್ ಏಳು ಗೋಲು

ಬೆಂಗಳೂರು: ಹರೀಶ್ ಮುತಗಾರ ಗಳಿಸಿದ ಅಮೋಘ ಏಳು ಗೋಲು ಗೋಲುಗಳ ಬಲದಿಂದ ಡಿವೈಇಎಸ್ ‘ಎ’ ತಂಡವು ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅಂಗಣದಲ್ಲಿ ಬುಧವಾರ ಆರಂಭವಾದ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಡಿವೈಇಎಸ್ ‘ಎ’ 13–1ರಿಂದ ಪೋಸ್ಟಲ್ ತಂಡವನ್ನು ಪರಾಭವಗೊಳಿಸಿತು.ಹರೀಶ್ 8, 18, 30, 39, 43, 45 ಮತ್ತು 57ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ಮಜ್ಜಿ ಗಣೇಶ್ (37, 41 ಮತ್ತು 60ನೇ ನಿ.), ಮಣಿಕಂಠ (12ನೇ ನಿ.), ಆರ್ಯನ್ ಉತ್ತಪ್ಪ (52ನೇ ನಿ.) ಮತ್ತು ಪ್ರಣಾಮ್ ಗೌಡ (55ನೇ ನಿಮಿಷ) ವಿಜೇತ ತಂಡದ ಪರ ಮಿಂಚಿದರು. ಪೋಸ್ಟಲ್ ಪರ ಹರ್ಷ ಎಸ್. (59ನೇ ನಿ.) ಒಂದು ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ 8–3ರಿಂದ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ತಂಡವನ್ನು ಮಣಿಸಿತು. ವಿಜೇತ ತಂಡದ ಮಣಿ (24, 40 ಮತ್ತು 45ನೇ ನಿ.) ಹ್ಯಾಟ್ರಿಕ್ ಗೋಲು ಗಳಿಸಿದರು.

ಲಾಂಗ್‌ಜಂಪ್ ಅಥ್ಲೀಟ್ ರೋಜಸ್‌ಗೆ ನಿರ್ಬಂಧ

ಲಂಡನ್ (ರಾಯಿಟರ್ಸ್): ವೆನೆಜುವೆಲಾದ ಲಾಂಗ್‌ಜಂಪ್ ಅಥ್ಲೀಟ್ ಯುಲಿಮಾರ್ ರೋಜಸ್ ಇದೇ ತಿಂಗಳು ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸುವ ಅರ್ಹತೆ ಕಳೆದುಕೊಂಡಿದ್ದಾರೆ.

ಅವರು ವಿಶ್ವ ಚಾಂಪಿಯನ್‌ಷಿಪ್ ಸ್ಪರ್ಧೆಯ ಅರ್ಹತೆ ಯನ್ನೂ (6.93 ಮೀ) ಯಶಸ್ವಿಯಾಗಿ ತಲುಪಿದ್ದಾರೆ. ಆದರೆ, ಮಾನ್ಯತೆ ಪಡೆಯದ ಬೂಟುಗಳನ್ನು ಧರಿಸಿ, ಸ್ಪರ್ಧಿಸಿದ್ದು ಅವರಿಗೆ ಮುಳುವಾಗಿದೆ.

‘ರೋಜಸ್ ಲಾಂಗ್ ಜಂಪ್ ಅರ್ಹತಾ ಸುತ್ತಿನಲ್ಲಿ ಬಳಸಿದ ಬೂಟು ಟ್ರಿಪಲ್ ಜಂಪ್‌ನದ್ದಾಗಿತ್ತು. ಲಾಂಗ್ ಜಂಪ್‌ಗೆ ಧರಿಸಿದ ಬೂಟಿನ ಸೋಲ್ 20 ಮಿಲಿಮೀಟರ್ ದಪ್ಪ ಇರಬೇಕು. ಆದರೆ, ಅವರು ಬಳಸಿದ ಬೂಟು 25 ಮೀಲಿಮೀಟರ್ ಸೋಲ್‌ನದ್ದಾಗಿತ್ತು. ಇದು ನಿಯಮ ಉಲ್ಲಂಘನೆ’ ಎಂದು ವಿಶ್ವ ಅಥ್ಲೆಟಿಕ್ಸ್ ಆಡಳಿತ ಮಂಡಳಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕ್ವಾರ್ಟರ್ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಮುಂಬೈಗೆ ಸೋಲು

ಕೊಕ್ಕೊ: ಸೆಮಿಫೈನಲ್‌ಗೆ ಮೈಸೂರು

● ಮೋಹನ್ ಕುಮಾರ ಸಿ.

ಮುಖ್ಯಾಂಶಗಳು

- ಸೆಮಿಫೈನಲ್ ಹಣಾಹಣಿ ಇಂದು,ಸಂಜೆ ಫೈನಲ್
- ಮೈಸೂರು– ಔರಂಗಾಬಾದ್ ಮುಖಾಮುಖಿ

ಮೈಸೂರು: ಆತಿಥೇಯ ಮೈಸೂರು ವಿಶ್ವವಿದ್ಯಾಲಯ ತಂಡವು ಬುಧವಾರ ನಡೆದ ಅಖಿಲ ಭಾರತ ಅಂತರ ವಿಶ್ವ-ವಿದ್ಯಾಲಯಗಳ ಮಹಿಳಾ ಕೊಕ್ಕೊ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಮುಂಬೈ ವಿ.ವಿ ತಂಡವನ್ನು 9–7ರಿಂದ ಮಣಿಸಿ ನಾಲ್ಕರ ಘಟ್ಟ ಪ್ರವೇಶಿಸಿತು.

ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ರೋಚಕ ಹಣಾಹಣಿಯಲ್ಲಿ ಮೈಸೂರು ತಂಡದ ಎಲ್.ಮೋನಿಕಾ ಎರಡೂ ಸುತ್ತುಗಳ ಚೇಸಿಂಗ್‌ನಲ್ಲಿ ಮುಂಬೈನ ಆರು ಮಂದಿಯನ್ನು ಔಟ್ ಮಾಡುವ ಮೂಲಕ ನಾಲ್ಕರ ಹಂತ ಪ್ರವೇಶಿಸಲು ಕಾರಣರಾದರು.

ಮೊದಲ ಸುತ್ತಿನ ಡಿಫೆನ್ಸ್‌ನಲ್ಲಿ ಮೈಸೂರಿನ ಮೋನಿಕಾ, ತೇಜಸ್ವಿನಿ, ಚೈತ್ರಾ ಎದುರಾಳಿ ತಂಡವನ್ನು ಕಾಡಿದರು. ಮೂವರು ಕ್ರಮವಾಗಿ 1ನಿ, 30 ಸೆ, 4ನಿ,20ಸೆ, 3ನಿ,10ಸೆ ನಿಮಿಷ ಕಣದಲ್ಲಿದ್ದರು. ಮುಂಬೈನ ರೇಷ್ಮಾ ರಾಥೋಡ್, ಅಶ್ವಿನಿ ಪ್ರಭಾಕರ್, ಪೂಜಾ ಸಾಹೇಬ್ ತಲಾ 1 ಪಾಯಿಂಟ್ ತಂದು ಕೊಟ್ಟರು. ಚೇಸಿಂಗ್‌ನಲ್ಲಿ ಮೈಸೂರಿನ ಮೋನಿಕಾ 3 ಹಾಗೂ ಎಸ್.ಮೇಘನಾ 1 ಪಾಯಿಂಟ್‌ನ ಕಾಣಿಕೆಯಿಂದ ಮೈಸೂರು 4–3ರ ಮುನ್ನಡೆ ಪಡೆಯಿತು.

ಎರಡನೇ ಸುತ್ತಿನಲ್ಲಿ ಮೊನಿಕಾ, ತೇಜಸ್ವಿನಿ, ಚೈತ್ರಾ, ಅರ್ಪಿತಾ ಮತ್ತೆ ಉತ್ತಮವಾಗಿ ಡಿಫೆನ್ಸ್ ಮಾಡಿದರು. ಕ್ರಮವಾಗಿ 1.40 ನಿ., 3.40 ನಿ., 1.40, 1.50 ನಿಮಿಷ ಕಣದಲ್ಲಿದ್ದರು. ಕೊನೆ ಕ್ಷಣದಲ್ಲಿ ಅರ್ಪಿತಾ ಸುಲಭವಾಗಿ ಔಟ್ ಆಗುವ ಮೂಲಕ ನಿರಾಸೆ ಮೂಡಿಸಿದರು. ಮುಂಬೈನ ಅಶ್ವಿನಿ ಪ್ರಭಾಕರ್ 2, ಕಾಂಚನ್ ಠಾಕೂರ್ ಹಾಗೂ ರೂಪಾಲಿ ತಲಾ ಒಂದು ಪಾಯಿಂಟ್ ಗಿಟ್ಟಿಸಿ ತಂಡಕ್ಕೆ 4–7ರ ಮುನ್ನಡೆ ತಂದುಕೊಟ್ಟರು.

ಚೇಸಿಂಗ್‌ನಲ್ಲಿ ಮತ್ತೆ ಚುರುಕಿನ ನಡೆಗಳಿಂದ ಮೊನಿಕಾ 3 ಪಾಯಿಂಟ್ ತಂದುಕೊಟ್ಟು ತಂಡದ ಗೆಲುವನ್ನು ಖಾತರಿಪಡಿಸಿದರು. ಅಂತಿಮ ಮೂರು ನಿಮಿಷದಲ್ಲಿ ಬಿ.ಚೈತ್ರಾ, ಎಸ್.ಮೇಘನಾ ಮುಂಬೈನ ತಲಾ ಒಬ್ಬರನ್ನು ಔಟ್ ಮಾಡುವ ಮೂಲಕ 9–7ರ ರೋಚಕ ಗೆಲುವಿಗೆ ಕಾರಣರಾದರು.

ಅದಕ್ಕೂ ನಡೆದ ಲೀಗ್ ಹಂತದ ಮೂರನೇ ಪಂದ್ಯದಲ್ಲಿ ಮೈಸೂರು ವಿ.ವಿ ತಂಡ ಶಿವಾಜಿ ವಿಶ್ವವಿದ್ಯಾಲಯದ ವಿರುದ್ಧ 11–7ರಲ್ಲಿ ಜಯಿಸಿತು.

ಗುರುವಾರ ನಡೆಯುವ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಲವ್ಲಿ ಪ್ರೊಫೆಷನಲ್, ಎಂ.ಡಿಯು ರೋಹ್ಟಕ್, ಎರಡನೇ ಸೆಮಿಯಲ್ಲಿ ಮೈಸೂರು–ಡಾ.ಎ.ಎಂ.ಯು ಔರಂಗಾಬಾದ್ ಸೆಣಸಲಿವೆ. ಸಂಜೆ ಫೈನಲ್ ನಡೆಯಲಿದೆ.



ಕೊಲ್ಹಾಪುರದ ಶಿವಾಜಿ ವಿವಿ ತಂಡದ ವಿರುದ್ಧ ಮೈಸೂರು ವಿವಿ ಆಟಗಾರ್ತಿಯರ ಚೇಸಿಂಗ್

–ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ಚೆಸ್ ಕಾರ್ಯಾಗಾರ

ಬೆಂಗಳೂರು: ಶಿವಮೊಗ್ಗದ ಯಾದವ ಸ್ಕೂಲ್ ಆಫ್ ಚೆಸ್ ಸಂಸ್ಥೆಯು ರಾಜ್ಯದ ಪ್ರತಿ ತಾಲ್ಲೂಕುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಿಗೆ ಚೆಸ್ ಆಟದ ಕುರಿತು ಉಚಿತ ಕಾರ್ಯಾಗಾರ ಆಯೋಜಿಸಿದೆ.

ಹೆಚ್ಚಿನ ಮಾಹಿತಿಗೆ ಚೆಸ್ ತೀರ್ಪುಗಾರರಾದ ಪ್ರಾಣೇಶ್ ಯಾದವ್ (ಮೊ. ಸಂ.9242401702, 9743819678) ಅವರನ್ನು ಸಂಪರ್ಕಿಸಬೇಕು.



ಶಿಖರ್ ಧವನ್

ವಿಂಡೀಸ್ ಸರಣಿಗೆ ಶಿಖರ್ ಧವನ್ ನಾಯಕ

ನವದೆಹಲಿ (ಪಿಟಿಐ): ಆರಂಭಿಕ ಬ್ಯಾಟರ್ ಶಿಖರ್ ಧವನ್ ಅವರನ್ನು ವೆಸ್ಟ್ ಇಂಡೀಸ್ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಜುಲೈ 22ರಿಂದ ಟ್ರಿನಿಡಾಡ್‌ನ ಪೋರ್ಟ್ ಆಫ್ ಸ್ಪೇನ್‌ನ ಲ್ಲಿ ಸರಣಿ ಆರಂಭವಾಗಲಿದೆ. ಒಟ್ಟು ಮೂರು ಏಕದಿನ ಪಂದ್ಯಗಳು ನಡೆಯಲಿವೆ. ನಂತರ ನಡೆಯಲಿರುವ ಐದು ಟಿ20 ಪಂದ್ಯಗಳ ಸರಣಿಗೆ ಇನ್ನೂ ತಂಡ ಆಯ್ಕೆಯಾಗಿಲ್ಲ.

ರೋಹಿತ್ ಶರ್ಮಾ, ಜಸ್‌ಪ್ರೀತ್ ಬೂಮ್ರಾ, ವಿರಾಟ್ ಕೊಹ್ಲಿ, ರಿಷಭ್ ಪಂತ್ ಮತ್ತು ಹಾರ್ದಿಕ್ ಪಾಂಡ್ಯ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ತಂಡ: ಶಿಖರ್ ಧವನ್ (ನಾಯಕ), ರವೀಂದ್ರ ಜಡೇಜ (ಉಪನಾಯಕ), ಋತುರಾಜ್ ಗಾಯಕವಾಡ್, ಶುಭಮನ್ ಗಿಲ್, ದೀಪಕ್ ಹೂಡಾ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್, ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಆವೇಶ್ ಖಾನ್, ಪ್ರಸಿದ್ಧಕೃಷ್ಣ, ಮೊಹಮ್ಮದ್ ಸಿರಾಜ್. ಅರ್ಷದೀಪ್ ಸಿಂಗ್.

ಅಂಧರ ಕ್ರಿಕೆಟ್: ಎನ್‌ಟಿಟಿ ಪ್ರಾಯೋಜಕತ್ವ

ಬೆಂಗಳೂರು: ಅಂಧರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗಾಗಿ ಇಲ್ಲಿ ನಡೆಯಲಿರುವ ತರಬೇತಿ ಶಿಬಿರಕ್ಕೆ ಎನ್‌ಟಿಟಿ ಡೇಟಾ ಪ್ರಾಯೋಕತ್ವ ನೀಡಿದೆ. ಭಾರತ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಮತ್ತು ಸಮರ್ಥನಂ ಟ್ರಸ್ಟ್ ಈ ವಿಷಯ ತಿಳಿಸಿದೆ. ಇದೇ 11ರಿಂದ 56 ಮಂದಿ ಆಟಗಾರರು 12 ದಿನಗಳ ತರಬೇತಿ ನಡೆಸಲಿದ್ದಾರೆ